ಜನಶಕ್ತಿ

ಕನ್ನಡ ವಾರಪತ್ರಿಕೆ

Blog :janashakthi.wordpress.com e-mail : js_weekly@yahoo.com

ಸಂಪುಟ 6 ಸಂಚಿಕೆ 26
ಜೂನ್ 24, 2012

ಪುಟ 16 ರೂ. 5/-





'ಜಿಮ್'

ಹಣಕಾಸು ಬಂಡವಾಳದ ಕಾಲಿಗೆ ಶರಣು ಶರಣಾರ್ಥಿ !?

'ಮುಂದಿನ ಪ್ರಧಾನಿ' : ಆರೆಸ್ಸೆಸ್, ಬಿಜೆಪಿ ಗಾಳಿ ಗೋಪುರ





ಅರ್ಥಿಕ ಪ್ರಗತಿ ಅಸ್ಥಿರ ಜನರ ಬದುಕು ದುರ್ಭರ

ಪರಿಷತ್ ಚುನಾವಣೆ : ಎಚ್ಚರಿಕೆ ಗಂಟೆ

ವಿದೇಶಿ ವಿಶ್ವವಿದ್ಯಾಲಯಗಳು ಮತ್ತು ದೇಶದ ಸಾರ್ವಭೌಮತೆ

ಆಹಾರದ ಹಕ್ಕಿಗಾಗಿ ಸಿಪಿಐ(ಎಂ) ಆಂದೋಲನ

ಚಿಂತನೆ

21 ನೆಯ ಶತಮಾನದ ಸವಾಲು–ಅಗತ್ಯಗಳನ್ನು ಪೂರೈಸುವ ದೆಶೆಯಲ್ಲಿ ಇಡೀ ಶಿಕ್ಷಣ ರಂಗ ಮಾರ್ಪಾಡಾಗಬೇಕಿದೆ ಎನ್ನುವವರು ಶಿಕ್ಷಣ ರಂಗವನ್ನು ಯಾವ ದಿಕ್ಕಿಗೆ ಕೊಂಡೊಯ್ಯುತ್ತಿದ್ದಾರೆ? ಶಿಕ್ಷಣ ನಿಜಕ್ಕೂ ಎಲ್ಲರ ಸ್ವತ್ತಾಗುತ್ತಿದೆಯೇ ? ಅಥವಾ ಅಪಹರಿಸಲಾಗುತ್ತಿದೆಯೇ? ಶಿಕ್ಷಣ ರಂಗದಲ್ಲಿನ ಬದಲಾವಣೆ–ತಲ್ಲಣಗಳತ್ತ ಚಿಂತನೆಯ ನೋಟ ಹರಿಸುವ ಲೇಖನವಿಲ್ಲಿ.

ಭಾರತದಲ್ಲಿ ವಿದೇಶ–ಖಾಸಗಿ ವಿ.ವಿ. ಸ್ಥಾಪನೆ ಮತ್ತು ದೇಶದ ಸಾರ್ವಭೌಮತೆ

ಡಾ|| ಸಿ. ಚಂದ್ರಪ್ಪ

'ಉನ್ನತ ಶಿಕ್ಷಣದ ಸಮಕಾಲೀನ ಸಮಸ್ಯೆಗಳ' ಕುರಿತು ಮೇ 19, 2012 ರಂದು ಬೆಂಗಳೂರಿನ ಸೆನೆಟ್ ಹಾಲ್‌ನಲ್ಲಿ ಎಸ್‌ಎಫ್‌ಐ ಮತ್ತು ಬೆಂ.ವಿ.ವಿ.ಯ ವಿವಿಧ ವಿಭಾಗಗಳು ಜಂಟಿಯಾಗಿ ಸಂಘಟಿಸಿದ್ದ ರಾಜ್ಯ ಮಟ್ಟದ ವಿಶ್ವ ವಿದ್ಯಾಲಯ ವಿದ್ಯಾರ್ಥಿಗಳ ಸಮಾವೇಶದಲ್ಲಿ ಮಂಡಿಸಲಾದ ಪ್ರಬಂಧ

ಭಾರತದಲ್ಲಿ ಉನ್ನತ ಶಿಕ್ಷಣ ಪ್ರಾಚೀನ ಕಾಲದಿಂದಲೂ ಹೆಚ್ಚು ಮಹತ್ವ ಪಡೆದುಕೊಂಡ ಕ್ಷೇತ್ರ. ಪ್ರಾಚೀನ ಕಾಲದ ನಳಂದ, ತಕ್ಷಶೀಲ, ಕಂತಿ, ಓದಂಟಪುರಿ, ಉಜ್ಜಯಿನಿ, ಉನ್ನತ ಶಿಕ್ಷಣದ ಕೇಂದ್ರಗಳಾಗಿದ್ದವಲ್ಲದೆ ದೇಶ ವಿದೇಶದಿಂದ ವಿದ್ಯಾರ್ಥಿ ಮತ್ತು ಶಿಕ್ಷಕರನ್ನು ಆಕರ್ಷಿಸುತ್ತಿದ್ದವು. ಪ್ರಾಚೀನ ಕಾಲದಿಂದಲೂ ಉನ್ನತ ಶಿಕ್ಷಣ ಆಳುವ ವರ್ಗದ ಮತ್ತು ಶ್ರೀಮಂತರ ಹಿತಕ್ಕೆ ರಕ್ಷಣೆಗೆ ಮಾತ್ರ ಮೀಸಲಾಗಿತ್ತೇ ವಿನಃ ಸಾಮಾನ್ಯ ಜನರಿಗಲ್ಲ.

ಆಧುನಿಕ ಕಾಲದ ಬ್ರಿಟಿಷ್‌ರ ಉನ್ನತ ಶಿಕ್ಷಣ ಮುಕ್ತವಾಗಿ ನೀಡುವ ಉದ್ದೇಶದಿಂದ 1858ರಲ್ಲಿ ಕಲ್ಕತ್ತ, ಬಾಂಬೆ ಮತ್ತು ಮದ್ರಾಸ್ ಮೂರು ವಿಶ್ವವಿದ್ಯಾಲಯ ಭಾರತದಲ್ಲಿ ಆರಂಭಿಸಿದರು. 1916ರಲ್ಲಿ 16 ವಿಶ್ವವಿದ್ಯಾನಿಲಯ ಭಾರತದಲ್ಲಿ ಆರಂಭಿಸಿದರು. ಸ್ವಾತಂತ್ರ್ಯಾನಂತರ ಉನ್ನತ ಶಿಕ್ಷಣದ ಕ್ಷೇತ್ರ ವಿಶಾಲವಾಗಿ ವಿಸ್ತರಿಸಿತು.

1991 ರಿಂದ ಉನ್ನತ ಶಿಕ್ಷಣ ಸುಧಾರಣೆಗಳ ಬಗ್ಗೆ ಸಲಹೆ ನೀಡಿರುವ ಪ್ರತಿಯೊಂದು ವರದಿಗಳು ಖಾಸಗೀಕರಣ ಉದಾರೀಕರಣ ವಿದೇಶಿಕರಣಕ್ಕೆ ಆದ್ಯತೆ ನೀಡಿವೆ. 19 ನೇ ಶತಮಾನ ಕೃಷಿಯ ವಾಣಿಜ್ಯಕರಣಕ್ಕೆ ಪ್ರೋತ್ಸಾಹ ನೀಡಿದಂತೆ 21 ನೇ ಶತಮಾನ ಉನ್ನತ ಶಿಕ್ಷಣದ ಖಾಸಗೀಕರಣ ಮತ್ತು ವಾಣಿಜ್ಯಕರಣಕ್ಕೆ ರಾಜ್ಯ ಮತ್ತು ಕೇಂದ್ರ ಸರ್ಕಾರಗಳು ಮುಂದಾಗಿವೆ.


ಶಿಕ್ಷಣ, ಉದ್ಯೋಗ, ಆಹಾರ, ಆರೋಗ್ಯ ಮತ್ತು ವಸತಿ ಇವು ನಾಗರೀಕರ ಹಕ್ಕಾಗಬೇಕು ಎಂಬುದು 'ಕಲ್ಯಾಣ ರಾಜ್ಯದ' ಅಭಿಮಾತು. ಆದರೆ ಇಂದು ಕಲ್ಯಾಣ ರಾಜ್ಯಕ್ಕೆ ಖಾಸಗೀ ಮತ್ತು ವಿದೇಶಿ ಬಂಡವಾಳವನ್ನೇ ಈಗಾಗಲೇ ಶಾಸನ ಬದ್ಧಗೊಳಿಸಲು ಸರ್ಕಾರಗಳು ಮುಂದಾಗಿವೆ.

ಭಾರತದಲ್ಲಿ 'ಅಕ್ಷರ ದಾಸೋಹ' ಎಂಬ ಉಚಿತ ಶಿಕ್ಷಣದ ಕಲ್ಪನೆ ಇತ್ತು. ಆದರೆ ಇಂದು ಶಿಕ್ಷಣ ವ್ಯಾಪಾರವಾಗಿ ಸರಕಾಗಿ ಉದ್ಯಮೀಕರಣವಾಗುತ್ತಿದೆ.

ಇದಕ್ಕೆ ಶಿಕ್ಷಣದ ದೃಷ್ಟಿಕೋನದಲ್ಲಾದ ಬದಲಾವಣೆಯಾಗಿರುವುದು. ಭಾರತಕ್ಕೂ ಶಿಕ್ಷಣ, 'ಪಠ್ಯಕ್ರಮ' ಬೇರೆ ಬೇರೆಯಾಗಿ ಅಂದರೆ ಖಾಸಗಿ ಸರ್ಕಾರಿ, ವಿದೇಶಿಯಾಗಿ ರೂಪಗೊಂಡು ವಿವಿಧ ಮಾದರಿಯ ಶಿಕ್ಷಣ ಲಭ್ಯವಾಗುತ್ತಿದೆ. ಸ್ವದೇಶಿ ಶಿಕ್ಷಣದಲ್ಲಿ ವಿದೇಶಿ ಸಂಸ್ಕೃತಿ ಬೋಧಿಸಲಾಗುತ್ತದೆ. ಆರ್ಥಿಕ ನಾಯಕತ್ವ ಶಿಕ್ಷಣದಲ್ಲೂ ಹೆಚ್ಚಾಗುತ್ತಿದೆ. ಶಿಕ್ಷಣದಲ್ಲಿ ಅಮೇರಿಕ ಐರೋಪ್ಯ ರಾಷ್ಟ್ರಗಳ ಪ್ರಭಾವ ಹೆಚ್ಚಾಗುತ್ತಿದೆ. ಕೃಷಿ ಉತ್ಪನ್ನಕ್ಕೆ ಜಾಗತಿಕ ಮಾರುಕಟ್ಟೆ ಲಭ್ಯವಿಲ್ಲ. ಉಳಿದಂತೆ ಜಾಗತಿಕ ಮಾರುಕಟ್ಟೆಗೆ ಬೆಂಬಲ ಸಿಗುತ್ತಿದೆ.

ಕೇಂದ್ರ ರಾಜ್ಯ ಸರ್ಕಾರಗಳು ಉನ್ನತ ಶಿಕ್ಷಣವನ್ನು ಖಾಸಗಿ ಮತ್ತು ವಿದೇಶಿ ವಿ.ವಿ.ಗಳಿಗೆ ಮುಕ್ತಗೊಳಿಸಿವೆ. ಇದಕ್ಕೆ ಸರ್ಕಾರಗಳು ಕೇಂದ್ರೀಕೃತ ಸಮರ್ಥನೆ ವಾದವನ್ನು ಮುಂದಿಟ್ಟಿವೆ.

1. ಪ್ರಸ್ತುತ ಶೇ. 11 ಇರುವ ಉನ್ನತ ಶಿಕ್ಷಣದಲ್ಲಿನ ವಿದ್ಯಾರ್ಥಿಗಳ ಪ್ರಮಾಣವನ್ನು 2025ರ ವೇಳೆಗೆ ಶೇ. 30 ಕ್ಕೆ ಹೆಚ್ಚಿಸುವುದು.
2. ಖಾಸಗಿ ಮತ್ತು ವಿದೇಶಿ ವಿ.ವಿ.ಯಿಂದ ಭಾರತದ ಉನ್ನತ ಶಿಕ್ಷಣದ ಗುಣಮಟ್ಟ ಹೆಚ್ಚುತ್ತದೆ.
3. ಭಾರತದಲ್ಲಿ ವಿದೇಶಿ ವಿ.ವಿ.ಯ ಕ್ಯಾಂಪಸ್ ತೆರೆದರೆ ಲಕ್ಷಾಂತರ ಡಾಲರ್ ಮೌಲ್ಯದ ವಿದೇಶಿ ವಿನಿಮಯ ವೆಚ್ಚ ಉಳಿಸಬಹುದು. ವರ್ಷಕ್ಕೆ 35,000 ಕೋಟಿ ಹಣ ಉಳಿಯುತ್ತದೆ.
4. ಭಾರತದ ಸರ್ಕಾರದಲ್ಲಿ ಹಣವಿಲ್ಲದಿರುವುದರಿಂದ ಖಾಸಗಿ ವಿದೇಶಿ ಸಂಸ್ಥೆಗಳ ಪ್ರವೇಶ ಅನಿವಾರ್ಯ.
5. 10ನೇ ತರಗತಿ ಪೂರೈಸಿದವರಲ್ಲಿ ಶೇ 10% ರಷ್ಟು ಮಕ್ಕಳು ಉನ್ನತ ಶಿಕ್ಷಣ ಹಂತ ತಲುಪದಿರುವುದು ಚಿಂತನಾರ್ಹ ವಿಷಯ.
6. ಸರ್ಕಾರಿ–ಖಾಸಗಿ ಸಹಬಾಗಿತ್ವ ಯೋಜನೆಯಿಂದ 40 ದಶಲಕ್ಷಕ್ಕೂ ಹೆಚ್ಚು ವಿದ್ಯಾರ್ಥಿಗಳಿಗೆ ಉನ್ನತ ಶಿಕ್ಷಣ ದೊರೆಯಲಿದೆ.



ಭಾರತದಲ್ಲಿ ಉನ್ನತ ಶಿಕ್ಷಣದ ಬೆಳವಣಿಗೆ.

ವರ್ಷ	ಸಾಮಾನ್ಯ ಶಿಕ್ಷಣ	ವೃತ್ತಿ ಶಿಕ್ಷಣ	ಒಟ್ಟು ಕಾಲೇಜು	ವಿಶ್ವ ವಿದ್ಯಾನಿಲಯಗಳು	ದಾಖಲಾತಿ ಮಿಲಿಯನ್
1947–48	–	–	516	20	0.2
1950–51	370	208	578	28	0.2
1960–61	967	852	1819	45	0.6
1970–71	2285	992	3277	93	2.0
1980–81	3421	1156	4577	123	2.8
1990–91.	4862	1765	6627	184	4.4
2000–01	7929	2223	10152	254	8.6
2007–08	10337	5632	18064	421	11.8

ಈಗಿನ ಡೀಮ್ (ಪರಿಭಾವಿತ) ವಿಶ್ವವಿದ್ಯಾಲಯಗಳು

	ಭಾರತ	ಕರ್ನಾಟಕ
ಖಾಸಗಿ	86	12
ಸರ್ಕಾರಿ	41	03
ಒಟ್ಟು	127	15

ಪ್ರಸ್ತುತ ಕರ್ನಾಟಕ ಸರ್ಕಾರ ಸಾಮಾನ್ಯ ಜನರ ಬದುಕಿಗೆ ಸಂಬಂಧಪಟ್ಟಂಥ ಹಲವಾರು ಕಾಯಿದೆಗಳು ಇನ್ನು ಸದನದಲ್ಲಿರುವಾಗಲೇ ದಿಡೀರನೇ ಅಜೀಂ ಪ್ರೇಮ್‌ಜಿ ವಿಶ್ವವಿದ್ಯಾಲಯ ಮಸೂದೆಯನ್ನು ಬಿಜೆಪಿ ಸರ್ಕಾರ ಸದನದಲ್ಲಿ ಮಂಡಿಸಿ. ಹೆಚ್ಚಿನ ಚರ್ಚೆಯೂ ಇಲ್ಲದೆ ಧ್ವನಿ ಮತದ ಅನುಮೋದನೆ ಪಡೆಯಿತು. ಈ ಮಸೂದೆಯಿಂದ ಜಾರಿಗೆ ಬರಲಿರುವ ಖಾಸಗಿ ವಿಶ್ವವಿದ್ಯಾಲಯಗಳು ಉನ್ನತ ಶಿಕ್ಷಣದಲ್ಲಿ ಕಳೆದೆರಡು ದಶಕಗಳಿಂದ ನಡೆಯುತ್ತಾ ಬಂದಿರುವ ವಾಣಿಜ್ಯೀಕರಣದ ಉತ್ತುಂಗ.

ಖಾಸಗಿ ವಿಶ್ವವಿದ್ಯಾಲಯದಲ್ಲಿ ಆಡಳಿತಾತ್ಮಕ ಪ್ರಜಾತಂತ್ರವಾಗಲೀ, ಶೈಕ್ಷಣಿಕ ಬದ್ಧತೆಯಾಗಲೀ, ಸಾಮಾನ್ಯ ವಿದ್ಯಾರ್ಥಿಗಳ ಹಿತಾಸಕ್ತಿಯನ್ನಾಗಲೀ ನಿರೀಕ್ಷಿಸಲೂ ಸಾಧ್ಯವಿಲ್ಲ. ಇದು ಕೆಳಗಿನ ಅಂಶದಲ್ಲಿ ಸ್ಪಷ್ಟವಾಗುತ್ತದೆ.

ಅಜೀಂ ಪ್ರೇಮ್‌ಜಿ ವಿ.ವಿ. 2010 ಮಸೂದೆಯಲ್ಲಿರುವ ಕೆಲವು ಅಂಶಗಳು :

1. ಸೆಕ್ಷನ್ 5ರ ಪ್ರಕಾರ ವಿ.ವಿ. ಸರ್ಕಾರದಿಂದ ಧನ ಸಹಾಯ ಕೇಳುವಂತಿಲ್ಲ. ಅದಾಗ್ಯೂ ಸರ್ಕಾರವೇ ಶೈಕ್ಷಣಿಕ ಉದ್ದೇಶದಿಂದ ಸಂಶೋಧನೆಗೆ ಹಣಕಾಸು ಸಹಾಯ ಮಾಡಬಹುದು.
2. ಸೆಕ್ಸೆನ್ 9ರ ಪ್ರಕಾರ ಎಲ್ಲಾ ಜಾತಿ, ವರ್ಗ, ಲಿಂಗದವರಿಗೂ ಪ್ರವೇಶ ಮುಕ್ತ. ಹೇಳುತ್ತಲೇ ಶೇ 25% ರಷ್ಟು ಸೀಟು ಕರ್ನಾಟಕದವರಿಗೆ ಮೀಸಲು, ಆದಾಗ್ಯೂ ವಿದ್ಯಾರ್ಥಿಗಳಲ್ಲಿ ಪ್ರವೇಶದ ಅರ್ಹತೆಗೆ ಬೇಕಾಗುವ ಮಾನದಂಡ ಇಲ್ಲದೆ ಹೋದಲ್ಲಿ ಬೇರೆಯವರಿಗೆ, ವಿದೇಶಿಯರಿಗೆ ಪ್ರವೇಶ ನೀಡಬಹುದು.
3. ಸೆಕ್ಸೆನ್ 11 ಪರಮಾಧಿಕಾರ ವಿ.ವಿ.ಯ ಪ್ರಾಯೋಜಿಕ ಸಂಸ್ಥೆ "Sponsoring body" ಇವರೇ ಅಜೀಂ ಪ್ರೇಮ್‌ಜಿ ಪ್ರತಿಷ್ಠಾನದ ಅಧ್ಯಕ್ಷರೇ ವಿ.ವಿ.ಯ ಕುಲಪತಿ, ಉಪಕುಲಪತಿ, ಆಡಳಿತ ಸಮಿತಿ, ಶೈಕ್ಷಣಿಕ ಸಮಿತಿಗೆ ಎಲ್ಲಾ ನೇಮಕ ಮಾಡುವರು. ಸಿಂಡಿಕೇಟ್ ಮತ್ತು ಸೆನೆಟ್‌ಗೆ ಅವಕಾಶವಿಲ್ಲ.
4. ಸೆಕ್ಸೆನ್ 14ರ ಪ್ರಕಾರ ಕುಲಪತಿ ಪ್ರಾಯೋಜಕ ಸಂಸ್ಥೆಯ ಅಧ್ಯಕ್ಷರು ಅಂದರೆ ಅಜೀಂ ಪ್ರೇಮ್‌ಜಿ 14(1)ರ ಪ್ರಕಾರ ಕುಲಪತಿ ಅಧಿಕಾರ ಅವಧಿ ಅವರ ಜೀವಿತಾವಧಿಯವರೆಗೆ ಇರುತ್ತದೆ. ನಂತರ ಅವರ ಮಕ್ಕಳು, ಮೊಮ್ಮಕ್ಕಳು ರಕ್ತ ಸಂಬಂಧಿಗಳು ಕುಲಪತಿಗಳಾಗುತ್ತಾರೆ.
5. ಸೆಕ್ಸೆನ್ 13 ರ ಪ್ರಕಾರ ವಿ.ವಿ.ಗೆ ರಾಜ್ಯಪಾಲರು ಕೇವಲ ಸಂದರ್ಶಕರು. ಘಟಿಕೋತ್ಸವದ ಅಧ್ಯಕ್ಷತೆ ವಹಿಸಬಹುದು. ವಿ.ವಿ. ಕಾಗದ ಪತ್ರ ಪರಿಶೀಲಿಸಬಹುದು ಅಥವಾ ಮರು ಪರಿಶೀಲಿಸಲು ಹೇಳಬಹುದು ಅಷ್ಟೇ.

ಆದರೆ ಸರ್ಕಾರಿ ವಿ.ವಿ. ಗಳಲ್ಲಿ ಆಡಳಿತಾತ್ಮಕ ಮತ್ತು ಶೈಕ್ಷಣಿಕ ಪರಮೋಚ್ಚ ಅಧಿಕಾರಿ

ಪುಟ 14 ಕ್ಕೆ

ಸಂಪಾದಕೀಯ

ಎಚ್ಚರಿಕೆಯ ಗಂಟೆ

ಶಿಕ್ಷಕರ ಮತ್ತು ಪಧವೀದರರ ಕ್ಷೇತ್ರಗಳಿಂದ ಆರು ವಿಧಾನ ಪರಿಷತ್ ಸ್ಥಾನಗಳಿಗೆ ನಡೆದ ಚುನಾವಣೆಯಲ್ಲಿ ಅಧಿಕಾರರೂಡ ಬಿಜೆಪಿ ಪಕ್ಷವು ಐದು ಸ್ಥಾನಗಳಲ್ಲಿ ಗೆಲುವು ಪಡೆದಿರುವುದು ಎಚ್ಚರಿಕೆಯ ಗಂಟೆಯಾಗಿದೆ. ಇಷ್ಟೆಲ್ಲಾ ಹಗರಣ, ದುರಾಡಳಿತದ ನಡುವೆ ಅದರ ಗೆಲುವು ಪ್ರಯಾಸದಿಂದಲೇ ಬಂದಿದೆಯಾದರೂ ಈ ವಿಭಾಗಗಳ ನಡುವೆ ಭ್ರಮೆ ಉಳಿಸಿಕೊಳ್ಳುವ, ಇನ್ನೂ ಅದಕ್ಕೆ ಇರುವ ಬೆಂಬಲದ ಸೂಚಕವೂ ಆಗಿದೆ. ಜೆಡಿ-ಎಸ್ ತನ್ನ ಒಂದು ಸ್ಥಾನ ಉಳಿಸಿಕೊಂಡಿದೆ ಮಾತ್ರವಲ್ಲ ಬಿಜೆಪಿ ನಂತರ ಅದು ಎರಡನೇ ಸ್ಥಾನದಲ್ಲಿ ನಿಂತಿದೆ. ಪ್ರಧಾನವಾಗಿ ದಕ್ಷಿಣ ಕರ್ನಾಟಕದಲ್ಲಿ ನೆಲೆಯನ್ನು ಆಧರಿಸಿದೆ. ಅಧಿಕಾರಕ್ಕೆ ಇನ್ನೇನು ಮೂರೆ ಗೇಣು ಎಂಬ ಭ್ರಮೆಯಲ್ಲಿರುವ ಕಾಂಗ್ರೆಸ್ ಮೂರನೆಯ ಹಲವೆಡೆ ಅದಕ್ಕೂ ಕೆಳಗಿನ ಸ್ಥಾನ ಪಡೆದು ದಯನೀಯ ಸೋಲನ್ನು ಅಪ್ಪಿಕೊಂಡಿದೆ. ಕಾಂಗ್ರೆಸ್ ಪಕ್ಷವು ಜನರ ಮನಸ್ಸನ್ನು ಗೆಲ್ಲಲು ಸಾಧ್ಯವಾಗಿಲ್ಲವೆಂಬುದು ಹಿಂದಿನ ಚುನಾವಣೆಗಳಂತೆ ಈಗಲೂ ಸಾಬೀತಾಗಿದೆ. ಜನತೆ ರಾಜ್ಯದಲ್ಲಿ ಅದರ ರಾಜಕೀಯ ನಿಷ್ಕ್ರಿಯತೆಗೆ ,ಕೇಂದ್ರದ ಜನವಿರೋಧಿ ನೀತಿಗಳ ವಿರುದ್ಧ ಆಕ್ರೋಶ ವ್ಯಕ್ತಪಡಿಸಿದ್ದಾರೆ. ಬೆಂಗಳೂರು ಪದವೀಧರ ಕ್ಷೇತ್ರದಲ್ಲಿ ಸ್ಪರ್ದಿಸಿದ್ದ ಎಡ ಪಕ್ಷಗಳ ಬೆಂಬಲಿತ ಸಿಪಿಐ(ಎಂ) ಅಭ್ಯರ್ಥಿ ಗಮನಾರ್ಹ ಪ್ರಚಾರ ಬೆಂಬಲದ ನಡುವೆಯೂ ಬಂಡವಾಳಶಾಹಿ ರಾಜಕಾರಣದ ಅಬ್ಬರದಿಂದ ಗೆಲ್ಲಲಿಲ್ಲ.

ಇಲ್ಲಿ ಬಿಜೆಪಿ ಐದರಲ್ಲಿ ಗೆದ್ದಿದೆಯೆಂದರೂ ಅದಕ್ಕೆ ಗೆಲುವು ಅಷ್ಟು ಸುಲಭದಿಂದ ಸಿಕ್ಕಿಲ್ಲ ವೆಂಬುದನ್ನೂ ಗಮನಿಸಬೇಕು. ವಿರೋಧ ಪಕ್ಷಗಳ ವೈಫಲ್ಯವನ್ನು ಅದು ಒಂದೆಡೆ ಬಳಸಿದೆ. ವಿಶೇಷವಾಗಿ ಆಳುವ ಪಕ್ಷವಾಗಿ ಸರಕಾರಿ ಹಾಗೂ ಖಾಸಗಿ ಶಿಕ್ಷಣ ಸಂಸ್ಥೆಗಳನ್ನು, ಮಠ ಮಾನ್ಯಗಳ ಮೇಲಿನ ಹಿಡಿತವನ್ನೂ ಬಳಸಿಕೊಂಡಿದೆ. ಯಥೇಚ್ಛವಾಗಿ ಹಣ ಮತ್ತು ಜಾತಿಯನ್ನು ಉಪಯೋಗಿಸಿದೆ, ಅಲ್ಲದೇ ಅಕ್ರಮ ಮತದಾರರನ್ನು, ಮತಗಳನ್ನು ಆಡಳಿತ ಯಂತ್ರದ ದುರ್ಬಳಕೆಯಿಂದ ಅತ್ಯಂತ ವ್ಯವಸ್ಥಿತವಾಗಿ ಮಾಡಿದೆ. ಹೀಗಿದ್ದರೂ ಬೆಂಗಳೂರು ಪದವೀಧರ ಕ್ಷೇತ್ರದಲ್ಲಿ ಬಿಜೆಪಿಯ ಕಳಂಕಿತ ಮಾಜಿ ಸಚಿವ ರಾಮಚಂದ್ರಗೌಡರು ಆಯ್ಕೆಯಾಗಲು ಅತ್ಯಂತ ಪ್ರಯಾಸ ಪಡಬೇಕಾಯಿತು. ಅದೂ ಸಹ ಲೋಕಸತ್ತಾ ಪಕ್ಷದ ಅಭ್ಯರ್ಥಿಯ ಕೊಡುಗೆಯಿಂದ. ಎಲ್ಲದರಂತೆ ಇಲ್ಲೂ ಜಾತಿ ಮತ್ತು ಹಣ ಪರಿಣಾಮಕಾರಿ ಪಾತ್ರ ವಹಿಸಿದೆ.

ಇಲ್ಲಿ ಮಧ್ಯಮ ವರ್ಗವೇ ಪ್ರಧಾನವಾಗಿರುವ ಚುನಾವಣೆಯಲ್ಲಿ ಕಡಿಮೆ ಪ್ರಮಾಣದ ಮತದಾನವು ಜನತೆಯಲ್ಲಿನ ನಿರುತ್ಸಾಹವನ್ನು, ಆಮೂಲಕ ಇಂದಿನ ರಾಜಕೀಯ ಸನ್ನಿವೇಶದ ಬಗೆಗಿನ ಸಿನಿಕತನವನ್ನೂ ತೋರಿಸುತ್ತದೆ.

ಈ ಚುನಾವಣೆಯಲ್ಲಿ ಮುಖ್ಯವಾಗಿ ಬೆಂಗಳೂರು ಪದವೀಧರ ಕ್ಷೇತ್ರದಲ್ಲಿ ಲೋಕಸತ್ತಾ ಪಕ್ಷ ಪಡೆದ ಮತಗಳು ಹಾಗೂ ಅದು ವಹಿಸಿದ ಪಾತ್ರವನ್ನು ಗಂಭೀರವಾಗಿ ವಿಮರ್ಶಿಸಬೇಕಿದೆ. ಭ್ರಷ್ಟಾಚಾರದ ವಿರುದ್ಧ ಸಮರ ಸಾರಿರುವ ನ್ಯಾ. ಸಂತೋಷ ಹೆಗ್ಗಡೆಯವರ ಬೆಂಬಲಿತ (ಹಜಾರೆ ಗುಂಪಿನ)ಲೋಕಸತ್ತಾ ಪಕ್ಷದ ಅಶ್ವಿನ್ ಹೆಚ್ಚಿನ ಮತ ಪಡೆದರಾದರೂ ಅವರ ಎರಡನೇ ಪ್ರಾಶಸ್ತ್ಯ ಮತಗಳು ಬಿಜೆಪಿಗೆ ಹೋಗಿರುವುದು ಭ್ರಷ್ಟ ಬಿಜೆಪಿ ಗೆಲ್ಲಲು ಪ್ರಮುಖವಾದ ಅಂಶವಾಗಿದೆ. ಯಾವ ಬಿಜೆಪಿ ಸರಕಾರದ ಹಗರಣಗಳನ್ನು ಹೊರಗೆಳೆದು ಸತತ ಧಾಳಿಯನ್ನು ಎದುರಿಸುತ್ತಿರುವ ಹೆಗ್ಗಡೆಯವರ ಗೊಂದಲಕಾರಿ, ತಪ್ಪು ರಾಜಕೀಯ, ತಾತ್ವಿಕ ನಿಲುವು,ಹೋರಾಟದ ಕ್ರಮಗಳು ಇಂತಹ ಫಲ ನೀಡುವಲ್ಲಿ ಪರ್ಯಾವಸಾನಗೊಂಡಿದೆ. ಇವರಿಗೆ ಐಟಿ,ಬಿಟಿಯಂತಹ ಕಾರ್ಪೋರೇಟ್ ಕಂಪನಿಗಳ ಹಣ,ಜನ ಬೆಂಬಲವೂ ದೊರೆತಿತ್ತು. ಅಲ್ಲದೇ ಇವರಿಗೆ ಬಿದ್ದ ಮತಗಳಲ್ಲಿ ಎರಡನೇ ಪ್ರಾಶಸ್ತ್ಯ ಮತಗಳು ಬಿಜೆಪಿಗೂ, ಅವರಲ್ಲಿ ಎರಡನೆಯದ್ದೂ ಪಡೆದಿರುವುದು ಆಯ್ಕೆ ಅವರಿಬ್ಬರ ನಡುವೆಯೇ ಎಂಬುದನ್ನು, ಪರಸ್ಪರ ಸ್ಪರ್ದೆ ಮತ್ತು ಹೊಂದಾಣಿಕೆಯನ್ನು ಸ್ಪಷ್ಟವಾಗಿ ತೋರಿಸುತ್ತದೆ . ಭ್ರಷ್ಟತೆ ವಿರುದ್ಧವೆಂದು ಹೇಳುತ್ತಲೇ ಭ್ರಷ್ಟರನ್ನು ಬಲಗೊಳಿಸಿದ ಪರಿಯನ್ನು ಗಮನಿಸಬೇಕು.

ಈ ಚುನಾವಣೆ ಫಲಿತಾಂಶ ಸದ್ಯದ ಸ್ಥಿತಿಯನ್ನು ಸಂಕೇತಿಸುತ್ತಿದೆ. ಮುಂಬರುವ ವಿಧಾನ ಸಭಾ ಚುನಾವಣೆಯ ಸಿದ್ಧತೆಯಲ್ಲಿ ಎಡ ಮತ್ತು ಪ್ರಜಾಸತ್ತಾತ್ಮಕ ಶಕ್ತಿಗಳು ಒಂದು ಅನುಭವವಾಗಿ, ಪಾಠವಾಗಿ ಪರಿಗಣಿಸಿ ಮುಂದೆ ಸಾಗಬೇಕಿದೆ. ●

ಪರಿಷತ್ ಚುನಾವಣೆ : ಮುಖ ಭಂಗ – ಪ್ರಸಂಗ

ಇಂತಹದ್ದೊಂದು ನಡೆಯಲಿದೆ ಎಂಬ ಬಗ್ಗೆ ಬಹುತೇಕ ಯಾರಿಗೂ ಅನುಮಾನವೇ ಇರಲಿಲ್ಲ. ಆದರೆ ಅದನ್ನು ತಡೆಯುವ ಸ್ಥಿತಿ ಮತ್ತು ಇಚ್ಛಾ ಶಕ್ತಿಯೂ ಅವರಲ್ಲಿ ಇರಲಿಲ್ಲ. 'ಎಲ್ಲಾ ಕೊಳ್ಳೆ ಹೋದ ಮೇಲೆ ಊರ ದಿಡ್ಡಿ ಬಾಗಿಲು ಹಾಕಿದರು' ಎಂಬಂತೆ ರಾಜಕೀಯ ಪಾವಿತ್ರ್ಯತೆ, ಶಿಸ್ತು, ಕಠಿಣ ಶಿಸ್ತು-ಕ್ರಮ ವಿಚಾರಣೆಗಳಂತಹ ಮಾತುಗಳನ್ನು ದೊಡ್ಡ ಬಾಯಲ್ಲಿ ಹೇಳುತ್ತಿದ್ದಾರೆ. ರಾಷ್ಟ್ರೀಯ ಪಕ್ಷಗಳು ಎಂದು ಹೇಳಿಕೊಳ್ಳುವ ಕಾಂಗ್ರೆಸ್, ಬಿಜೆಪಿಗಳು ತಲುಪಿರುವ ರಾಜಕೀಯ ಅಧಃ ಪತನಕ್ಕೆ ಇನ್ನೊಂದು ಉದಾಹರಣೆ ಬೇಕೆ ? ಇದೆ ಜೂನ್ 11, 2012 ರಂದು 11 ಸ್ಥಾನಗಳಿಗೆ ನಡೆದ ವಿಧಾನ ಸಭೆಯಿಂದ ವಿಧಾನ ಪರಿಷತ್ತಿಗೆ ನಡೆದ ಶಾಸಕರ ಆಯ್ಕೆಯ ಚುನಾವಣೆಯಲ್ಲಿ ಆದ ಅಡ್ಡ ಮತದಾನದೇ ಈಗ ಮಾತು. ಅಡ್ಡ ಮತದಾನ ಮಾಡಿ ಎನ್ನುವುದನ್ನೇ ಶಾಸಕರು 'ಆತ್ಮ ಸಾಕ್ಷಿ'ಯಂತೆ ಮತ ನೀಡಿ ಎಂದೇ ಹೇಳುತ್ತಾರೆ. ಒಂದು ಪಕ್ಷದ ಶಾಸಕರಾದವರು ಅವರಿಗೆ ನಿಗದಿ ಮಾಡಲಾದ ಅಭ್ಯರ್ಥಿಗೆ ಅನುಗುಣವಾಗಿ ಮತ ನೀಡಬೇಕೆಂಬುವುದು ಸಾಮಾನ್ಯ ಅಂಶ. ಹಾಗಾದರೆ ಅಲ್ಲಿ 'ಆತ್ಮ ಸಾಕ್ಷಿ'ಯ ಮಾತು ಬರುವುದಿಲ್ಲ. ಯಾವಾಗಲೂ ತಮ್ಮ ನಿಗದಿತ ಅಭ್ಯರ್ಥಿಗೆ ಹಂಚಿಕೆಯಾಗಿಯೂ ಉಳಿಯುವ ಶಾಸಕರ ಮತಗಳನ್ನು ಯಾರಿಗೆ ಹಾಕಬೇಕು, ಒಂದು ವೇಳೆ ಅದಕ್ಕೆ ಒಬ್ಬ ಅಭ್ಯರ್ಥಿಯನ್ನು ಸ್ಪರ್ದೆಗಿಳಿಸಿದ್ದರೆ ಅವರಿಗೆ ಗೆಲ್ಲಲು ಇನ್ನುಳಿದ ಬೇರೆಯವರ ಮತಗಳನ್ನು ಹೇಗೆ ಪಡೆಯಬೇಕು ಎಂಬುದೇ ಪ್ರಮುಖ ಪ್ರಶ್ನೆಯಾಗಿ ಬರುತ್ತದೆ, ಹಾಗಾಗಿ ಆ ಮತಗಳನ್ನು ಪಡೆಯಲು ಹಲವಾರು ಕಸರತ್ತು ನಡೆಯುತ್ತದೆ. ಇಂತಹ ಯತ್ನಗಳು ನೀತಿಯಾಧಾರದಲ್ಲಿ ನಡೆಯುವುದು ಬಿಟ್ಟು ಹೋಗಿ ದಶಕಗಳೇ ಆಗಿವೆ. ಮಾರುಕಟ್ಟೆ ಆರ್ಥಿಕತೆಯಲ್ಲಿ ಯಾವುದೂ ಪುಕ್ಕಟೆ ಸಿಗುವುದಿಲ್ಲ ಎಂಬ ನೀತಿಯು ರಾಜಕಾರಣದಲ್ಲಿಯೂ ಹೆಚ್ಚುವರಿ ಶಾಸಕರ ಮತ ಪಡೆಯಲು ಹರಾಜುಗಳು ನಡೆಯುತ್ತವೆ. ಹೆಚ್ಚಿನ ಹಣ ಕೊಟ್ಟು ಖರೀದಿಸಬಲ್ಲವರು ಆಯ್ಕೆಯಾಗುತ್ತಾರೆ. ಈಗಿನ ಅಂತಹ ಸ್ಥಾನಗಳಿಗೆ ಪಕ್ಷದ ಅಭ್ಯರ್ಥಿಗಳಿಗಿಂತ ಕಾರ್ಪೊರೇಟ್ ಕಂಪನಿಗಳ ಮುಖ್ಯಸ್ಥರು,(ಮಲ್ಯ, ರಾಜೀವ್ ಚಂದ್ರಶೇಖರ್, ರಾಮಸ್ವಾಮಿ) ಭೂ ದಂಧೆಕೋರರು ಮುಂತಾದ ವ್ಯಾಪಾರೋದ್ಯಮಿಗಳನ್ನು ಹಿರಿಯರ ಮೇಲ್ಮನೆಗೆ ಹುರಿಯಾಳಾಗಿ ನಿಲ್ಲಿಸಲಾಗುತ್ತದೆ. ಹೀಗಾದಾಗ ಚುನಾವಣೆ ಸ್ಪರ್ದೆ ಬಿರುಸಾಗುವುದು. ಕೋಟ್ಯಾಂತರ ವಹಿವಾಟು ಸದ್ದಿಲ್ಲದೇ ನಡೆಯುವುದು. ಈ ಸ್ಪರ್ದೆಯಲ್ಲಿ ಮೇಲುಗೈ ಸಾಧಿಸಿದವರು, ಕೊರಳಿಗೆ 'ವಿಜಯಲಕ್ಷ್ಮಿ' ಮಾಲೆ ಹಾಕುತ್ತಾಳೆ. ಈ ಬಾರಿಯ ಚುನಾವಣೆಯಲ್ಲಿ 10 ಸ್ಥಾನಗಳಿಗೆ ಆಯ್ಕೆ ಬಹುತೇಕ ನಿಶ್ಚಿತವೆಂದೇ ಭಾವಿಸಲಾಗಿತ್ತು. ಶಾಸಕತ್ವದ ಬಲದ ಆಧಾರದಲ್ಲಿ ಬಿಜೆಪಿ 6 ಸ್ಥಾನಗಳನ್ನು ಕಾಂಗ್ರೆಸ್ 3 ಜೆಡಿಎಸ್ 1 ಗಳನ್ನು ಪಡೆಯುವದು ಖಚಿತವಾಗಿತ್ತು. ಇಷ್ಟಾದ ಮೇಲೆ ಈ ಪಕ್ಷಗಳಲ್ಲಿ ಉಳಿದ ಹೆಚ್ಚುವರಿ ಮತಗಳನ್ನು ಆಧರಿಸಿ ಒಬ್ಬರನ್ನು ಆಯ್ಕೆ ಮಾಡಲು ಸಾದ್ಯವಿತ್ತು. ಅದಕ್ಕಾಗಿ ಕಾಂಗ್ರೇಸ್ ಪಕ್ಷ ಶಿಕ್ಷಣೋದ್ಯಮಿ ಎಂ.ಆರ್.ಸೀತಾರಾಂರನ್ನು ಅಭ್ಯರ್ಥಿಯಾಗಿ ನಿಲ್ಲಿಸಿತ್ತು. ಈ ಪ್ರಕ್ರಿಯೆಯಲ್ಲಿ ತಮ್ಮ ಬೆಂಬಲಿಗ ಸಿ.ಎಂ.ಇಬ್ರಾಹಿಂಗೆ ಟಿಕೇಟ್ ಸಿಗಲಿಲ್ಲವೆಂದು ವಿರೋಧ ಪಕ್ಷದ ನಾಯಕ ಸಿದ್ದರಾಮಯ್ಯ ಬಂಡಾಯ ಹೂಡಿದ್ದ ಹಿನ್ನೆಲೆಯಲ್ಲಿ ಕಾಂಗ್ರೆಸ್‌ನವರೇ ಆದ ಭೈರತಿ ಸುರೇಶ್ ಪಕ್ಷೇತರ ಅಭ್ಯರ್ಥಿಯಾಗಿ ಸ್ಪರ್ಧೆಗೆ ಇಳಿದಿದ್ದರು.



ಪಕ್ಷೇತರನಾಗಿ ಸ್ಪರ್ಧಿಸಿದ ಭೈರತಿ ಸುರೇಶ ಗೆದ್ದದು ಮಾತ್ರವಲ್ಲ 23 ಸಾವಿರ ಮತ ಪಡೆದು ಎಲ್ಲಾ ಅಧಿಕೃತ ಅಭ್ಯರ್ಥಿಗಳಿಗಿಂತ ಅತಿ ಹೆಚ್ಚಿನ ಮತಗಳನ್ನು ಪಡೆದಿರುವುದು ಗಮನಾರ್ಹ. ಸುರೇಶಗೆ ಜೆಡಿಎಸ್, ಪಕ್ಷೆತರರು ಬೆಂಬಲಸಿದ್ದರು. ಅದನ್ನು ಮೀರಿ ಆದರೆ ಅಷ್ಟರಿಂದಲೇ ಅವರು ಗೆಲ್ಲುವ ಸಂಭವವೇ ಇರಲಿಲ್ಲ. ಉಳಿದಂತೆ ಗಳಿಸಿದ 11 ಮತಗಳು ಬಹುತೇಕ ಬಿಜೆಪಿಯಿಂದಲೇ ಬಂದಿರುವ ಸಂಭವವಿದೆ. ಅದೇ ರೀತಿ 4ನೇ ಅಭ್ಯರ್ಥಿಯಾಗಿದ್ದ ಕಾಂಗ್ರೇಸ್ ಸೀತಾರಾಂಗೆ ಭೈರತಿ ಸುರೇಶ ಸ್ಪರ್ಧೆಯಿಂದ ಡೋಲಾಯಮಾನ ಸ್ಥಿತಿಯಲ್ಲಿದ್ದರು. ಆದರೆ ಅಂತಿಮವಾಗಿ ಗೆಲ್ಲುವ ಗ್ಯಾರಂಟಿಯಿಂದ ಇಕ್ಬಾಲ್ ಅಹ್ಮದ್ ಸರಡಗಿ ಸೋತು, ಸೋಲಬಹುದಾಗಿದ್ದ ಸೀತಾರಾಂ ಗೆದ್ದದು ಆಶ್ಚರ್ಯಕರ. ಅಂದರೆ ಕಾಂಗ್ರೇಸ್ ಒಳಗೆ ಅಡ್ಡ ಮತದಾನವಾಗಿದೆ. ಸಿದ್ದರಾಮಯ್ಯನವರ ಒತ್ತಾಯದ ಬಳಿಕ ಸೀತಾರಾಂ ಸೋಲದಂತೆ ನೋಡಿಕೊಳ್ಳುವ ಹಾಗೆ ಅವರ ಹೆಗಲ ಮೇಲೆ ಇದ್ದ್ರು ಕುದುರೆ ವ್ಯಾಪಾರದಲ್ಲಿ ಗೆಲ್ಲಬೇಕಾದ ಸರಡಗಿ ಸೋತು ಹೋಗಿದ್ದು ಗಂಭೀರ ಬೆಳವಣಿಗೆ. ಅದೇ ರೀತಿ ನಿರಾಯಾಸವಾಗಿ ಗೆಲ್ಲಬೇಕಿದ್ದ ಬಿಜೆಪಿಯವರು ಅತ್ಯಂತ ಪ್ರಯಾಸದಿಂದ ಗೆಲ್ಲಬೇಕಾಗಿ ಬಂದದು ಬಿಜೆಪಿಯೊಳಗಿನ ಮನ ಸ್ಥಿತಿಯನ್ನು ತೋರಿಸುತ್ತದೆ. ಹೀಗೆ ಅಡ್ಡ ಮತದಾನ ಮಾಡಿದ ಬಹುತೇಕರು ಮುಖ್ಯಮಂತ್ರಿ ಸದಾನಂದಗೌಡರ ಬೆಂಬಲಿಗರು ಎಂಬುದು ಇನ್ನಷ್ಟೂ ಕುತೂಹಲಕಾರಿ ಅಂಶವಾಗಿದೆ. ಆದ್ದರಿಂದಲೇ ಗೌಡರು ಅಡ್ಡ ಹಾದಿ ಹಿಡಿದವರ ಮೇಲೆ ಕ್ರಮವಿಲ್ಲವೆಂದು, ಈಶ್ವರಪ್ಪ ರಾಜಕೀಯ ಪಾವಿತ್ರ್ಯದ ಬಗ್ಗೆಯೂ ಮಾತನಾಡುತ್ತಿದ್ದಾರೆ. ಅಡ್ಡ ಹಾದಿ ಹಿಡಿಯಬಹುದೆಂಬ ಯಡ್ಡಿಬಣದ ಶಿಸ್ತಿನ ಸಿಪಾಯಿಗಳು ಪರಿವರ್ತನೆಯಾಗಿರುವುದು ಸಿಬಿಐನ ಪ್ರಭಾವವೇ? ಅಥವಾ ರಾಜಿಗೆ ಬದ್ಧತೆಯೇ ?

ಹೀಗೆ ಬಿಜೆಪಿ, ಕಾಂಗ್ರೆಸ್ ಪಕ್ಷಗಳು ತಾವೇ ಹುಟ್ಟು ಹಾಕಿದ 'ಅಡ್ಡಹಾದಿ' ಆಪರೇಷನ್‌ಗಳಿಗೆ ಒಳಗಾಗಿವೆ. ಶಿಸ್ತು, ಬದ್ದತೆ ತತ್ವನಿಷ್ಠತೆಯ ರಾಜಕಾರಣದ ಮಾತುಗಳು ಆ ಪಕ್ಷದಲ್ಲಿ ಬರೀ ಬೂಟಾಟಿಕೆ ಎಂದು ತೋರಿಸಿವೆ.

ಇದರಲ್ಲಿ ಅಲ್ಪಸಂಖ್ಯಾತರ ನಾಯಕರಾಗಿದ್ದ ಇಕ್ಬಾಲ್

ಪುಟ 4ಕ್ಕೆ

ಕಾರ್ಟೂನ್ ಕಾರ್ನರ್



dyfi 9
ಅಖಿಲ ಭಾರತ
ಸಮ್ಮೇಳನ
11-15 ಸೆಪ್ಟೆಂಬರ್, 2012

ಯುವಜನತೆಯ ಸಶಕ್ತಿಗಾಗಿ ಡಿವೈಎಫ್‌ಐ ರಾಷ್ಟ್ರ ಸಮ್ಮೇಳನ

ಬೆಂಗಳೂರಿನಲ್ಲಿ ಮೊಟ್ಟ ಮೊದಲ ಬಾರಿಗೆ ಡಿವೈಎಫ್‌ಐ ನ ಅಖಿಲ ಭಾರತ ಯುವಜನ ಸಮ್ಮೇಳನ ನಡೆಯುತ್ತಿದೆ. ಈ ಸಮ್ಮೇಳನದ ಘೋಷಣೆ ಏನು? ಯಾವ ಸನ್ನಿವೇಶದ ಹಿನ್ನೆಲೆಯಲ್ಲಿ ಈ ಸಮ್ಮೇಳನ ನಡೆಯುತ್ತಿದೆ ಎಂದು ವಿವರಿಸಿದ್ದಾರೆ ಡಿವೈಎಫ್‌ಐ ಸಂಘಟನೆಯ ರಾಜ್ಯ ಕಾರ್ಯದರ್ಶಿಗಳು.

ಬಿ. ರಾಜಶೇಖರ ಮೂರ್ತಿ

ವಿಶ್ವದಲ್ಲೇ ಅತ್ಯಂತ ಹೆಚ್ಚಿನ ಸಂಖ್ಯೆಯ ಯುವಜನತೆಯನ್ನು ಹೊಂದಿರುವ ನಮ್ಮ ಭಾರತದಲ್ಲಿ ಕೇವಲ ಕೆಲವೇ ಕೆಲವು ಯುವಜನತೆ ಮಾತ್ರ ಸಶಕ್ತರಾಗಿದ್ದಾರೆ. ಉಳಿದ ಬಹುತೇಕ ಯುವ ಜನತೆ ಸವಕಲು ದೇಹದ ಸದಾ ಹಸಿವು ಮತ್ತು ಅಪೌಷ್ಠಿಕತೆಯಿಂದ ನರಳುವ ಅಶಕ್ತ ಯುವಜನರಾಗಿದ್ದಾರೆ. ಒಟ್ಟು ದೇಶದ ಜನಸಂಖ್ಯೆಯಲ್ಲಿ 15 ರಿಂದ 40 ವಯೋಮಾನದ ಯುವ ಜನರೇ 67% ರಷ್ಟಿದ್ದಾರೆ. 15 ರಿಂದ 25ರ ವಯೋ ಮಾನದಲ್ಲಿ ಶೇ 52 ರಷ್ಟಿದ್ದಾರೆ. ಈ ಎಲ್ಲ ಒಟ್ಟು 71 ಕೋಟಿ ಯುವಜನತೆಯಲ್ಲಿ ಕಾಲೇಜು ಶಿಕ್ಷಣಕ್ಕೆ ಕಾಲಿಟ್ಟವರು ಕೇವಲ ಶೇ 11.5 ರಷ್ಟು ಮಾತ್ರ. ದೇಶದ ಒಟ್ಟು ಜನ ಸಂಖ್ಯೆಯಲ್ಲಿ 36 ಕೋಟಿ ಜನತೆ ಇನ್ನೂ ಅನಕ್ಷರಸ್ಥರಾಗಿ ಉಳಿದ್ದಿದ್ದಾರೆ. 5 ರಿಂದ 9ವರ್ಷದ 15 ಕೋಟಿ ಮಕ್ಕಳು ಶಾಲೆಗಳಿಂದ ಹೊರಗುಳಿದಿದ್ದಾರೆ. ಪ್ರಾಥಮಿಕ, ಪ್ರೌಢ ಹಾಗೂ ಎಸ್‌ಎಸ್‌ಎಲ್‌ಸಿ ಹಂತದಲ್ಲಿ ಅನುತ್ತೀರ್ಣರಾಗಿ ನಿಂತವರ ಅಂಕಿ ಸಂಖ್ಯೆ ಬೇರೆ.

ಉದ್ಯೋಗದ ಆಸರೆಗಾಗಿ ಅಧಿಕೃತವಾಗಿ ನೊಂದಾಯಿಸಿರುವ ನಿರುದ್ಯೋಗಿಗಳ ಸಂಖ್ಯೆ 16.70 ಕೋಟಿ ಯುವಜನರಿದ್ದಾರೆ. ಕೇಂದ್ರ ಸರಕಾರದ ಅಡಿಯಲ್ಲಿ ಅಧಿಕೃತವಾಗಿ 1.80 ಕೋಟಿ ಉದ್ಯೋಗಗಳು ಖಾಲಿ ಇವೆ. ರೈಲ್ವೆ ಇಲಾಖೆಯೊಂದರಲ್ಲೇ 1.80 ಲಕ್ಷ ಹುದ್ದೆಗಳು ಖಾಲಿ ಇವೆ. ಕರ್ನಾಟಕದಲ್ಲಿನ ಸರ್ಕಾರದ ಅಂಕಿ ಅಂಶಗಳ ಪ್ರಕಾರವೇ 1.36 ಲಕ್ಷ ಸರಕಾರಿ ಹುದ್ದೆಗಳು ಖಾಲಿ ಇವೆ. ಇನ್ನು ಅರೆ ಉದ್ಯೋಗ ಮತ್ತು ಅಭದ್ರತೆಯ ಉದ್ಯೋಗದಲ್ಲಿರುವ ಯುವಜನತೆಯ ಸಮಸ್ಯೆಗಳು ಹೇಳತೀರದು. 8 ಘಂಟೆ ಕೆಲಸ, 8 ಘಂಟೆ ವಿಶ್ರಾಂತಿ, 8 ಘಂಟೆ ನಿದ್ರೆ ಎಂಬ ವೈಜ್ಞಾನಿಕ ಜೀವನದ ವಿಧಾನ ದೂರವಾಗಿ ಮಾನವ ಯಂತ್ರಗಳಾಗಿ ದುಡಿಯಬೇಕು. ಇದಕ್ಕೆ ಉದಾಹರಣೆ ತಿಂಗಳಿಗೆ 50–60 ಸಾವಿರ ಸಂಬಳ ಪಡೆಯುವ ಮಾಹಿತಿ ತಂತ್ರಜ್ಞಾನದ ಉದ್ಯೋಗಿಗಳು. ಹಾಗೆಯೇ ತಿಂಗಳಿಗೆ ಕೇವಲ 3–4 ಸಾವಿರ ಸಂಬಳ ಪಡೆಯುವ ಗಾರ್ಮೆಂಟ್ಸ್ ನೌಕರರು. ಒಂದು ರೀತಿಯಲ್ಲಿ ಕಬ್ಬಿನ ರಸ ತೆಗೆದ ಸಿಪ್ಪೆಗಳಾಗಿ ಯುವಜನತೆ ದುಡಿ ದುಡಿದು ಹೊರಬರುತ್ತಾರೆ. ಗ್ರಾಮೀಣ ಪ್ರದೇಶದಲ್ಲಿ 5–6 ಎಕರೆ ಭೂಮಿ ಹೊಂದಿರುವ ಯುವ ರೈತರೇ ಆತ್ಮಹತ್ಯೆಯ ಹಾದಿ ಹಿಡಿದಿರುವಾಗ ಇನ್ನು ರಾಜ್ಯದಲ್ಲಿ 52 ಲಕ್ಷ ರಷ್ಟಿರುವ ಕೃಷಿ ಕೂಲಿಕಾರರ ಬವಣೆ ಹೇಳ ತೀರದ್ದಾಗಿದೆ. ಇನ್ನು ಗ್ರಾಮೀಣ ಮಹಿಳೆಯರಲ್ಲಿ ಶೇ. 48 ರಷ್ಟು ಮಹಿಳೆಯರು ರಕ್ತಹೀನತೆಯಿಂದ ಬಳಲುತ್ತಿದ್ದಾರೆ. ಅಪೌಷ್ಠಿಕತೆ ಮತ್ತು ಪೋಷಣೆಯಿಲ್ಲದೆ ಗರ್ಭಿಣಿ ಮತ್ತು ಬಾಣಂತಿ ಹೆಂಗಸರು ಹಾಗೂ ಹೆರಿಗೆ ಸಂದರ್ಭದಲ್ಲಿ ಮಹಿಳೆಯರು ಮತ್ತು ಎಳೆ ಕಂದಮ್ಮಗಳು ಅಸುನೀಗುತ್ತಿರುವುದನ್ನು ಪ್ರತಿನಿತ್ಯ ಮಾಧ್ಯಮಗಳಲ್ಲಿ ನೋಡುತ್ತಿದ್ದೇವೆ. ವಾಸಿಸಲು ಮನೆ. ಸ್ವಂತದ್ದೆಂಬ ತುಂಡು ಭೂಮಿ ಅಥವಾ



ಆರ್ಧ ಸೈಟು, ಕನಿಷ್ಠ ಆಹಾರದ ಭದ್ರತೆ ಇಲ್ಲದೆ ಬೀದಿಗೆ ಬಿದ್ದು ಬದುಕುವ ಸ್ಥಿತಿ ಕಡು ಬಡವರದ್ದಾಗಿದೆ. ಇದಕ್ಕೊಂದು ಉದಾ- ಕೊಪ್ಪಳ ನಗರವೊಂದರಲ್ಲೇ ಮನೆ–ಸೈಟು ಇಲ್ಲದವರ ಸಂಖ್ಯೆ 8,000 ಸಾವಿರ ಮೀರಿದೆ. ಹಂದಿಗೂಡುಗಳ ಜೊತೆ ಐದಾರು ಕುಟುಂಬಗಳು ಒಂದೆಡೆಯಲ್ಲಿ ಬದುಕುವ ಪರಿಸ್ಥಿತಿಯನ್ನು ರಾಜ್ಯದ ಎಲ್ಲಾ ಕಡೆಯೂ ನೀಡಬಹುದು. ಇಂತಹ ಘನ ಘೋರ ರೀತಿಯಲ್ಲಿ ಅಮಾನವೀಯ ಸ್ಥಿತಿ ನಮ್ಮದಾಗಿದ್ದು ಅಪಾರ ಮಾನವ ಸಂಪತ್ತು ವಿನಾಶದ ಅಂಚಿನಲ್ಲಿದೆ. ಇನ್ನೊಂದೆಡೆ ಬಿಲಿಯನ್ ಡಾಲರ್ ಪತಿಗಳು (5,000 ಕೋಟಿ ರೂ ಗಿಂತ ಹೆಚ್ಚು ಆಸ್ತಿ ಉಳ್ಳವರು) ಮೂರ್‍ನಾಲ್ಕು ಪಟ್ಟು ಹೆಚ್ಚುತ್ತಿದ್ದಾರೆ. ಇಂಥವರ ಏಳ್ಗೆಗಾಗಿ ಆಳುವ ಸರ್ಕಾರಗಳು ನವ ಉದಾರೀಕರಣ ನೀತಿಗಳನ್ನು ಜಾರಿಗೆ ತರುತ್ತಿರುವುದು. ಹೀಗಾಗಿಯೇ ರಾಜ್ಯದಲ್ಲಿ "ವಿಶ್ವ ಬಂಡವಾಳ ಹೂಡಿಕೆ" ಹೆಸರಿನಲ್ಲಿ ನೆಲ–ಜಲ ಸೇರಿದಂತೆ ಸಕಲವೆಲ್ಲವನ್ನು ಬೃಹತ್ ಬೃಹತ್ ಕಾರ್ಪೊರೇಟ್ ಖಾಸಗಿ ಕಂಪನ್ನಿಗಳಿಗೆ ರೈತರ ಭೂಮಿಯನ್ನು ಪರಭಾರೆ ಮಾಡುತ್ತಿರುವುದು. ಇಂತಹ ನೀತಿಗಳನ್ನು ತುದಿಗಾಲ ಮೇಲೆ ನಿಂತು ಕೇಂದ್ರ ಹಾಗೂ ರಾಜ್ಯ ಸರಕಾರಗಳು ಮುಂದಾಗಿವೆ. ಹೀಗಾಗಿ ಕೆಲವರ ಐಶಾರಾಮಿ ಅಭಿವೃದ್ಧಿ ಹೇಗಿದೆ ಎಂದರೆ ಮುಖೇಶ್ ಅಂಬಾನಿಯ ಮನೆಯನ್ನು 5,000 ಸಾವಿರ ಕೋಟಿ ಖರ್ಚು ಮಾಡಿ ಕಟ್ಟುತ್ತಾರೆ. ಸಾರ್ವಜನಿಕ ಸಂಪತ್ತನ್ನು ಲೂಟಿ ಮಾಡಿ ತಿರುಪತಿ ವೆಂಕಟಪ್ಪನಿಗೆ ಚಿನ್ನದ ಕಿರೀಟ ಇತ್ಯಾದಿಯನ್ನು ಈಗ ಜೈಲಿನಲ್ಲಿರುವ ಗಣಿ ಲೂಟಿಕೋರರು ಕೊಟ್ಟಿದ್ದು.

ಈ ರೀತಿಯಲ್ಲಿ ಅಕ್ರಮವಾಗಿ ಗಳಿಸಿದ್ದನ್ನು ದಾನದ ರೂಪದಲ್ಲಿ ದೇವರುಗಳಿಗೆ ಬೃಹತ್ ಪ್ರಮಾಣದಲ್ಲಿ ನೀಡುವುದು. ಬಡವರಿಗೆ ಅನ್ನದಾನ, ಟೈಲರಿಂಗ್ ಮಿಷನ್ ದಾನ, ಸೀರೆ ದಾನ, ತಾಳಿ ದಾನ, ವಿದ್ಯಾರ್ಥಿಗಳಿಗೆ ನೋಟು ಪುಸ್ತಕ ದಾನ, ಕುರಿತು ಅಂಗವಿಕರಿಗೆ ಆ ದಾನ ಈ ದಾನ, ಇಂತಹ ದಾನಗಳೇ ಮಹತ್ಕಾರ್ಯ. ಇನ್ನೂ ಮುಂದೆ ಹೋಗಿ ಸಾಮೂಹಿಕ ವಿವಾಹ ಮುಂತಾಗಿ ಮಾಡಬೇಕಾದ ದುಸ್ಥಿತಿಯಲ್ಲಿಟ್ಟು ಬಹು ಸಂಖ್ಯೆಯ ಜನತೆಯನ್ನು ಅಬಲರನ್ನಾಗಿ ಉಳಿಸಿ ಪರವಾಲಂಬಿಗಳನ್ನಾಗಿಸಲಾಗಿದೆ.

ಹೀಗಾಗಿ ಯುವ ಭಾರತ (ಯುವ ಜನತೆ) ಉಳ್ಳವರ ಆಸ್ತಿ ಕಾಯುವ ಕಾವಲು ನಾಯಿಗಳಂತೆ ಆಯುಧಗಳಾಗಿ ದುರ್ಬಳಕೆ ಯಾಗುತ್ತಿದ್ದಾರೆ. ಇಂತಹ ಬರ್ಬರತೆಯನ್ನು ವಿರೋಧಿಸಿ ಪ್ರಜಾಸತ್ತೆಯ ಜ್ಞಾನದ ಅರಿವನ್ನು ಪಡೆಯದಿರಲೆಂದು ಅಜ್ಞಾನದಲ್ಲೇ ಇರಿಸಲು ಮತಾಂಧ, ಬಾಷಾಂಧ, ಪ್ರದೇಶಾಂಧ, ಹಾಗೂ ವಿಚ್ಛಿದ್ರಕಾರಿ–ಭಯೋತ್ಪಾದನೆಗೆ ಯುಜನತೆ ಒಳಗಾಗುವಂತೆ ಪ್ರೇರೇಪಿಸಿ ಉನ್ಮಾದಗೊಳಿಸುವುದು.

ಇಂತಹ ಕೆಲ ನೀತಿಗಳಿಗೆ ಅಸಕ್ತರಾಗಿ ಬಲಿಯಾಗುತ್ತಿರುವ ಬಹು ಸಂಖ್ಯಾತ ಯುವಜನತೆಯಲ್ಲಿ ಸಶಕ್ತತೆಯನ್ನು ಮೂಡಿಸಬೇಕಾಗಿದೆ. ಯುವ ಜನತೆಯಲ್ಲಿ ಅಡಗಿರುವ ಅದಮ್ಯ ಚೇತನವನ್ನು ಅರಳಿಸಬೇಕಿದೆ. ಕವಿವಾಣಿಯೊಂದು ಹೇಳಿದಂತೆ " ಇರುವುದೆಲ್ಲವನು ಎಲ್ಲರಿಗೂ ಎಲ್ಲರಿಗೂ ಸಮಾನಾಗಿಸುವ" ವ್ಯವಸ್ಥೆಗಾಗಿ ಭಾರತದ ಸ್ವಾತಂತ್ರ್ಯದ ಚಳುವಳಿಯ ಸಂದರ್ಭದಲ್ಲಿ ಮೈಕೊಡವಿಕೊಂಡು ಎಚ್ಚೆದ್ದು ಮೇಲೆದ್ದಂತೆ ಇಂದು ಯುಜನತೆಯನ್ನು ಎಚ್ಚರಿಸಬೇಕಿದೆ.

ಈ ಮಹತ್ತರ ಸಂದರ್ಭದ ಹಿನ್ನೆಲೆಯಲ್ಲಿ ನಡೆಯುತ್ತಿದೆ "ಉತ್ತಮ ಭಾರತಕ್ಕಾಗಿ ಯುವಜನರ ಸಶಕ್ತಿಕರಣಕ್ಕಾಗಿ ಸೆಪ್ಟಂಬರ್ 11 ರಿಂದ 15 ರವರೆಗೆ" ಡಿವೈಎಫ್‌ಐ 9 ನೇ ಅಖಿಲ ಭಾರತ ಸಮ್ಮೇಳನ. ಬನ್ನಿ ಕೈ ಜೊಡಿಸಿ ಯುವ ಜನರನ್ನು ಸಶಕ್ತರಾಗಿಸೋಣ, ಆ ಮೂಲಕ ಉತ್ತಮ ಭಾರತವನ್ನು ನಿರ್ಮಿಸೋಣ.

ಮುಖ ಭಂಗ – ಪ್ರಸಂಗ......

ಪುಟ 2 ರಿಂದ

ಅ ಸರಡಗಿ ಸೋಲು ಖಂಡಿತಕ್ಕೂ ಅಲ್ಪ ಸಂಖ್ಯಾತರ ಸ್ಥಾನ ಏನೆಂಬುದನ್ನು ತೋರಿಸಿದೆ.

ಕಾಂಗ್ರೆಸ್ ಒಳಗಿನ ಜಾತಿ ಮತ್ತು ಹಣದ ಆಟದ ಎದುರು ಅಲ್ಪಸಂಖ್ಯಾತರು ಎಂಬ ಪರಿಗಣನೆ ತೀರಾ ಗೌಣ. ಬಲಿಗೆ ಸುಲಭ ಸಿಕ್ಕವವರು ಎಂಬಂತಾಗಿದೆ. ಈ ಬೆಳವಣಿಗೆಗಳ ಬಳಿಕ ಭಿನ್ನಮತ ಕಿತ್ತಾಟ ಕಾಂಗ್ರೆಸನಲ್ಲಿ ಇನ್ನಷ್ಟು ಹೆಚ್ಚುವ ಸಂಭವಗಳಿವೆ. ಹೀಗಾಗಿ ಇಡೀ ಕಾಂಗ್ರೆಸ್ ವಿಧಾನ ಸಭೆಯಿಂದ ಮತ್ತು ಶಿಕ್ಷಕ, ಪದವೀಧರ ಕ್ಷೇತ್ರಗಳಿಂದಲೂ ಮೂರನೇಯ ಸ್ಥಾನಕ್ಕೆ ತಳ್ಳಲ್ಪಟ್ಟಿರುವುದು ಶೋಚನೀಯ ಸ್ಥಿತಿಯನ್ನು ಜನತೆ ಕೊಟ್ಟಿದ್ದಾರೆ. ಇದರ ನಡುವೆ ತನ್ನದೇ ಒಬ್ಬ ಅಭ್ಯರ್ಥಿಯನ್ನು (ಅಲ್ಪ ಸಂಖ್ಯಾತ) ಗೆಲ್ಲಿಸಿ ಕೊಂಡದ್ದು ಮಾತ್ರವಲ್ಲ ಸನ್ನಿವೇಶ ಬಳಸಿ ಪಕ್ಷೇತರ ಭೈರತಿಯನ್ನು ಗೆಲ್ಲಿಸಿಕೊಂಡು ಜೆಡಿ(ಎಸ್) ತನ್ನ ಮಹತ್ವವನ್ನು ತೋರಿಸಿದೆ.

ವಿಧಾನ ಸಭೆಯಿಂದ ಪರಿಷತ್ತಿಗೆ ನಡೆದ ಚುನಾವಣೆ ಅನುಕೂಲ ಸಿಂಧು ರಾಜಕೀಯದ ಹಣ ಜಾತಿ ವ್ಯವಹಾರಗಳ ಮೇಲುಗೈಯನ್ನು ತೋರಿಸಿದೆ. ರಾಜ್ಯದ ರಾಜಕೀಯವನ್ನು ಅಧಃ ಪತನದ ಅಂಚಿಗೆ ದೂಡುತ್ತಿರುವುದರ ಲಕ್ಷಣವಿದು. 12 ನೇ ಶಾಸಕರು ಅಡ್ಡ ಮತಹಾಕಿದ್ದಾರೆಂದರೂ ಕ್ರಮ ಕೈಗೊಳ್ಳುವ ಸ್ಥಿತಿಯಲ್ಲಿ ಬಿಜೆಪಿ ಇಲ್ಲವೇ ಇಲ್ಲ. ಹಾಗೇನಾದರೂ ಹೋದಲ್ಲಿ ಸರ್ಕಾರವೇ ಉರುಳಿಸುವ ಸನ್ನಿವೇಶವೂ ಇಲ್ಲದಿಲ್ಲ. ಹೀಗಾಗಿ ಹಲ್ಲು ಕಚ್ಚಿ ಸರ್ಕಾರ ಉಳಿಸಿಕೊಳ್ಳಲು ಅಕ್ರಮಗಳನ್ನು ಮುಚ್ಚಿಕೊಳ್ಳಲು ಬಿಜೆಪಿ ಹೆಣಗುತ್ತಿದೆ. ಅಧಿಕಾರ ದಾಹಕ್ಕೆ ಇದಕ್ಕಿಂತ ಉದಾಹರಣೆ ಬೇಕೇ?.

ಜನಶಕ್ತಿ
ಕನ್ನಡ ವಾರಪತ್ರಿಕೆ

ಜರ್ಜರಿತ ಆರ್ಥಿಕತೆ: ಆದಾಯದಲ್ಲಿನ ಅಸಮತೋಲಿತ ಬೆಳವಣಿಗೆ

ಆರ್ಥಿಕ ಪ್ರಗತಿಯ ದರ ಅಸ್ಥಿರ ಜನರ ಬದುಕು ದುರ್ಭರ

ಮಾರ್ಕ್ಸ್‌ವಾದಿ ಕಮ್ಯೂನಿಸ್ಟ್ ಪಕ್ಷದ ಕೇಂದ್ರ ಸಮಿತಿ ಸಭೆ ಜೂನ್ 9–10, 2012 ರಂದು ನವದೆಹಲಿಯಲ್ಲಿ ನಡೆಯಿತು. ಸಭೆಯ ಬಳಿಕ ಈ ಕೆಳಗಿನ ಹೇಳಿಕೆಯನ್ನು ಬಿಡುಗಡೆಗೊಳಿಸಲಾಗಿದೆ.

ಅನುವಾದ: ಸಿಮ್ಸಿಸಿ

ಕಠಿಣ ಆರ್ಥಿಕ ಪರಿಸ್ಥಿತಿ

ದೇಶದಲ್ಲಿರುವ ಪ್ರಸಕ್ತ ನಿಧಾನಗತಿಯ ಆರ್ಥಿಕ ಪ್ರಗತಿಯ ಬಗ್ಗೆ ಕೇಂದ್ರ ಸಮಿತಿ ತನ್ನ ಗಂಭೀರ ಆತಂಕವನ್ನು ವ್ಯಕ್ತಪಡಿಸಿದೆ. 2011–12ರ ಅವಧಿಗೆ ಒಟ್ಟು ಆಂತರಿಕ ಉತ್ಪನ್ನ(ಜಿಡಿಪಿ)ದ ಬೆಳವಣಿಗೆ 6.5ಕ್ಕೆ ಇಳಿದಿದೆ. ಇದರ ಜೊತೆಗೆ ಕೈಗಾರಿಕಾ ಉತ್ಪನ್ನದಲ್ಲೂ ಗಂಭೀರ ಕುಸಿತ ಕಂಡುಬಂದಿದೆ. ರಫ್ತಿನಲ್ಲಿ ಇಳಿಮುಖವಾಗಿರುವ ಕಾರಣದಿಂದ ವ್ಯಾಪಾರದ ಕೊರತೆ ಅಂತರ ದಿನದಿಂದ ದಿನಕ್ಕೆ ಹೆಚ್ಚುತ್ತಿದೆ. ಭಾರತದ ರೂಪಾಯಿ ಮೌಲ್ಯ ಕುಸಿದಿದ್ದು, ಡಾಲರೊಂದಕ್ಕೆ 55 ರೂಪಾಯಿ ಮೌಲ್ಯಕ್ಕೆ ಇಳಿದುಬಿಟ್ಟಿದೆ. ಬಾಹ್ಯ ಸಾಲದ ಮೌಲ್ಯ ಬೃಹದಾಕಾರದ ಮಟ್ಟಕ್ಕೆ ಬೆಳೆದುಬಿಟ್ಟಿದೆ.

ಆರ್ಥಿಕ ಪ್ರಗತಿಯಲ್ಲಿ ಗಂಭೀರ ಕುಸಿತ ಕಂಡುಬಂದಿದ್ದರೂ ಹಣದುಬ್ಬರ ದರ ಮಾತ್ರ ಎಂದಿನಂತೆ ಏರುತ್ತಲೇ ಸಾಗಿದೆ. ಶೇಕಡಾ 10.5 ಅಂಶಗಳನ್ನು ದಾಖಲಿಸಿದ ಹಣದುಬ್ಬರದ ದರ ಆಹಾರದ ಬೆಲೆಗಳಲ್ಲೂ ಗಣನೀಯ ಏರಿಕೆಗೆ ಕಾರಣವಾಗಿದೆ. ಈಗಾಗಲೇ ಬೆಲೆ ಏರಿಕೆಯಿಂದ ತತ್ತರಿಸುತ್ತಿರುವ ಜನತೆಗೆ ಇದು ಮತ್ತೊಂದು ಸಂಕಷ್ಟವನ್ನು ತಂದೊಡ್ಡಿದೆ.

ನವ ಉದಾರೀಕರಣ ನೀತಿಗಳನ್ನು ಪರಿಣಾಮಕಾರಿಯಾಗಿ ಜಾರಿಗೊಳಿಸದಿರುವುದೇ ಈ ಪರಿಸ್ಥಿತಿಗೆ ಕಾರಣ ಎಂದು ಆಡಳಿತ ವ್ಯವಸ್ಥೆ ಮತ್ತು ಕಾರ್ಪೊರೇಟ್ ಮೀಡಿಯಾಗಳು ಬಿಂಬಿಸುತ್ತಿವೆ. ಆದರೆ, ಇದು ನಿಜವಾಗಿ ಪ್ರಸಕ್ತ ಪರಿಸ್ಥಿತಿಯ ವಿಡಂಬನೆಯಾಗಿದೆ. ನವ ಉದಾರೀಕರಣದ ನೀತಿಗಳನ್ನು ಅನುಸರಿಸಿದ ಭಾರತದಂತಹ ಜಗತ್ತಿನ ಇತರ ದೇಶಗಳಲ್ಲಿ ಇದರ ನೇರ ಪರಿಣಾಮ ಕಂಡುಬಂದಿದೆ. ಕೆಲವು ದೇಶಗಳಂತೂ ಆರ್ಥಿಕವಾಗಿ ತೀವ್ರ ಜರ್ಜರಿತಗೊಂಡಿದೆ. ಆದಾಯದಲ್ಲಿನ ಅಸಮತೋಲಿತ ಬೆಳವಣಿಗೆ ಆರ್ಥಿಕ ಪ್ರಗತಿಯ ದರವನ್ನು ಅಸ್ಥಿರಗೊಳಿಸಿದೆ. ಸಟ್ಟಾಕೋರ ಹಣಕಾಸು ಮತ್ತು ಬೃಹತ್ ಕಾರ್ಪೊರೇಟ್ ಸಂಸ್ಥೆಗಳಿಗೆ ತೆರಿಗೆ ವಿನಾಯಿತಿ ಮತ್ತು ಮಾರುಕಟ್ಟೆಯ ನಿಯಂತ್ರಣವನ್ನು ತೆಗೆದುಹಾಕಿರುವುದು ಆರ್ಥಿಕ ಕ್ಷೇತ್ರದ ಸ್ಥಿರತೆಯ ಮೇಲೆ ನೇರ ಪರಿಣಾಮ ಉಂಟುಮಾಡಿದೆ.

ಈ ನಿಟ್ಟಿನಲ್ಲಿ, ಕೇಂದ್ರ ಸರ್ಕಾರ ನವ ಉದಾರೀಕರಣದ ನೀತಿಗಳನ್ನು ಜಾರಿಗೆ ತರುವುದನ್ನು ಕೇಂದ್ರ ಸಮಿತಿ ತೀವ್ರವಾಗಿ ವಿರೋಧಿಸಿದೆ. ಬಹು ಬ್ರ್ಯಾಂಡ್ ಚಿಲ್ಲರೆ ವ್ಯಾಪಾರದಲ್ಲಿ ವಿದೇಶಿ ನೇರ ಹೂಡಿಕೆಗೆ ಅವಕಾಶ ನೀಡುವ ಕೇಂದ್ರದ ಪ್ರಸ್ತಾಪವನ್ನು ಪಕ್ಷ ತೀವ್ರವಾಗಿ ಖಂಡಿಸಿದೆ. ಈ ನೀತಿಗಳನ್ನು ತಡೆಹಿಡಿಯಲು ಮತ್ತು ಪ್ರತಿರೋಧಿಸಲು ಇತರ ಎಡಪಕ್ಷಗಳು ಮತ್ತು ಪ್ರಜಾಸತ್ತಾತ್ಮಕ ಶಕ್ತಿಗಳೊಂದಿಗೆ ಸೇರಿ ಈ ನೀತಿಗಳ ವಿರುದ್ಧ ವಿಶಾಲ ತಳಹದಿಯ ಹೋರಾಟವನ್ನು ನಡೆಸಲು ನಿರ್ಧರಿಸಿದೆ.

ಅದೇ ರೀತಿ ಬ್ಯಾಂಕಿಂಗ್ ಮತ್ತು ವಿಮಾ ಕ್ಷೇತ್ರದಲ್ಲಿ ವಿದೇಶಿ ನೇರ ಹೂಡಿಕೆಯ ಪ್ರಮಾಣವನ್ನು ಹೆಚ್ಚಿಸುವ ವಿಧೇಯಕ ಮತ್ತು ಪಿಂಚಣಿ ವ್ಯವಸ್ಥೆಯನ್ನು ಖಾಸಗೀಕರಣಗೊಳಿಸುವ ಜನವಿರೋಧಿ ಪಿಂಚಣಿ ಮಸೂದೆಯ ವಿರುದ್ಧ ಹೋರಾಟ ನಡೆಸಲು ಪ್ರತಿಪಕ್ಷಗಳಿಗೆ ಕೇಂದ್ರ ಸಮಿತಿ ಕರೆ ನೀಡಿದೆ.

ಆಹಾರ ದಾಸ್ತಾನು

ಮೇ 2012ರಲ್ಲಿ ಕೇಂದ್ರದ ಬಳಿ ಇರುವ



ರಾಷ್ಟ್ರೀಯ ಆಹಾರ ದಾಸ್ತಾನಿನ ಪ್ರಮಾಣ 7.11 ಕೋಟಿ ಮೆಟ್ರಿಕ್ ಟನ್ ತಲುಪಿದೆ ಎಂಬ ಅಂಶವನ್ನು ಕೇಂದ್ರ ಸಮಿತಿ ಗಮನಿಸಿದೆ. ಇದು ನಿಗದಿತ ದಾಸ್ತಾನಿನ ಪ್ರಮಾಣಕ್ಕಿಂತ ಐದು ಕೋಟಿ ಮೆಟ್ರಿಕ್ ಟನ್ ಹೆಚ್ಚಿದೆ. ಇದರಲ್ಲಿ ದೊಡ್ಡ ಪ್ರಮಾಣದ ಆಹಾರ ದಾಸ್ತಾನು ಸಾಕಷ್ಟು ಜಾಗವಿಲ್ಲದೆ ಇಲಿಗಳ ಪಾಲಾಗುತ್ತಿವೆ. ಕೇಂದ್ರ ಸರ್ಕಾರಕ್ಕೆ ಈ ವಾಸ್ತವ ಸ್ಥಿತಿಯ ಅರಿವಿದ್ದರೂ ಬಡವರಿಗೆ ಕಡಿಮೆದರದಲ್ಲಿ ಹಾಗೂ ಅಪೌಷ್ಟಿಕ ಆಹಾರದಿಂದ ನರಳುತ್ತಿರುವ ನಾಗರಿಕರಿಗೆ ಪೂರೈಸಲು ಯಾವುದೇ ಕ್ರಮ ಕೈಗೊಳ್ಳುತ್ತಿಲ್ಲ. ಅದಕ್ಕಿಂತ ಹೆಚ್ಚಾಗಿ ಸರ್ಕಾರ ವಿದೇಶದಿಂದ ಆಹಾರ ಧಾನ್ಯಗಳ ಆಮದಿಗೆ ಹೆಚ್ಚಿನ ಆಸಕ್ತಿಯನ್ನು ತೋರಿಸುತ್ತಿದೆ. ಅದೂ ಖಾಸಗಿ ವರ್ತಕರಿಗೆ ಒಂದು ರಿಯಾಯಿತಿ ನೀಡುವ ಮೂಲಕ.

ತಕ್ಷಣ ಕೇಂದ್ರ ಸರ್ಕಾರ ಬರ ಪರಿಹಾರದ ಪ್ರದೇಶಗಳಿಗೆ ವಿಶೇಷ ಯೋಜನೆಯಡಿ ಆಹಾರ ಧಾನ್ಯಗಳನ್ನು ಪೂರೈಸಬೇಕು, ಸಾರ್ವಜನಿಕ ಪಡಿತರ ವಿತರಣ ವ್ಯವಸ್ಥೆಯ ಮೂಲಕ ಬಿಪಿಎಲ್ ಕಾರ್ಡ್‌ದಾರರಿಗೆ ಕಡಿಮೆ ದರದಲ್ಲಿ ಆಹಾರ ದಾಸ್ತಾನು ತಲುಪುವಂತೆ ಮಾಡಬೇಕು ಎಂದು ಕೇಂದ್ರ ಸಮಿತಿ ಸರ್ಕಾರವನ್ನು ಒತ್ತಾಯಿಸಿದೆ.

ಪೆಟ್ರೋಲ್ ಬೆಲೆ ಏರಿಕೆ

ಪೆಟ್ರೋಲ್ ದರ ಏರಿಕೆಯ ಕ್ರಮವನ್ನು ಸಿಪಿಎಂ ತೀವ್ರವಾಗಿ ಖಂಡಿಸಿದೆ. ಏರಿಸಿದ ದರದಲ್ಲಿ 2 ರೂಪಾಯಿ ಇಳಿಸಿರುವುದು ಸಾಕಾಗದು. ಏಕೆಂದರೆ ಇಳಿಕೆಯ ನಂತರವೂ ಬೆಲೆ ಏರಿಕೆಯ ಪ್ರಮಾಣ ಲೀಟರ್‌ಗೆ 5.50 ರೂಪಾಯಿಯಷ್ಟಿದೆ. ಆದ್ದರಿಂದ ಏರಿಸಿದ ದರವನ್ನು ಪೂರ್ಣಪ್ರಮಾಣದಲ್ಲಿ ವಾಪಸ್ ಪಡೆಯಬೇಕೆಂದು ಕೇಂದ್ರ ಸಮಿತಿ ಒತ್ತಾಯಿಸಿದೆ.

ಕಲ್ಲಿದ್ದಲು ಸ್ಥಾವರದ ಹಂಚುವಿಕೆ

ಕಂಟ್ರೋಲರ್ ಮತ್ತು ಆಡಿಟರ್ ಜನರಲ್‌ನ ವರದಿ ಪ್ರಕಾರ ವಿವಿಧ ಕಂಪನಿಗಳಿಗೆ ಕೇಂದ್ರ ಸರ್ಕಾರ ಮಾಡಿದ ಕಲ್ಲಿದ್ದಲು ಸ್ಥಾವರದ ಹಂಚಿಕೆಯಲ್ಲಿ ದೊಡ್ಡ ಪ್ರಮಾಣದ ಅವ್ಯವಹಾರ ನಡೆದಿರುವ ಬಗ್ಗೆ ಪ್ರಸ್ತಾಪಿಸಲಾಗಿದೆ. ಈ ಪ್ರಕ್ರಿಯೆ ಹಲವು ಖಾಸಗಿ ಕಂಪನಿಗಳಿಗೆ ಬೃಹತ್ ಪ್ರಮಾಣದ ಲಾಭ ತಂದಿದ್ದರೆ, ದೇಶದ ಖಜಾನೆಗೆ ದೊಡ್ಡ ಪ್ರಮಾಣದಲ್ಲಿ ಆದಾಯ ನಷ್ಟ ಸಂಭವಿಸಿದೆ. ಈ ಬಗ್ಗೆ ಸಿಬಿಐ ತನಿಖೆ ನಡೆಸಬೇಕೆಂದು ಕೇಂದ್ರ ವಿಚಕ್ಷಣ ದಳ ಈಗಾಗಲೇ ವರದಿ ನೀಡಿದೆ. ಕಲ್ಲಿದ್ದಲು ಸ್ಥಾವರಗಳ ಹಂಚಿಕೆ ಸಂಬಂಧ ಪ್ರಧಾನ ಮಂತ್ರಿಗಳ ಕಾರ್ಯಾಲಯ ನೀಡಿದ ಉತ್ತರ ಸಮರ್ಪಕವಾಗಿಲ್ಲ.

ಈ ಹಿನ್ನೆಲೆಯಲ್ಲಿ ಪ್ರಕರಣವನ್ನು ಸಿಬಿಐಗೆ ಒಪ್ಪಿಸಿ, ಸಮಗ್ರ ತನಿಖೆ ನಡೆಸಬೇಕು ಮತ್ತು ತಪ್ಪಿತಸ್ಥರ ವಿರುದ್ಧ ಕಠಿಣ ಕ್ರಮ ಕೈಗೊಳ್ಳಬೇಕೆಂದು ಪಕ್ಷದ ಕೇಂದ್ರ ಸಮಿತಿ ಸರ್ಕಾರವನ್ನು ಒತ್ತಾಯಿಸಿದೆ.

ಕೇರಳ ಪರಿಸ್ಥಿತಿ

ಕೇರಳದ ರಾಜಕೀಯ ಪರಿಸ್ಥಿತಿಯನ್ನು ಕೇಂದ್ರ ಸಮಿತಿ ಸಮಗ್ರವಾಗಿ ಅವಲೋಕಿಸಿತು. ಮೇ 4ರಂದು ನಡೆದ ಟಿ.ಪಿ ಚಂದ್ರಶೇಖರನ್ ಹತ್ಯೆಯ ಬಳಿಕ, ಈ ಕೊಲೆ ಸಿಪಿಐ(ಎಂ)ನಿಂದ ನಡೆದಿದೆ ಎಂಬ ದುರುದ್ದೇಶಪೂರಿತ ಅಪಪ್ರಚಾರ ನಡೆದಿದೆ. ಈ ಅಪಪ್ರಚಾರದಲ್ಲಿ ಕೇಂದ್ರದ ಗೃಹ ಖಾತೆ ರಾಜ್ಯ ಸಚಿವ, ಕೇರಳದ ಮುಖ್ಯಮಂತ್ರಿ ಹಾಗೂ ರಾಜ್ಯದ ಕಾಂಗ್ರೆಸ್ ಮುಖಂಡರು ನಿರತರಾಗಿದ್ದಾರೆ. ಜೂನ್ 2ರಂದು ನಡೆಯಲಿರುವ ನೆಯ್ಯತ್ತಿಕರ ವಿಧಾನಸಭಾ ಕ್ಷೇತ್ರದ ಉಪಚುನಾವಣೆಯನ್ನು ದೃಷ್ಟಿಯಲ್ಲಿಟ್ಟುಕೊಂಡು ಈ ಅಪಪ್ರಚಾರ ನಡೆಯುತ್ತಿದೆ.

ಪೊಲೀಸ್ ತನಿಖೆಯೂ ಸರ್ಕಾರ ಹಾಗೂ ಕಾಂಗ್ರೆಸ್ ಪಕ್ಷದ ಪ್ರಭಾವಕ್ಕೆ ಒಳಗಾಗಿರುವಂತೆ ಕಾಣುತ್ತಿದೆ. ಕೋಯಿಕ್ಕೋಡ್ ಮತ್ತು ಕಣ್ಣೂರು ಜಿಲ್ಲೆಗಳಲ್ಲಿ ಪಕ್ಷದ ನಾಯಕರನ್ನು ಈ ಆರೋಪದಲ್ಲಿ ಸೇರಿಸುವ ಪ್ರಯತ್ನವನ್ನು ಪೊಲೀಸ್ ಇಲಾಖೆಯ ಅಧಿಕಾರಿಗಳು ನಡೆಸುತ್ತಿದ್ದಾರೆ.

ಈ ಬರ್ಬರ ಹತ್ಯೆಯನ್ನು ಪಕ್ಷ ಖಂಡಿಸುತ್ತದೆ. ಮತ್ತು ಈ ಘಟನೆಯಲ್ಲಿ ಭಾಗಿಯಾಗುವ ಯಾವುದೇ ಸಾಧ್ಯತೆಯನ್ನು ಸ್ಪಷ್ಟವಾಗಿ ನಿರಾಕರಿಸುತ್ತದೆ. ರಾಜಕೀಯ ವಿರೋಧಿಗಳನ್ನು ಕೊಲೆ ಮಾಡುವ ಕೃತ್ಯದಲ್ಲಿ ಪಕ್ಷಕ್ಕೆ ಎಳ್ಳಷ್ಟೂ ನಂಬಿಕೆ ಇಲ್ಲ ಎಂಬುದನ್ನು ಕೇಂದ್ರ ಸಮಿತಿ ಮತ್ತೊಮ್ಮೆ ಸ್ಪಷ್ಟಪಡಿಸುತ್ತದೆ. ಈ ಕೊಲೆ ಕೃತ್ಯದ ತನಿಖೆಯಲ್ಲಿ ಪಕ್ಷದ ಯಾವುದೇ ಸ್ತರದ ನಾಯಕರು, ಕಾರ್ಯಕರ್ತರು ಭಾಗಿಯಾಗಿದ್ದಾರೆ ಎಂದು ಕಂಡುಬಂದಲ್ಲಿ ಅಂಥವರ ವಿರುದ್ಧ ಕಠಿಣ ಕ್ರಮ ಕೈಗೊಳ್ಳುವುದಾಗಿಯೂ ಈ ಸಂದರ್ಭದಲ್ಲಿ ಕೇಂದ್ರ ಸಮಿತಿ ತಿಳಿಸಿದೆ.

ಇದೇ ಸಂದರ್ಭದಲ್ಲಿ ಪಕ್ಷದ ವಿರುದ್ಧ ಇಂತಹ ಕೀಳುಮಟ್ಟದ ಅಪಪ್ರಚಾರದ ವಿರುದ್ಧ ಸಂಘಟಿತ ಮತ್ತು ಐಕ್ಯ ಹೋರಾಟವನ್ನು ನಡೆಸಬೇಕೆಂದು ಪಕ್ಷದ ಕೇರಳದ ಘಟಕಕ್ಕೆ ಕರೆ ನೀಡಿದೆ. ಇಂತಹ ಪ್ರಕ್ರಿಯೆ ವಿರುದ್ಧ ಜನಾಂದೋಲನ ನಡೆಸಿ ಜನಜಾಗೃತಿ ನಡೆಸಬೇಕೆಂದು ಅದು ಹೇಳಿದೆ.


ಶಿಮ್ಲಾ ಚುನಾವಣೆ

ಶಿಮ್ಲಾ ಮಹಾನಗರ ಪಾಲಿಕೆಯ ಮೇಯರ್ ಮತ್ತು ಉಪಮೇಯರ್ ಹುದ್ದೆಗಳಿಗೆ ನಡೆದ ನೇರ ಚುನಾವಣೆಯಲ್ಲಿ ಪಕ್ಷದ ಭರ್ಜರಿ ಜಯ ಗಳಿಸಿರುವ ಹಿನ್ನೆಲೆಯಲ್ಲಿ ಹಿಮಾಚಲ ಪ್ರದೇಶದ ಸಿಪಿಐ(ಎಂ) ಘಟಕಕ್ಕೆ ಕೇಂದ್ರ ಸಮಿತಿ ಹಾರ್ದಿಕ ಅಭಿನಂದನೆಯನ್ನು ಸಲ್ಲಿಸಿದೆ. ಪಾಲಿಕೆಯಲ್ಲಿ ಆಡಳಿತ ನಡೆಸುತ್ತಿದ್ದ ಕಾಂಗ್ರೆಸ್‌ನ ಸೋಲು ಮತ್ತು ರಾಜ್ಯ ಸರ್ಕಾರ ನಡೆಸುತ್ತಿರುವ ಬಿಜೆಪಿಯ ಸೋಲು ಜನತೆ ಕಾಂಗ್ರೆಸ್ ಹಾಗೂ ಬಿಜೆಪಿಯೇತರ ಪರ್ಯಾಯಕ್ಕೆ ಸ್ಪಷ್ಟ ಜನಾದೇಶ ನೀಡಿದ್ದಾರೆ ಎಂಬುದು ಈ ಚುನಾವಣಾ ಫಲಿತಾಂಶದಿಂದ ಗೊತ್ತಾಗುತ್ತಿದೆ.

ಅಮೆರಿಕದ ವ್ಯೂಹಾತ್ಮಕ ಯೋಜನೆಗಳು

ಏಷ್ಯಾ ಪೆಸಿಫಿಕ್ ಪ್ರದೇಶದಲ್ಲಿ ಭಾರತವನ್ನು ತನ್ನ ವ್ಯೂಹಾತ್ಮಕ ಕೇಂದ್ರವನ್ನಾಗಿ ಮಾಡುವ ಉದ್ದೇಶದೊಂದಿಗೆ ಅಮೆರಿಕದ ರಕ್ಷಣಾ ಕಾರ್ಯದರ್ಶಿ ಲಿಯೋನ್ ಪನೆಟ್ಟಾ ನವದೆಹಲಿಗೆ ಭೇಟಿ ನೀಡಿದ್ದರು. ಪನೆಟ್ಟ ಅವರ ಮಾತಿನಲ್ಲೇ ಹೇಳುವುದಾದರೆ ಏಷ್ಯಾದ ಕುರಿತಾಗಿನ ಅಮೆರಿಕದ ತಂತ್ರಗಾರಿಕೆಯಲ್ಲಿ ಭಾರತವೇ ಪ್ರಧಾನ ಕೇಂದ್ರವಾಗಿರುತ್ತದೆ. ಈ ಹಿನ್ನೆಲೆಯಲ್ಲಿ ಅಮೇರಿಕಾದೊಂದಿಗೆ ರಕ್ಷಣಾ ವಿಷಯ ಸೇರಿದಂತೆ ನಡೆಸುವ ವ್ಯೂಹಾತ್ಮಕ ಒಪ್ಪಂದದ ವೇಳೆ ಕೇಂದ್ರ ಸರ್ಕಾರ ಗಂಭೀರ ಎಚ್ಚರಿಕೆಯಿಂದ ಇರಬೇಕು. ಅಮೆರಿಕದ ಎಲ್ಲ ತಂತ್ರವನ್ನು ಸ್ಪಷ್ಟವಾಗಿ ತಿರಸ್ಕರಿಸಬೇಕು.

ಪುಟ 6 ಕ್ಕೆ



ವರದಿ : ವಾ.ಉ.

- ಮೀನು ಲಾರಿ ಚಾಲಕರ ಮೇಲೆ ಹಲ್ಲೆ ಖಂಡಿಸಿ
- ಗೃಹ ರಕ್ಷಕದಳ ಸಿಬ್ಬಂದಿ
- ದಲಿತರ ಮನೆ ಧ್ವಂಸ ಖಂಡಿಸಿ
- ಚಪ್ಪರದಡಿ ಪಾಠಕ್ಕೆ

ಪ್ರತಿಭಟನೆ

ಮೀನು ಸಾಗಣೆ ಲಾರಿ ಚಾಲಕರ ಮೇಲೆ ಹೊರ ರಾಜ್ಯಗಳಲ್ಲಿ ದೌರ್ಜನ್ಯ ಆಗುತ್ತಿರುವುದನ್ನು ವಿರೋಧಿಸಿ ಸಿಐಟಿಯು ದ.ಕ.ಜಿಲ್ಲಾ ಸಮಿತಿ ನೇತೃತ್ವದಲ್ಲಿ ಮೇ 24 ರಂದು ಮಂಗಳೂರು ಹಳೇ ಬಂದರು ದಕ್ಕೆ ಗೇಟು ಬಳಿ ಪ್ರತಿಭಟನೆ ನಡೆಯಿತು.

ಮೀನು ಸಾಗಣೆ ಲಾರಿಯಿಂದ ದುರ್ವಾಸನೆಯುಕ್ತ ನೀರು ರಸ್ತೆಗೆ ಬೀಳುತ್ತದೆ ಎಂದು ಆರೋಪಿಸಿ ಕೇರಳದ ಕೆಲವು ಕಡೆ ಚಾಲಕರ ಮೇಲೆ ಹಲ್ಲೆ ನಡೆಯುತ್ತಿದೆ. ಚಾಲಕರು ಭಯದಿಂದ ಕೆಲಸ ಮಾಡಬೇಕಾದ ವಾತಾವರಣ ಸೃಷ್ಟಿಯಾಗಿದೆ. ಮಾಲಕರು ಚಾಲಕರ ಸುರಕ್ಷತೆಗೆ ಸೂಕ್ತ ವ್ಯವಸ್ಥೆ ಮಾಡಬೇಕು ಎಂದು ಸಿಐಟಿಯು ದ.ಕ.ಜಿಲ್ಲಾ ಸಮಿತಿ ಕಾರ್ಯದರ್ಶಿ ವಸಂತ ಆಚಾರಿ ಆಗ್ರಹಿಸಿದರು. ಮೀನು ಸಾಗಣೆ ಲಾರಿ ಚಾಲಕರ ವೇತನ ಹೆಚ್ಚಿಸಿ ನಿವೇಶನ ಒದಗಿಸುವ ಮೂಲಕ ಚಾಲಕರ ಬದುಕಿಗೆ ಸಾಮಾಜಿಕ ಭದ್ರತೆ ನೀಡಬೇಕು ಎಂದು ಸಿಐಟಿಯು ಮಂಗಳೂರು ನಗರ ಸಮಿತಿ ಕಾರ್ಯ ದರ್ಶಿ ಸುನಿಲ್ ಕುಮಾರ್ ಬಜಾಲ್ ಒತ್ತಾಯಿಸಿದರು.

ಡಿವೈಎಫ್ಐ ನಗರ ಅಧ್ಯಕ್ಷ ಬಿ.ಕೆ.ಇಮ್ತಿಯಾಜ್, ಮೀನು ಮಾರುಕಟ್ಟೆ ಕಾರ್ಮಿಕರ ಸಂಘದ ಮಹಮ್ಮದ್ ಸಲೀಂ, ಮಂಗಳೂರು ದಕ್ಕೆ ಮೀನು ಲಾರಿ ಚಾಲಕರ ಸಂಘದ ಅಧ್ಯಕ್ಷ ಬಿ.ಕೆ.ಇಸ್ಮಾಯಿಲ್, ಅಬ್ದುಲ್ ಲತೀಫ್, ಅಮೀರ್ ಮತ್ತಿತರರು ಪ್ರತಿಭಟನೆಯಲ್ಲಿ ಪಾಲ್ಗೊಂಡಿದ್ದರು.

★

ಗೃಹ ರಕ್ಷಕದಳ ಸಿಬ್ಬಂದಿಗೆ ಸೌಲಭ್ಯಕ್ಕೆ ಆಗ್ರಹಿಸಿ ಮಂಗಳೂರಿನಲ್ಲಿ ಪ್ರತಿಭಟನೆ:

ಗೃಹರಕ್ಷಕ ದಳದ ಸಿಬ್ಬಂದಿಗೆ ವೇತನ, ಭತ್ಯೆ ನೀಡದೆ ಶೋಷಿಸಲಾಗುತ್ತಿದೆ. ಅಸಂಘಟಿತ ವಲಯದಲ್ಲಿ ದುಡಿಯುತ್ತಿರುವ ಅವರ ಮೇಲೆ ಮೇಲಾಧಿಕಾರಿಗಳು ದೌರ್ಜನ್ಯ ನಡೆಸುತ್ತಿದ್ದಾರೆ. ನೆರೆ ಹಾವಳಿ, ಬಂದೋಬಸ್ತ್, ಅಪಘಾತ ಮೊದಲಾದ ಸಂದರ್ಭ ಸೇವೆಗೈಯುವ ಅವರಿಗೆ ಸೂಕ್ತ ಭದ್ರತಾ ವ್ಯವಸ್ಥೆಯನ್ನು ಒದಗಿಸದೆ ಈ ಬಗ್ಗೆ ಮನವಿ ಸಲ್ಲಿಸಿ ಪ್ರತಿಭಟಿಸಿದರೆ ಸ್ಥಳೀಯ ಕಮಾಂಡೆಂಟ್ ಬೆದರಿಕೆ ಹಾಕುತ್ತಾರೆ, ಕೆಲಸದಿಂದ ತೆಗೆದು ಹಾಕುವ ಭಯ ಹುಟ್ಟಿಸುತ್ತಾರೆ. ಸರ್ಕಾರ ಅವರಿಗೆ ಕಡಿಮೆ ವೇತನ ನೀಡುತ್ತಿದೆ. ಮಾಸಿಕ ವೇತನವನ್ನು ನೀಡಲೂ 4-5 ತಿಂಗಳು ಸತಾಯಿಸಲಾಗುತ್ತದೆ ಎಂದು ದೂರಿ, ದ.ಕ.ಜಿಲ್ಲಾ ಗುತ್ತಿಗೆ ಕಾರ್ಮಿಕರ ಫೆಡರೇಶನ್ ವತಿಯಿಂದ ಜೂನ್ 4 ರಂದು ಮಂಗಳೂರಿನಲ್ಲಿ ಜಿಲ್ಲಾಧಿಕಾರಿಗಳ ಕಚೇರಿ ಎದುರು ಪ್ರತಿಭಟನೆ ನಡೆಸಲಾಯಿತು.

ದಿನಗೂಲಿ ಸಂಬಳ ರೂ.500/-ಕ್ಕೆ ಹೆಚ್ಚಿಸಬೇಕು, ಕೆಲಸ ಖಾಯಂ ಮಾಡಬೇಕು. ಸಾಮಾಜಿಕ ಭದ್ರತೆ ಒದಗಿಸಬೇಕು. ವೈದ್ಯಕೀಯ ಸೌಲಭ್ಯ ನೀಡಬೇಕು, ಕೆಲಸದ ಸಮಯ ನಿಗದಿ ಮಾಡಬೇಕು. ಮಹಿಳಾ ಸಿಬ್ಬಂದಿ ಮೇಲೆ ದೌರ್ಜನ್ಯ ನಿಲ್ಲಿಸಬೇಕು ಎಂಬುದು ಪ್ರಮುಖ ಬೇಡಿಕೆಗಳಾಗಿವೆ.

ಪ್ರತಿಭಟನೆಯನ್ನು ಉದ್ದೇಶಿಸಿ ಸಿಐಟಿಯು ದ.ಕ. ಜಿಲ್ಲಾ ಪ್ರಧಾನ ಕಾರ್ಯದರ್ಶಿ ವಸಂತ ಆಚಾರಿ, ಸಿಐಟಿಯು ಮಂಗಳೂರು ನಗರ ಸಮಿತಿ ಕಾರ್ಯದರ್ಶಿ ಸುನಿಲ್ ಕುಮಾರ್ ಬಜಾಲ್ ಮಾತನಾಡಿದರು ಗೃಹ ರಕ್ಷಕದಳ ಸಿಬ್ಬಂದಿಗಳ ಸಂಘಟಕ ಹಾಗೂ ದಲಿತ ಹಕ್ಕುಗಳ ಸಮಿತಿ ಸಂಚಾಲಕ ಲಿಂಗಪ್ಪ ನಂತೂರು ಸ್ವಾಗತಿಸಿ ವಂದಿಸಿದರು. ಲಿಂಗಪ್ಪ ನಂತೂರು, ಕೇಶವ ಶೆಟ್ಟಿಗಾರ ಮೊದಲಾದವರು ನೇತೃತ್ವ ವಹಿಸಿದ್ದರು.

★

ದಲಿತರ ಮನೆ ಧ್ವಂಸ ಖಂಡಿಸಿ ಪ್ರತಿಭಟನೆ:

ಮಂಗಳೂರು ನಗರದ ಬೊಕ್ಕಪಟ್ಣ ಬೆಂಗ್ರೆಯ ಸರಕಾರಿ ಜಾಗದಲ್ಲಿ ಕಳೆದ 36



ವರ್ಷಗಳಿಂದ ದಲಿತ ವರ್ಗದ ಸುಶೀಲಾರ ಕುಟುಂಬ ವಾಸವಾಗಿತ್ತು. ಮೇ 4 ರಂದು ತಹಶೀಲ್ದಾರರ ಸೂಚನೆ ಮೇರೆಗೆ ಪೋಲೀಸ್ ತಂಡ ಆಗಮಿಸಿ ಮನೆಯನ್ನು ಧ್ವಂಸ ಮಾಡಿದೆ. ಬೇರೆ ವ್ಯವಸ್ಥೆ ಇಲ್ಲದೆ ಈ ಕುಟುಂಬ ಮತ್ತೆ ಗುಡಿಸಲು ಕಟ್ಟಿ ವಾಸಿಸ ತೊಡಗಿದರೂ ಮೇ 26 ರಂದು ಮತ್ತೆದಾಳಿ ನಡೆಸಿದೆ. ದಲಿತರ ಮೇಲೆ ನಡೆಸಿದ ಈ ದೌರ್ಜನ್ಯದ ವಿರುದ್ಧ ಪಣಂಬೂರು ಪೋಲೀಸರಿಗೆ ದೂರು ನೀಡಿದರೂ ಅವರು ಕೂಡಾ ಸ್ಪಂದಿಸಿರುವುದಿಲ್ಲ.

ವಾಸಕ್ಕೆ ಮನೆಯೇ ಇಲ್ಲವಾಗುವಂತೆ ದಲಿತರ ಮನೆಯನ್ನು ಧ್ವಂಸಗೊಳಿಸಲು ನಿರ್ದೇಶನ ನೀಡುವ ದ.ಕ.ಜಿಲ್ಲಾಧಿಕಾರಿ ಮತ್ತು ಮಂಗಳೂರು ತಹಶೀಲ್ದಾರರ ನೀತಿಯನ್ನು ಖಂಡಿಸಿ, ಜಿಲ್ಲಾಧಿಕಾರಿ ಕಚೇರಿ ಎದುರು ಜೂನ್ 5ರಂದು ಸಿಪಿಐ(ಎಂ)ನ ದಲಿತ ಹಕ್ಕುಗಳ ಸಮಿತಿ ಪ್ರತಿಭಟನೆ ನಡೆಸಿತು.

ಸಮಿತಿಯ ನಗರ ಕಾರ್ಯದರ್ಶಿ ಲಿಂಗಪ್ಪ ನಂತೂರು ಪ್ರತಿಭಟನಾಕಾರರನ್ನುದ್ದೇಶಿಸಿ ಮಾತನಾಡಿದರು. ಸಮಿತಿಯ ಪದಾಧಿಕಾರಿಗಳಾದ ತಿಮ್ಮಯ್ಯ ಕೊಂಚಾಡಿ, ಕಿಶೋರ್ ಪೊರ್ಕೋಡಿ ಮತ್ತಿತರರು ಸಂತ್ರಸ್ತ ದಲಿತ ಕುಟುಂಬದವರು ಮತ್ತು ಸ್ಥಳೀಯರೊಂದಿಗೆ ಪ್ರತಿಭಟನೆಯಲ್ಲಿ ಭಾಗವಹಿಸಿದ್ದರು.

★

ಚಪ್ಪರದಡಿ ಪಾಠಕ್ಕೆ ಎಸ್‌ಎಫ್ಐ ಪ್ರತಿಭಟನೆ

ಮಂಗಳೂರು ತಾಲೂಕಿನ ಪಾವೂರು ಗ್ರಾಮದ ಸರ್ಕಾರಿ ಪ್ರೌಢಶಾಲೆಯು ಹಲವು ವರ್ಷಗಳ ಹಿಂದೆಯೇ ಪ್ರಾರಂಭವಾಗಿದ್ದರೂ ತುಂಬಾ ಮಕ್ಕಳು ಓದುತ್ತಿರುವ ಈ ಶಾಲೆಯಲ್ಲಿ ಸಾಕಷ್ಟು ಕೊಠಡಿಗಳಿರುವುದಿಲ್ಲ. ಈ ವರ್ಷ ಶಾಲಾ ಮೈದಾನದಲ್ಲಿ ತಗಡಿನ ಚಪ್ಪರ ನಿರ್ಮಿಸಿ 2 ತರಗತಿ ಕೊಠಡಿಗಳನ್ನು ನಡೆಸಲಾಗುತ್ತಿತ್ತು. ಈ ಚಪ್ಪರದ ಕೊಠಡಿಗಳನ್ನು ಜೂನ್ 1 ರಂದು ಶಾಸಕರೇ ಬಂದು ಉದ್ಘಾಟಿಸಿದರು.

ಸರ್ಕಾರಿ ಶಾಲೆಗೆ ಅವಶ್ಯವಿರುವ ಕೊಠಡಿಗಳನ್ನು ಒದಗಿಸಿ ಕೊಡುವಲ್ಲಿ ಸರ್ಕಾರದ ನಿರ್ಲಕ್ಷ್ಯ ಧೋರಣೆಯನ್ನು ಖಂಡಿಸಿ ಪಾವೂರು ಶಾಲೆಯ ವಿದ್ಯಾರ್ಥಿಗಳು ಎಸ್‌ಎಫ್ಐ ದ.ಕ.ಜಿಲ್ಲಾ ಸಮಿತಿ ನೇತೃತ್ವದಲ್ಲಿ ಜೂನ್ 8 ರಂದು ಶಾಲೆಯೆದುರು ಪ್ರತಿಭಟನೆ ನಡೆಸಿದರು. ಎಸ್‌ಎಫ್ಐ ರಾಜ್ಯ ಸಮಿತಿ ಮುಖಂಡರಾದ ಜೀವನ್‌ರಾಜ್ ಕುತ್ತಾರ್, ಜಿಲ್ಲಾ ಸಮಿತಿ ಮುಖಂಡರಾದ ನಿತಿನ್ ಕುತ್ತಾರ್, ಧನರಾಜ್ ಮಂಜನಾಡಿ, ರಜಾಕ್ ಮೊಂಟೆಪದವು ಮೊದಲಾದವರು ಪ್ರತಿಭಟನೆಯಲ್ಲಿ ಭಾಗವಹಿಸಿದರು.

ಶಾಲೆಗೆ ಸೂಕ್ತ ಕೊಠಡಿಯನ್ನು ಸರಕಾರ ನಿರ್ಮಿಸಿ ಕೊಡದಿದ್ದಲ್ಲಿ ಮುಂದಿನ ದಿನಗಳಲ್ಲಿ ದೊಡ್ಡ ಮಟ್ಟದ ಹೋರಾಟ ನಡೆಸಲಿದ್ದೇವೆ ಎಂದು ಪ್ರತಿಭಟನಾಕಾರರು ಎಚ್ಚರಿಸಿದರು. ●

ಜನರ ಬದುಕು ದುರ್ಬರ

ಪುಟ 5 ರಿಂದ

ಸಿರಿಯಾದಲ್ಲಿ ನಡೆಯುತ್ತಿರುವ ವಿದ್ಯಮಾನದ ಕುರಿತು ಕೊಲ್ಲಿ ರಾಷ್ಟ್ರಗಳು ಮತ್ತು ಅಮೇರಿಕಾ ನ್ಯಾಟೋ ತೆಗೆದುಕೊಳ್ಳುವ ನಿಲುವಿಗೆ ತಲೆಬಾಗದಂತೆ ಸಿಪಿಐ(ಎಂ) ಕೇಂದ್ರ ಸಮಿತಿ ಸರ್ಕಾರಕ್ಕೆ ಕರೆ ನೀಡಿದೆ. ಸಿರಿಯಾವನ್ನು ಅಸ್ಥಿರಗೊಳಿಸುವ, ಅಲ್ಲಿ ಪ್ರಜಾತಂತ್ರವನ್ನು ಬುಡಮೇಲು ಮಾಡುವ ಯಾವುದೇ ನಿರ್ಧಾರದಲ್ಲಿ ಭಾರತ ಸರ್ಕಾರ ಭಾಗಿಯಾಗಬಾರದು.

ಇರಾನ್‌ನಿಂದ ತೈಲ ಖರೀದಿಯಲ್ಲಿ ಗಣನೀಯ ಕಡಿತ ಮಾಡಿದ ಕೇಂದ್ರ ಸರ್ಕಾರವನ್ನು ಸಿಪಿಐ(ಎಂ) ತೀವ್ರವಾಗಿ ತರಾಟೆಗೆ ತೆಗೆದುಕೊಂಡಿದೆ. ಅಮೇರಿಕದ ಒತ್ತಡಗಳಿಗೆ ಮಣಿದು ಈ ನಿರ್ಧಾರ ತೆಗೆದುಕೊಳ್ಳಲಾಗಿದೆ. ದೇಶದ ಇಂಧನ ಭದ್ರತೆಯಂತಹ ಪ್ರಮುಖ ವಿಷಯಗಳಲ್ಲಿ ರಾಜಿ ಮಾಡಿಕೊಳ್ಳುವುದು, ಬಾಹ್ಯ ಒತ್ತಡಗಳಿಗೆ ತಲೆಬಾಗುವುದು ಸರಿಯಲ್ಲ ಎಂದು ಕೇಂದ್ರ ಸಮಿತಿ ಅಭಿಪ್ರಾಯಪಟ್ಟಿದೆ.

ಆಹಾರ ಭದ್ರತೆಗಾಗಿ ಜನಾಂದೋಲನ

ಆಹಾರ ಭದ್ರತೆ ಮತ್ತು ಸಾರ್ವತ್ರಿಕ ಪಡಿತರ ವ್ಯವಸ್ಥೆಗಾಗಿ ಎಡಪಕ್ಷಗಳು ಕರೆ ನೀಡಿರುವ ಜನಾಂದೋಲನವನ್ನು ಕೇಂದ್ರ ಸಮಿತಿ ಅನುಮೋದಿಸಿದೆ. ಎಪಿಎಲ್ ಮತ್ತು ಬಿಪಿಎಲ್ ಪಡಿತರ ಚೀಟಿದಾರರನ್ನೂ ಒಳಗೊಂಡ ಸಾರ್ವತ್ರಿಕ ಸಾರ್ವಜನಿಕ ವಿತರಣ ವ್ಯವಸ್ಥೆಯನ್ನು ಜಾರಿಗೆ ತರಬೇಕೆಂಬ ಬೇಡಿಕೆಯನ್ನು ಇಟ್ಟುಕೊಂಡು ಈ ದೇಶವ್ಯಾಪಿ ಚಳವಳಿ ನಡೆಯಲಿದೆ. ಕುಟುಂಬವೊಂದಕ್ಕೆ 35 ಕೆ.ಜಿ. ಅಕ್ಕಿ ಎರಡು ರೂಪಾಯಿಗೆ ಮೀರದಂತೆ ತಲುಪಿಸುವ ವ್ಯವಸ್ಥೆ ಜಾರಿಗೊಳ್ಳಬೇಕು ಎಂಬ ಪ್ರಧಾನ ಬೇಡಿಕೆಯನ್ನು ಇಟ್ಟುಕೊಂಡು ಜುಲೈನಲ್ಲಿ ತಿಂಗಳುಪೂರ್ತಿ ಈ ಹೋರಾಟ ನಡೆಯಲಿದೆ. ಎಡಪಕ್ಷಗಳು ಕೈಗೆತ್ತಿಕೊಂಡಿರುವ ಈ ಹೋರಾಟ ಬ್ಲಾಕ್‌ಮಟ್ಟದಲ್ಲಿ ವಿವಿಧ ರೀತಿಯಲ್ಲಿ ನಡೆಯಲಿದೆ. ದೆಹಲಿಯಲ್ಲಿ ಸಂಸತ್ತಿನ ಮಳೆಗಾಲದ ಅಧಿವೇಶನದ ವೇಳೆ, ಜುಲೈ 30ರಿಂದ ಆಗಸ್ಟ್ 3ರವರೆಗೆ ನಿರಂತರ ಧರಣಿ ಮೂಲಕ ಈ ಹೋರಾಟದ ಅಭಿಯಾನ ಕೊನೆಗೊಳ್ಳಲಿದೆ. ಅಂತಿಮ ಹಂತದ ಈ ನಿರ್ಣಾಯಕ ಹೋರಾಟದಲ್ಲಿ ದೇಶವ್ಯಾಪಿಯಿಂದ ಲಕ್ಷಾಂತರ ಮಂದಿ ಭಾಗವಹಿಸಲಿದ್ದಾರೆ.

ಕೇಂದ್ರ ಕಾರ್ಯದರ್ಶಿ ಮಂಡಳಿ ಆಯ್ಕೆ

ಆರು ಮಂದಿಯನ್ನು ಒಳಗೊಂಡ ಕೇಂದ್ರ ಕಾರ್ಯದರ್ಶಿ ಮಂಡಳಿಯನ್ನು ಕೇಂದ್ರ ಸಮಿತಿ ಆಯ್ಕೆ ಮಾಡಿತು. ಪ್ರಕಾಶ್ ಕಾರಟ್, ಹರಿಸಿಂಗ್ ಕಾಂಗ್, ಹನನ್ ಮೊಲ್ಲಾ, ನೀಲೋತ್ಪಲ್ ಬಸು, ವಿ. ಶ್ರೀನಿವಾಸ ರಾವ್ ಮತ್ತು ಜೋಗಿಂದರ್ ಶರ್ಮಾ ಅವರು ಈ ಸಮಿತಿಯ ಸದಸ್ಯರಾಗಿದ್ದಾರೆ.

ಕೇಂದ್ರೀಯ ಶಿಸ್ತು ಸಮಿತಿ

ಇದೇ ವೇಳೆ, ಸಭೆ ಕೇಂದ್ರೀಯ ಶಿಸ್ತು ಸಮಿತಿಯನ್ನೂ ಚುನಾಯಿಸಿತು. ಎಸ್. ರಾಮಚಂದ್ರನ್ ಪಿಳ್ಳೆ ಈ ಸಮಿತಿಯ ಅಧ್ಯಕ್ಷರಾಗಿರುತ್ತಾರೆ. ಮದನ್ ಘೋಷ್, ವಿ. ಶ್ರೀನಿವಾಸ ರಾವ್ ಮತ್ತು ಯು. ವಾಸುಕಿ ಸಮಿತಿಯ ಸದಸ್ಯರಾಗಿರುತ್ತಾರೆ. ●

ಜನಶಕ್ತಿ
ಕನ್ನಡ ವಾರಪತ್ರಿಕೆ

ಮುಂದಿನ ಪ್ರಧಾನಮಂತ್ರಿ ಯಾರಾಗಬೇಕು? :

ಆರೆಸ್ಸೆಸ್/ಬಿಜೆಪಿ ಗಾಳಿಗೋಪುರ

ಮುಂದಿನ ಪ್ರಧಾನ ಮಂತ್ರಿ ಯಾರಾಗಬೇಕು ಎಂಬ ಬಗ್ಗೆ ಆರೆಸ್ಸೆಸ್/ಬಿಜೆಪಿ ಮುಖಂಡರ ನಡುವಿನ ಸಾರ್ವಜನಿಕ ಉಗುಳಾಟಗಳು ಸ್ವಲ್ಪ ರಾಜಕೀಯ ಮನರಂಜನೆ ಕೊಡಬಹುದಾದರೂ, ಮುಂದಿನ ಕೇಂದ್ರ ಸರಕಾರವನ್ನು ರಚಿಸುವವರು ತಾವೇ ಎಂದು ಅವರು ನಿರೀಕ್ಷಿಸುತ್ತಿದ್ದಾರೆ ಎಂಬುದೇ ಅನಿಷ್ಟಕಾರಿ. ಗುಜರಾತಿನ ಹತ್ಯಾಕಾಂಡ, ಅವರ ಅಡಿಯಲ್ಲಿ ಅಮಾನವೀಯ ಕ್ರಿಮಿನಲ್ ಬುದ್ಧಿಯ ಆಳ ಎಷ್ಟಿರಬಲ್ಲುದು, ಧಾರ್ಮಿಕ ಅಲ್ಪಸಂಖ್ಯಾತರ ಭದ್ರತೆಗೆ ಎಂತಹ ಗಂಭೀರ ಸಂಚಕಾರ ಇರಬಲ್ಲುದು ಎಂಬುದನ್ನು ದೇಶಕ್ಕೆ ಮತ್ತು ಜಗತ್ತಿಗೇ ತೋರಿಸಿಕೊಟ್ಟಿದೆ. ಇತ್ತ ಮೋದಿಯ ನೇತೃತ್ವದಲ್ಲಿ 'ಚೈತನ್ಯಶೀಲ ಗುಜರಾತ್' ಎಂಬ ಮಿಥ್ಯೆ ಬಯಲಿಗೆ ಬಂದಿದೆ. ನಮ್ಮ ಜಾತ್ಯಾತೀತ ಪ್ರಜಾಸತ್ತಾತ್ಮಕ ಗಣರಾಜ್ಯವನ್ನು ರಕ್ಷಿಸಿಕೊಳ್ಳಲು ಭಾರತೀಯ ಜನತೆ ಎಷ್ಟು ಬದ್ಧರಾಗಿದ್ದಾರೆ, ದೃಢತೆಯಿಂದಿದ್ದಾರೆ ಎಂಬುದು ಮತ್ತೊಮ್ಮೆ ಪರೀಕ್ಷೆಗೆ ಒಳಪಡಬಹುದು.

'ಪೀಪಲ್ಸ್ ಡೆಮಾಕ್ರೆಸಿ' ವಾರಪತ್ರಿಕೆಯ ಜೂನ್ 14, 2012 ಸಂಚಿಕೆಯ ಸಂಪಾದಕೀಯ


ಆರೆಸ್ಸೆಸ್ ಮತ್ತು ಅದರ ರಾಜಕೀಯ ಅಂಗ ಬಿಜೆಪಿ, ಗಾಳಿಯಲ್ಲಿ ಗೋಪುರ ಕಟ್ಟುತ್ತಿರುವಂತೆ ಕಾಣುತ್ತಿದೆ. ಮುಂದಿನ ಸಾರ್ವತ್ರಿಕ ಚುನಾವಣೆಗಳಿಗೆ ಇನ್ನೂ ಎರಡು ವರ್ಷಗಳಿವೆ. ಅಷ್ಟರಲ್ಲೇ ಮುಂದಿನ ಪ್ರಧಾನ ಮಂತ್ರಿ ಯಾರಾಗಬೇಕು ಎಂದು ಒಂದು ತೀವ್ರ ಆಂತರಿಕ ಕಿತ್ತಾಟ ಸಾರ್ವಜನಿಕವಾಗಿಯೇ ಪ್ರದರ್ಶಿತವಾಗುತ್ತಿದೆ. ಆ ಹಳೆಯ ಯುದ್ಧಕುದುರೆ, ಶ್ರೀಯುತ ಅಡ್ವಾಣಿ ಎಂದೂ 'ಕೈಚೆಲ್ಲದೆ' ಇರುವ ತನ್ನ ನಿಲುವಿಗೆ ಅಂಟಿಕೊಂಡೇ ಇದ್ದಾರೆ. ಬಿಜೆಪಿ ಅಧ್ಯಕ್ಷರು ಸ್ವಲ್ಪ ರಾಜಕೀಯ ತೂಕವನ್ನು ಹೆಚ್ಚಿಸಿಕೊಂಡು ಅರ್ಹತೆ ಗಳಿಸುವ ನಿರೀಕ್ಷೆಯಿಂದ ದೈಹಿಕ ತೂಕವನ್ನು ಇಳಿಸಿ ಕೊಳ್ಳುತ್ತಿದ್ದಾರೆ. ಎರಡೂ ಸದನಗಳಲ್ಲಿನ ಪ್ರತಿಪಕ್ಷದ ಮುಖಂಡರಿಬ್ಬರೂ ಸ್ಪರ್ಧೆಗೆ ಸೇರಿಕೊಂಡಿದ್ದಾರೆ. ಸದ್ಯಕ್ಕೆ ಸಂಸತ್ತಿನಲ್ಲಿರುವ ಮಾಜಿ ಬಿಜೆಪಿ ಅಧ್ಯಕ್ಷರುಗಳು ಕೂಡ ಆಸೆ ಕೈಬಿಟ್ಟಿಲ್ಲ.

ಆದರೆ ಇವರೆಲ್ಲರಿಗಿಂತಲೂ ಹೆಚ್ಚು ಆತುರ ಗುಜರಾತಿನ ಮುಖ್ಯಮಂತ್ರಿ ಶ್ರೀಯುತ ನರೇಂದ್ರ ಮೋದಿಗೆ ಇರುವಂತಿದೆ. ತಾನು ಹೆಚ್ಚು ಬಲಿಷ್ಟ ಮತ್ತು ಭಾರತದ ಜಾತ್ಯಾತೀತ ಪ್ರಜಾಸತ್ತಾತ್ಮಕ ಗಣತಂತ್ರವನ್ನು ಒಂದು ಅತ್ಯಂತ ಉನ್ಮತ್ತ ಅಸಹಿಷ್ಣು ಫ್ಯಾಸಿಸ್ಟ್ ಮಾದರಿಯ 'ಹಿಂದೂರಾಷ್ಟ್ರ'ವಾಗಿ ಪರಿವರ್ತಿಸುವ ಆರೆಸ್ಸೆಸ್ ಗುರಿಯ ಸ್ಥಾಪನೆಗಾಗಿ ಜನಾಂಗೀಯ ಶುದ್ಧೀಕರಣದ ಆರೆಸ್ಸೆಸ್ ಸೈದ್ಧಾಂತಿಕ ಯೋಜನೆಯನ್ನು ಪರಿಣಾಮಕಾರಿಯಾಗಿ ಜಾರಿಗೊಳಿಸಬಲ್ಲೆ ಎಂದು ಪ್ರದರ್ಶಿಸಿದ್ದಾರೆ. ತನ್ನ ದೀರ್ಘಕಾಲದ ಪ್ರತಿಸ್ಪರ್ಧಿ, ಸ್ವಲ್ಪ ಪ್ರತಿಷ್ಠೆಯಿರುವ ಆರೆಸ್ಸೆಸ್ ಪ್ರಚಾರಕ ಸಂಜಯ ಜೋಷಿಯನ್ನು ಬದಿಗೆ ತಳ್ಳುವಲ್ಲಿ ಆತ ಯಶಸ್ವಿಯಾಗಿದ್ದಾರೆ. ವಾಜಪೇಯಿಯವರನ್ನು 'ಮುಖೌಟಾ'(ಮುಖವಾಡ) ಎಂದು ಕರೆದದ್ದಕ್ಕೆ ಗೋವಿಂದಾಚಾರ್ಯರನ್ನು ಓಡಿಸಿದ್ದು ನಿಮಗೆ ನೆನಪಿದೆಯೇ? ಹಿಂದೂ ಕೋಮುವಾದಿ ಧ್ರುವೀಕರಣವನ್ನು ಕ್ರೋಡೀಕರಿಸುವ ನಿರೀಕ್ಷೆಯಿಂದ ಮತ್ತು ಮಹಾರಾಷ್ಟ್ರದಲ್ಲಿ ಉತ್ತರ ಭಾರತೀಯರ ಮೇಲೆ, ನಿರ್ದಿಷ್ಟವಾಗಿ ಬಿಹಾರಿಗಳ ಮೇಲೆ ಶಿವಸೇನೆಯ ದಾಳಿಗಳಿಂದ ಪಾಠ ಕಲಿತು ಆತನೀಗ ಬಿಹಾರದ ಮುಖ್ಯಮಂತ್ರಿ ನಿತೀಶ್ ಕುಮಾರ್ ಮೇಲೆ ವಾಕ್ಸಮರ ಸಾರಿದ್ದಾರೆ. ಎನ್‌ಡಿಎ ಎಲ್ಲಾದರೂ ಅಧಿಕಾರಕ್ಕೆ ಬಂದರೆ ಪ್ರಧಾನ ಮಂತ್ರಿಯಾಗುವ ತನ್ನ ಅವಕಾಶಕ್ಕೆ ಯಾರಾದರೂ ಬೆದರಿಕೆಯಾಗುವ ಸಾಧ್ಯತೆಯಿದ್ದರೆ ಅದು ಈತನೇ ಎಂದು ಆತ ಭಾವಿಸಿರುವಂತಿದೆ.

ಆ ದಶಕ ಮರುಕಳಿಸದಿರಲಿ

ಆರೆಸ್ಸೆಸ್/ಬಿಜೆಪಿ ಮುಖಂಡರ ನಡುವೆ ಇಂತಹ ಸಾರ್ವಜನಿಕ ಉಗುಳಾಟಗಳು ಸ್ವಲ್ಪ ರಾಜಕೀಯ ಮನರಂಜನೆ ಕೊಡಬಹುದಾದರೂ, ಮುಂದಿನ ಕೇಂದ್ರ ಸರಕಾರವನ್ನು ರಚಿಸುವವರು ತಾವೇ ಎಂದು ಅವರು ನಿರೀಕ್ಷಿಸುತ್ತಿದ್ದಾರೆ ಎಂಬುದೇ ಅನಿಷ್ಟಕಾರಿ. ಆರೆಸ್ಸೆಸ್‌ನ ಕಣ್ಣೋಟ 'ಭಾರತ ಎಂಬ ಕಲ್ಪನೆ'ಗೇ, ಅದು ಒಂದು ಬಹುಧರ್ಮೀಯ, ಬಹುಭಾಷಿಕ, ಬಹುಜನಾಂಗೀಯ, ಬಹು ಸಾಮಾಜಿಕ-ಸಾಂಸ್ಕೃತಿಕ, ಜಾತ್ಯಾತೀತ ಪ್ರಜಾಸತ್ತಾತ್ಮಕ ಗಣತಂತ್ರ ಎಂಬುದಕ್ಕೇ ತದ್ವಿರುದ್ಧವಾಗಿ ಮತ್ತು ವೈರುಧ್ಯಪೂರ್ಣವಾಗಿ ನಿಲ್ಲುವಂತದ್ದು.

ಗುಜರಾತಿನ ಹತ್ಯಾಕಾಂಡ, ಅವರ ಅಡಿಯಲ್ಲಿ ಅಮಾನವೀಯ ಕ್ರಿಮಿನಲ್ ಬುದ್ಧಿಯ



ಆಳ ಎಷ್ಟಿರಬಲ್ಲುದು, ಧಾರ್ಮಿಕ ಅಲ್ಪಸಂಖ್ಯಾತರ ಭದ್ರತೆಗೆ ಎಂತಹ ಗಂಭೀರ ಸಂಚಕಾರ ಇರಬಲ್ಲುದು ಎಂಬುದನ್ನು ದೇಶಕ್ಕೆ ಮತ್ತು ಜಗತ್ತಿಗೇ ತೋರಿಸಿಕೊಟ್ಟಿದೆ. ಸುಪ್ರಿಂ ಕೋರ್ಟ್ ನೇಮಿಸಿದ ಅಮೈಕಸ್ ಕ್ಯುಆರಿ(ಅಂದರೆ ತನಗೆ ನೆರವಾಗಲು ನ್ಯಾಯಾಲಯ ನೇಮಿಸುವ 'ನ್ಯಾಯಾಲಯ ಮಿತ್ರ')ಯ ವರದಿಯಿದ್ದರೂ ಮೋದಿಯ ವಿರುದ್ಧ ಯಾವುದೇ ಮೊಕದ್ದಮೆಯನ್ನು ದಾಖಲಿಸಿಲ್ಲ. ಒಂದು ದಶಕ್ಕೂ ಹೆಚ್ಚು ಕಾಲ ದೇಶಪ್ರೇಮಿ ಭಾರತೀಯರ ರಕ್ತ ಚೆಲ್ಲಿದ ಛಿದ್ರಕಾರಿ ಕೃತ್ಯಗಳು ಮತ್ತು ಕೋಮು ದಂಗೆಗಳ ನಂತರ 2004ರ ಸಾರ್ವತ್ರಿಕ ಚುನಾವಣೆಗಳಲ್ಲಿ ಬಿಜೆಪಿ ನೇತೃತ್ವದ ಎನ್‌ಡಿಎ ಸರಕಾರದ ಸೋಲಿನೊಂದಿಗೆ ಜಾತ್ಯಾತೀತ ಪ್ರಜಾಸತ್ತಾತ್ಮಕ ಗಣತಂತ್ರವನ್ನು ಕ್ರೋಡೀಕರಿಸುವ ಎಳೆಗಳನ್ನು ಮತ್ತೆ ಹೆಕ್ಕಿ ಹಿಡಿಯಲು ಸಾಧ್ಯವಾಯಿತು. ದೇಶ ಮತ್ತೆ ಆ ಕೋಮುವಾದಿ ಊನಕಾರ್ಯದ ಸನ್ನಿವೇಶಕ್ಕೆ ಹಿಂದಿರುಗಲು ಬಿಡಲಾಗದು.

ಮೋದಿಯ ಗುಜರಾತಿನ ಮಿಥ್ಯೆ

ಈ ಹಿಂದೆ ಯೋಜನಾ ಆಯೋಗದ ಸದಸ್ಯರಾಗಿದ್ದ, ಈಗ ರಾಜ್ಯಸಭೆಯ ಸದಸ್ಯರಾಗಿರುವ ಬಾಲಚಂದ್ರ ಮುಂಗೇಕರ್ ಇತ್ತೀಚೆಗೆ ಮೋದಿಯ ನೇತೃತ್ವದಲ್ಲಿ ಒಂದು ಚೈತನ್ಯಶೀಲ ಗುಜರಾತ್ ಎಂಬ ಮಿಥ್ಯೆಯನ್ನು ಬಯಲಿಗೆಳೆದಿದ್ದಾರೆ. ಬೆಳವಣಿಗೆ ದರ, ತಲಾ ಆದಾಯ ಇತ್ಯಾದಿ ಯಾವುದೇ ಆರ್ಥಿಕ ಸೂಚ್ಯಂಕದ ಪ್ರಕಾರ ಮೊದಲ ಸ್ಥಾನದಲ್ಲಿರುವ ರಾಜ್ಯವಲ್ಲ ಎರಿದು ಅವರು ತೋರಿಸುತ್ತಾರೆ.

ಮಾನವ ಅಭಿವೃದ್ಧಿ ಸೂಚ್ಯಂಕ(ಹೆಚ್‌ಡಿಐ)ದ ಪ್ರಕಾರ ಗುಜರಾತದ ಕತೆ ವಿಧ್ವಂಸಕಾರಿ. 2008ರಲ್ಲಿ ಅದು 0.527 ಇದ್ದು, ಪ್ರಮುಖ ರಾಜ್ಯಗಳಲ್ಲಿ ಅದು ಹತ್ತನೆಯ ಸ್ಥಾನದಲ್ಲಿತ್ತು. ಕೇರಳ ಮೊದಲ ಸ್ಥಾನದಲ್ಲಿತ್ತು(ಎಚ್‌ಡಿಐ 0.790), ಹಿಮಾಚಲ ಪ್ರದೇಶದ್ದು 0.652, ಪಂಜಾಬ್ 0.605, ಮಹಾರಾಷ್ಟ್ರ 0.572 ಮತ್ತು ಹರ್ಯಾಣ 0.552. ಮೂರು ಹೆಚ್‌ಡಿಐ ಅಂಗಗಳಿಗೆ-ಆದಾಯ, ಆರೋಗ್ಯ ಮತ್ತು ಶಿಕ್ಷಣ-ಸಂಬಂಧಪಟ್ಟಂತೆ ಗುಜರಾತಿನದ್ದು ಹೊಳೆಯುವ ಕತೆಯೇನಲ್ಲ. ಕೇರಳ ಈ ಪ್ರತಿಯೊಂದರಲ್ಲಿ ಮೊದಲ ಸ್ಥಾನದಲ್ಲಿದ್ದರೆ, ಪಂಜಾಬ್, ಹಿಮಾಚಲ ಪ್ರದೇಶ, ಹರ್ಯಾಣ, ಮಹಾರಾಷ್ಟ್ರ, ತಮಿಳುನಾಡು ಮತ್ತು ಪಶ್ಚಿಮ ಬಂಗಾಳ ರಾಜ್ಯಗಳು ಗುಜರಾತಿಗಿಂತ ಉತ್ತಮ ಸಾಧನೆ ತೋರಿಸಿವೆ.

ಆದಾಯ, ಆರೋಗ್ಯ ಮತ್ತು ಶಿಕ್ಷಣಕ್ಕೆ ಸಂಬಂಧಪಟ್ಟಂತೆ ಅಸಮಾನತೆ ಗುಜರಾತಿನಲ್ಲಿ ಕೆಲವು ಪ್ರಮುಖ ರಾಜ್ಯಗಳಿಗಿಂತ ಹೆಚ್ಚಿರುವುದು ಕಂಡು ಬಂದಿದೆ. ಆಘಾತಕಾರಿ ಸಂಗತಿಯೆಂದರೆ, ಹಸಿವಿನ ಸೂಚ್ಯಂಕದಲ್ಲಿ. 2008ರ ರಾಜ್ಯ ಹಸಿವಿನ ಸೂಚ್ಯಂಕದ ಪ್ರಕಾರ, ಗುಜರಾತಿನದ್ದು 17 ದೊಡ್ಡ ರಾಜ್ಯಗಳಲ್ಲಿ 13ನೇಯ ಸ್ಥಾನ, ಒರಿಸ್ಸಾಕ್ಕಿಂತಲೂ ಕೆಳಗಿನದ್ದು.

ಗುಜರಾತಿನಲ್ಲಿ ರಕ್ತಹೀನತೆಯಿಂದ ನರಳುತ್ತಿರುವ ಮಹಿಳೆಯರ ಶೇ. 1999ರಲ್ಲಿ 46.3 ಇತ್ತು, 2004ರಲ್ಲಿ ಅದು 55.5ಶೇ.ಕ್ಕೇರಿತು; ಮಕ್ಕಳಲ್ಲಿ 74.5ಶೇ.ದಿಂದ 80.1 ಶೇ.ಕ್ಕೇರಿತು. ಕಳೆದ ಒಂದು ದಶಕದಲ್ಲಿ ದಲಿತರು ಮತ್ತು ಮಹಿಳೆಯರ ಪರಿಸ್ಥಿತಿಗಳು ಹದಗೆಟ್ಟರೆ, ಮುಸ್ಲಿಮರು ಮತ್ತು ಬುಡಕಟ್ಟು ಜನಗಳ ಪರಿಸ್ಥಿತಿ ಇನ್ನೂ ಕೆಟ್ಟದ್ದಾಗಿದೆ.

ಒಂದು ಗಣನೀಯ ವೈರುಧ್ಯ

ಆರೆಸ್ಸೆಸ್/ಬಿಜೆಪಿ ತಮ್ಮ ಕನಸನ್ನು ಈಡೇರಿಸಿಕೊಳ್ಳುವ ಪ್ರಯತ್ನಗಳಿಗೆ ಸಂಬಂಧಪಟ್ಟಂತೆ ಇನ್ನೂ ಒಂದು ಗಣನೀಯ ವೈರುಧ್ಯ ಇದೆ. ಅವರ ಮೂಲ ಬೆಂಬಲ ನೆಲೆ ಅವರು ಉಂಟು ಮಾಡಬಲ್ಲ ಕೋಮುವಾದಿ ಧ್ರುವೀಕರಣದ ತೀವ್ರತೆಯನ್ನು ಅವಲಂಬಿಸಿದೆ. ಆದರೆ ಏಕಾಂಗಿಯಾಗಿ ಬಹುಮತ ಗಳಿಸಲು ಅವರು ಈ ಹಿಂದೆ ಮಾಡಿದ ಪ್ರಯತ್ನಗಳೆಲ್ಲಾ ವಿಫಲವಾದ ಮೇಲೆ ಅವರು ಮಿತ್ರರ ಶೋಧನೆಗೆ ಇಳಿಯಲೇ ಬೇಕಾಯಿತು. ಎನ್‌ಡಿಎ ಹುಟ್ಟಿದ್ದು ಹಾಗೆ. ಈ ಮಿತ್ರಪಕ್ಷಗಳು ಅಧಿಕಾರದಲ್ಲಿ ಪಾಲು ಪಡೆಯಲು, ಮಂತ್ರಿ ಹುದ್ದೆಗಳನ್ನು ಗಳಿಸಿಕೊಳ್ಳಲು ಅವರ ಜೊತೆಗೆ ಹೋಗಬಹುದು, ಆದರೆ ತಮ್ಮ ರಾಜ್ಯಗಳಲ್ಲಿ ತಮ್ಮದೇ ರಾಜಕೀಯ ಕಾರಣಗಳಿಗಾಗಿ, ಅಲ್ಪಸಂಖ್ಯಾತರ ಬೆಂಬಲವನ್ನು ಉಳಿಸಿಕೊಳ್ಳುವ ಅಗತ್ಯದಿಂದಾಗಿ, ಕೋಮುವಾದಿ ಧ್ರುವೀಕರಣವನ್ನು ತೀವ್ರಗೊಳಿಸಬಹುದಾದ ಕಾರ್ಯಕ್ರಮದಲ್ಲಿ ಅವರ ಜೊತೆಗಿರಲಾರರು. ಈ ಒಂದು ವೈರುಧ್ಯವನ್ನು ತೃಪ್ತಿಕರವಾಗಿ ಬಗೆಹರಿಸುವ ಸಾಮರ್ಥ್ಯ ಆರೆಸ್ಸೆಸ್/ಬಿಜೆಪಿಗೆ ಈಗಲೂ ಇಲ್ಲ.

ಮುಂದಿನ ಸಾರ್ವತ್ರಿಕ ಚುನಾವಣೆಗಳ ವರೆಗಿನ ಈ ಕಾಲಾವಧಿಯಲ್ಲಿ ಈ ವೈರುಧ್ಯಗಳು ಹೇಗೆ ಪ್ರಕಟಗೊಳ್ಳಬಹುದು ಎಂಬುದನ್ನು ಸಮಯವೇ ನಮಗೆ ತೋರಿಸುತ್ತದೆ. ಆದರೆ, ನಮ್ಮ ಜಾತ್ಯಾತೀತ ಪ್ರಜಾಸತ್ತಾತ್ಮಕ ಗಣರಾಜ್ಯವನ್ನು ರಕ್ಷಿಸಿಕೊಳ್ಳಲು ಭಾರತೀಯ ಜನತೆ ಎಷ್ಟು ಬದ್ಧರಾಗಿದ್ದಾರೆ, ದೃಢತೆಯಿಂದಿದ್ದಾರೆ ಎಂಬುದು ಮತ್ತೊಮ್ಮೆ ಪರೀಕ್ಷೆಗೆ ಒಳಪಡಬಹುದು. ಈ ಸಂದರ್ಭದಲ್ಲಿ, ಸಾಮಾನ್ಯವಾಗಿ ಈ ಹಿಂದೆ ಯಾವುದೇ ಸ್ವರೂಪದಲ್ಲಿ ಕೋಮುವಾದಿ ರಕ್ಕಸನನ್ನು ಹಣಾಹಣಿಯಾಗಿ ಎದುರಿಸಬೇಕಾಗಿ ಬಂದಾಗಲೆಲ್ಲ ಕಾಂಗ್ರೆಸ್ ಪಕ್ಷ ಒಂದು ಚಂಚಲತೆಯನ್ನು, ರಾಜಿ ಮನೋಭಾವವನ್ನು ಪ್ರದರ್ಶಿಸಿದೆ ಎಂಬುದನ್ನು ನೆನಪಿಸಿಕೊಳ್ಳಬೇಕಾಗಿದೆ. ಈ ಹಿಂದೆ, ತಮ್ಮ ಚುನಾವಣಾ ಪ್ರಚಾರವನ್ನು ಆರಂಭಿಸಲು 'ಶಿಲಾನ್ಯಾಸ' ಮಾಡಿ ಕೋಮುವಾದಿ ಪ್ರಚಾರಕ್ಕೆ ಗ್ರಾಸ ಒದಗಿಸಿದ್ದರು; ಶಾಭಾನು ಮೊಕದ್ದಮೆಯಲ್ಲಿ ಅಲ್ಪಸಂಖ್ಯಾತರ ಒಂದು ವಿಭಾಗದ ತುಷ್ಟೀಕರಣಕ್ಕೆ ಮುಂದಾಗಿದ್ದು,

ಪುಟ 15 ಕ್ಕೆ

ವಿಶ್ವ ಬಂಡವಾಳ ಹೂಡಿಕೆದಾರರ ಸಮಾವೇಶ 2012

ಸ್ವದೇಶಿ ಜಪ : ಹಣಕಾಸು ಬಂಡವಾಳದ ಕಾಲಿಗೆ ಶರಣು

ಹರ್ಷ. ಪಿ

ಬಿಜೆಪಿ-ಆರ್‌ಎಸ್‌ಎಸ್ ಪರಿವಾರವು ತನ್ನ ಸ್ವಯಂಸೇವಕರು ಬಂಡವಾಳದ ಅಧಿಪತಿಗಳಾಗಲು ಮತ್ತು ರಾಜ್ಯದ ಸಂಪನ್ಮೂಲ ಲೂಟಿಗೈಯಲು ವಿಶ್ವ ಬಂಡವಾಳ ಹೂಡಿಕೆದಾರರ ಸಮಾವೇಶವನ್ನು ಬಹುಮಟ್ಟಿಗೆ ಬಳಸಿಕೊಂಡಿತೆನ್ನಬಹುದು. ಏಕೆಂದರೆ, ಸಮಾವೇಶದಲ್ಲಿ ನೈಜ ಕೈಗಾರಿಕಾ ಘಟಕಗಳು ಕೇವಲ ಶೇ. 15–20 ಎನ್ನಬಹುದಾದರೆ, ಮಿಕ್ಕವೆಲ್ಲ ಲೂಟಿಕೋರ ಬೇನಾಮಿ ಕಂಪನಿಗಳು ಮತ್ತು ಅಂಕಿ ಸಂಖ್ಯೆ ತೋರಿಸಲು ಬೋಗಸ್ ಕಂಪನಿಗಳೊಂದಿಗೆ ಮಾಡಿಕೊಂಡಿರುವ ಒಪ್ಪಂದಗಳು. ಉದಾಹರಣೆಗೆ, ಒಡಂಬಡಿಕೆ ಮಾಡಿಕೊಂಡಿರುವ ಒಟ್ಟಾರೆ ಯೋಜನೆಗಳ ಪೈಕಿ ಶೇ. 39.6 ರಷ್ಟು ವಿದ್ಯುತ್ ಉತ್ಪಾದನೆ ಕ್ಷೇತ್ರದಲ್ಲಿ ಒಪ್ಪಂದ ಮಾಡಿಕೊಂಡಿದ್ದು, ಮುಂದಿನ 5 ವರ್ಷಗಳಲ್ಲಿ 12,000 ಮೆಗಾವ್ಯಾಟ್ ವಿದ್ಯುಚ್ಛಕ್ತಿ ಉತ್ಪಾದಿಸುವುದಾಗಿ ಸರ್ಕಾರ ಘೋಷಿಸಿದೆ. ಇದೆಷ್ಟು ಪೊಳ್ಳು ಭರವಸೆಯೆಂದರೆ, ಒಪ್ಪಂದ ಮಾಡಿಕೊಂಡಿರುವ ಕಂಪನಿಗಳು ಯಾವ ರೂಪದ (ಕಲ್ಲಿದ್ದಲು ಆಧಾರಿತ, ಸೋಲಾರ್, ವಾಯುಶಕ್ತಿ, ಇತ್ಯಾದಿ) ವಿದ್ಯುತ್ ಉತ್ಪಾದಿಸುತ್ತವೆ ಮತ್ತು ಅದರಿಂದ ಉತ್ಪನ್ನವಾಗಿ ಬರುವ (ಔಟ್‌ಪುಟ್) ವಿದ್ಯುತ್ ಎಷ್ಟೆಂಬ ವಿವರವೇ ಸರ್ಕಾರದ ಬಳಿಯಿಲ್ಲ. ಆದರೂ ಒಪ್ಪಂದವಂತೂ ಆಗಿದೆ!

ನಮ್ಮ ರಾಜ್ಯ ಇಡೀ ದೇಶದಲ್ಲಿ ಬಂಡವಾಳ ಹೂಡಲು ಪ್ರಸಕ್ತವಾಗಿರುವುದು ಏಕೆಂದು ಸಮಾವೇಶದುದ್ದಕ್ಕೂ ಕುಮಾರಮಂಗಳಂ ಬಿರ್ಲಾ ತರಹದ ಬಂಡವಾಳದ ಅಧಿಪತಿಗಳು, ಟಾಟಾ ಕಂಪನಿಯ ಮುತ್ತುರಾಮನ್ ತರಹದ ಕಂಪನಿ ಮುಖ್ಯಸ್ಥರು ಹಾಡಿ ಹೊಗಳಿದ್ದು ಮತ್ತು ಮಂತ್ರಿಮಹೋದಯರು-ಸರ್ಕಾರದ ಅಧಿಕಾರಶಾಹಿ ಬಿಂಬಿಸಲು ಯತ್ನಿಸಿದ

ಪವಾಡ ನೋಡಿ

ಬಡವರಿಗೆ ಏನನ್ನೂ ಕೊಟ್ಟಿದ್ದೆ ಇಲ್ಲ
ಉಳ್ಳವಗೆ ಸರ ಮತ್ತು ಉಂಗುರವು ಎಲ್ಲ
ರೈತರ ಆತ್ಮಹತ್ಯೆ ಬರಗಾಲ ಕೂಡ
ತಡೆದದ್ದು ಉಂಟೇನು ಇವನ ಪವಾಡ?
– ವಿಡಂಬಾರಿ

ನಮ್ಮ ರಾಜ್ಯ ಇಡೀ ದೇಶದಲ್ಲಿ ಬಂಡವಾಳ ಹೂಡಲು ಪ್ರಸಕ್ತವಾಗಿರುವುದು ಏಕೆಂದು ಸಮಾವೇಶದುದ್ದಕ್ಕೂ ಬಂಡವಾಳಗಾರರು, ಮಂತ್ರಿ ಮಹೋದಯರು-ಸರ್ಕಾರದ ಅಧಿಕಾರಶಾಹಿ ಬಿಂಬಿಸಲು ಯತ್ನಿಸಿದ ಪ್ರಮುಖ ಅಂಶಗಳೆಂದರೆ: ರಾಜ್ಯದಲ್ಲಿ ಯಾವುದೇ ಸರ್ಕಾರ ಬಂದರೂ ಕಾರ್ಮಿಕರನ್ನು ಹೆಚ್ಚಿನ ಮುಷ್ಕರಗಳಿಲ್ಲದಂತೆ ಶಿಸ್ತುಬದ್ದಗೊಳಿಸುವ ಪರಿ, ಸದಾ ಖಾಸಗೀಕರಣಕ್ಕೆ ಒತ್ತು ನೀಡುವ ನೀತಿಗಳು ಮತ್ತು ನುರಿತ ಮಾನವ ಸಂಪನ್ಮೂಲದೊಂದಿಗೆ ಶ್ರೀಮಂತ ನೈಸರ್ಗಿಕ ಸಂಪನ್ಮೂಲಗಳು. ಈ ಅಂಶವನ್ನು ವಿಶೇಷವಾಗಿ ಗಮನಿಸಬೇಕು.



ಪ್ರಮುಖ ಅಂಶಗಳೆಂದರೆ: ರಾಜ್ಯದಲ್ಲಿ ಯಾವುದೇ ಸರ್ಕಾರ ಬಂದರೂ ಕಾರ್ಮಿಕರನ್ನು ಹೆಚ್ಚಿನ ಮುಷ್ಕರಗಳಿಲ್ಲದಂತೆ ಶಿಸ್ತುಬದ್ದಗೊಳಿಸುವ ಪರಿ, ಸದಾ ಖಾಸಗೀಕರಣಕ್ಕೆ ಒತ್ತು ನೀಡುವ ನೀತಿಗಳು ಮತ್ತು ನುರಿತ ಮಾನವ ಸಂಪನ್ಮೂಲದೊಂದಿಗೆ ಶ್ರೀಮಂತ ನೈಸರ್ಗಿಕ ಸಂಪನ್ಮೂಲಗಳು. "ಇದರ ಜೊತೆಗೆ ಅವಶ್ಯವಿರುವಷ್ಟು ಸಾಲ ಸೌಲಭ್ಯ ನೀಡಲು ನಮ್ಮ ಬ್ಯಾಂಕುಗಳ ಬಳಿ ಹಣಕ್ಕೆ ಕೊರತೆಯೇ ಇಲ್ಲ" ಎಂದು ಕೆನರಾ ಬ್ಯಾಂಕ್ ರಾಷ್ಟ್ರೀಯ ಮುಖ್ಯಸ್ಥರು ತಿಳಿಸಿದರು.

ನವ-ಉದಾರವಾದಿ ಖಾಸಗೀಕರಣಕ್ಕೆ ರಹದಾರಿ:


ಖಾಸಗೀಕರಣದ ಕ್ಷಿಪ್ರಗತಿಗೆ ತಾಜಾ ಉದಾಹರಣೆಯೆಂದರೆ, ಜಪಾನ್ ಕನ್‌ಸ್ಟ್ರಕ್ಷನ್ ಕಂಪನಿಯಿಂದ ಹೈಸ್ಪೀಡ್ ರೈಲು (ಬುಲೆಟ್ ಟ್ರೇನ್) ನಿರ್ಮಾಣಕ್ಕಾಗಿ ಎರಡು ಯೋಜನೆಗಳನ್ನು ಸರ್ಕಾರ ಸಿದ್ದಪಡಿಸುತ್ತಿದೆ. ಮೊದಲಿಗೆ ಬೆಂಗಳೂರು ಮತ್ತು ಮೈಸೂರು ನಡುವೆ ಹಾಗೂ ಬೆಂಗಳೂರು ಮತ್ತು ಹುಬ್ಬಳ್ಳಿ ನಡುವೆ ನಂತರ ಇತರೆ 3–4 ನಗರಗಳ ನಡುವೆ ಖಾಸಗಿ ರೈಲು ಸಂಚಾರವನ್ನು ಆರಂಭಿಸಲಾಗುವುದು. ಪ್ರಥಮ ಹಂತದಲ್ಲಿ ರೈಲು ನಿರ್ಮಾಣಕ್ಕೆ ರೂ. 1.0ಲಕ್ಷ ಕೋಟಿ ಆಗಲಿದ್ದು, ಪ್ರತಿ ಕಿ.ಮೀ. ಗೆ ರೂ. 200ಕೋಟಿ ವೆಚ್ಚ ತಗಲುತ್ತದೆ. ಇದಕ್ಕೆ ಬೇಕಾದ ಬಂಡವಾಳವನ್ನು ವಿಶ್ವ ಬ್ಯಾಂಕ್ ನೆರವಿನಿಂದ ಪಡೆಯಲಾಗುವುದು. ಸರ್ಕಾರ ಒಂದು ಪೈಸೆ ಕೂಡ ಖರ್ಚು ಮಾಡಬೇಕಿಲ್ಲ. ನೈಸ್ ಕಂಪನಿ ಪ್ರಕರಣದಂತೆ ನಮ್ಮ ನೆಲ ನೀಡಿ ಕಂಪನಿ ಯಥೇಚ್ಛ ಟಿಕೆಟ್ ದರ ನಿಗದಿಪಡಿಸಲು ಅವಕಾಶ ನೀಡುವುದು.

ವಿಧಾನಸೌಧದಲ್ಲಿ ಪ್ರತ್ಯೇಕ ಪಿಪಿಪಿ ಕೋಶ:

ಸಾರ್ವಜನಿಕ ಖಾಸಗಿ ಸಹಭಾಗಿತ್ವದ (ಪಿಪಿಪಿ) ಯೋಜನೆಗಳನ್ನು ತ್ವರಿತವಾಗಿ ಹೆಚ್ಚಿಸಲು ಸರ್ಕಾರ ವಾಣಿಜ್ಯ ಮತ್ತು ಕೈಗಾರಿಕೆ ಇಲಾಖೆಯಲ್ಲಿ ಪಿಪಿಪಿ ಕೋಶ ಸ್ಥಾಪಿಸಿದೆ. ಸಾರ್ವಜನಿಕ ಕಂಪನಿಗಳ ಕಾರ್ಯವ್ಯಾಪ್ತಿ ತಗ್ಗಿಸಲು ಮತ್ತು ಖಾಸಗೀಕರಣಕ್ಕೆ ರಹದಾರಿ ನೀಡಲು ಈ ಕೋಶ ಕೆಲಸ ಮಾಡುತ್ತದೆ. ಇದರ ಜೊತೆಗೆ ಶೀಘ್ರದಲ್ಲಿ ಮೂಲಭೂತ ಸೌಕರ್ಯಗಳಾದ ರಸ್ತೆ, ರೈಲು, ಕೈಗಾರಿಕಾ ಪ್ರದೇಶ, ಫ್ಲೈ ಓವರ್‌ಗಳು, ಇತ್ಯಾದಿ ಕಾರ್ಯಗಳಲ್ಲಿ ಖಾಸಗಿ ಕಂಪನಿಗಳನ್ನು ನೇರವಾಗಿ ತೊಡಗಿಸಲು ಮೂಲಭೂತ ಸೌಕರ್ಯ ಮಸೂದೆಯನ್ನು ಮುಂದಿನ ಅಧಿವೇಶನದಲ್ಲಿ ತರಲಾಗುವುದು.

ಕೈಗಾರಿಕೆ ನೆಪದಲ್ಲಿ ಸರ್ಕಾರಿ ಭೂಮಿ ಖಾಸಗಿಯವರಿಗೆ ಪರಭಾರೆ?:

ಈ ನಡುವೆ ಎರಡನೇ ದಿನದ ಸಮಾರೋಪ ಸಮಾವೇಶದಲ್ಲಿ ಭೂಮಿ ಹಂಚಿಕೆ ಕುರಿತು ಆತಂಕ ವ್ಯಕ್ತ ಪಡಿಸುವ ಮೂಲಕ ಕಹಿಯಾದ ಮಾತುಗಳನ್ನು ಉಸುರಿದ್ದು ಭೋರುಕ ಸ್ಟೀಲ್ ಕಂಪನಿ ಮುಖ್ಯಸ್ಥ ಎಸ್.ಎನ್. ಅಗರವಾಲ್. "ಇದುವರೆಗೆ ಸ್ಥಾಪನೆಯಾದಾಗಿನಿಂದ ಕರ್ನಾಟಕ ಕೈಗಾರಿಕಾ ಪ್ರದೇಶಾಭಿವೃದ್ಧಿ ಮಂಡಳಿ (ಕೆಐಎಡಿಬಿ) ರಾಜ್ಯಾದ್ಯಂತ ರೈತರಿಂದ ಸ್ವಾಧೀನಪಡಿಸಿಕೊಂಡು ಕೈಗಾರಿಕೆಗಳಿಗಾಗಿ ಭೂಮಿ ಹಂಚಿಕೆ ಮಾಡಿರುವ ಅಂಕಿ ಅಂಶಗಳನ್ನು ಪರಿಗಣಿಸಿದರೆ, ಅದರಲ್ಲಿ ಕೇವಲ ಶೇ. 14ರಷ್ಟು ಮಾತ್ರವೇ ನೈಜ ಉತ್ಪಾದನಾ ಪ್ರಕ್ರಿಯೆ/ಘಟಕಗಳಿಗೆ ಹಂಚಿಕೆ ಮಾಡಲಾಗಿದೆ. ಇನ್ನುಳಿದ ಶೇ. 86ರಷ್ಟು ಭೂಮಿಯನ್ನು ಪ್ರಭಾವಿಗಳು ತಮ್ಮ ಪಾಲು ಮಾಡಿಕೊಳ್ಳುತ್ತಿದ್ದಾರೆ. ಈ ಅಂಶವನ್ನು ಅಧ್ಯಯನದ ಆಧಾರದ ಮೇಲೆ ನಾನು ಹೇಳುತ್ತಿದ್ದೇನೆ" ಎಂದು ಆಘಾತಕಾರಿ ಅಂಶ ಹೊರಗೆಡಹಿದರು. ಅವರು ಹೇಳುವಂತೆ ಶೇ. 86ರಷ್ಟು ಭೂಮಿಯನ್ನು ಪ್ರಭಾವಿ ರಾಜಕಾರಣಿ ಮತ್ತು ಅಧಿಕಾರಿ ವರ್ಗ ಕೈಗಾರಿಕೆ ನೆಪದಲ್ಲಿ ಹಂಚಿಕೆ ಮಾಡಿಸಿಕೊಂಡು ರಿಯಲ್ ಎಸ್ಟೇಟ್ ಮತ್ತು ಇನ್ನಿತರ ಬಳಕೆಗೆ ದುರುಪಯೋಗ ಮಾಡಿಕೊಳ್ಳುತ್ತಿದೆ. ಮನಸೋ ಇಚ್ಛೆ ಸರ್ಕಾರ ಬಂಡವಾಳಗಾರರಿಗೆ ಅಗತ್ಯಕ್ಕೂ ಮೀರಿದ ಭೂಮಿ ಹಂಚಿಕೆ ಮಾಡುತ್ತಿರುವುದಕ್ಕೆ ಅತ್ಯುತ್ತಮ ಉದಾಹರಣೆಗೆ, ಇನ್ಫೋಸಿಸ್ ಕಂಪನಿಗೆ ಮೈಸೂರಿನಲ್ಲಿ 1,000 ಎಕರೆ ಭೂಮಿ ಹಂಚಿಕೆ ಮಾಡಿ 3 ವರ್ಷ ಕಳೆದಿದ್ದರೂ ಆ ಕಂಪನಿ ತನ್ನ ಉತ್ಪಾದನಾ ಚಟುವಟಿಕೆಗಾಗಿ ಬಳಸಿಕೊಂಡಿರುವುದು ಕೇವಲ 30 ಎಕರೆ



ಮಾತ್ರ! ಇದೊಂದು ಸಣ್ಣ ಸ್ಯಾಂಪಲ್ ಅಷ್ಟೇ.

ಎರಡು ದಿನಗಳ ವಿಶ್ವ ಬಂಡವಾಳ ಹೂಡಿಕೆದಾರರ ಸಮಾವೇಶ ಅತ್ಯಂತ ಯಶಸ್ವಿಯಾಗಿ ಜರುಗಿ ರಾಜ್ಯಕ್ಕೆ ಬಂಡವಾಳದ ಹೊಳೆಯನ್ನೇ ಹರಿಯಬಿಟ್ಟಿದೆಯೆಂದು ಎಲ್ಲ ಮಂತ್ರಿ ಮಹೋದಯರಾದಿಯಾಗಿ ಅಧಿಕಾರಿ ವರ್ಗ ಘೋಷಿಸಿದೆ. ಅದಕ್ಕೆ ಪೂರಕವಾಗಿ ಸಮಾವೇಶದಲ್ಲಿ ಅನುಮೋದನೆಯಾದ ಯೋಜನೆಗಳ ಅಂಕಿ ಅಂಶಗಳನ್ನು ಬಿಡುಗಡೆ ಮಾಡಿದೆ.

ಬಿಜೆಪಿ ಸರ್ಕಾರ ತಾನು ವಿಶ್ವದ ಬಂಡವಾಳವನ್ನು ರಾಜ್ಯದೊಳಕ್ಕೆ ಹರಿಯಬಿಟ್ಟು ಅತ್ಯಧಿಕ ಉದ್ಯೋಗವಕಾಶಗಳಿಗೆ ಕಾರಣವಾಗುತ್ತಿದ್ದೇನೆಂದು ಪುಂಗಿ ಊದುತ್ತಿದೆ. ಆದರೆ ಇದುವರೆಗೆ ರಾಜ್ಯದಲ್ಲಿ ಸ್ಥಾಪನೆಯಾಗಿರುವ ಕೈಗಾರಿಕೆಗಳು ಮತ್ತು ಅವುಗಳು ಒದಗಿಸಿರುವ ಉದ್ಯೋಗಗಳ ಸಂಖ್ಯೆಯನ್ನು ಪರಿಗಣಿಸಿದರೆ, ಸರ್ಕಾರದ ಮಾಹಿತಿ ಅದೆಷ್ಟು ಸುಳ್ಳುಗಳಿಂದ ಕೂಡಿದೆಯೆಂದು ತಿಳಿಯುತ್ತದೆ. ಉದಾಹರಣೆಗೆ, 2010 ಜಿಮ್ ಸಮಾವೇಶದಲ್ಲಿ 389 ಒಡಂಬಡಿಕೆಗಳು ಏರ್ಪಟ್ಟು 3.92 ಲಕ್ಷ ಕೋಟಿ ಬಂಡವಾಳ ಬರುತ್ತದೆಂದು ಸರ್ಕಾರ ಹೇಳಿತ್ತು. ಆದರೆ ಎರಡು ವರ್ಷಗಳ ನಂತರ ಹಿಂದಿರುಗಿ ಅನುಷ್ಠಾನವಾಗಿರುವ ಯೋಜನೆಗಳನ್ನು ಲೆಕ್ಕ ಹಾಕಿದರೆ ಸರ್ಕಾರದ ಸುಳ್ಳು ಲೆಕ್ಕ ಕಣ್ಣಿಗೆ ರಾಚುತ್ತದೆ. ಇದುವರೆಗೆ ಹೂಡಿಕೆಯಾಗಿರುವ ಬಂಡವಾಳ ರೂ. 5000 ಕೋಟಿ ಮೀರುವುದಿಲ್ಲ.

ರಾಜ್ಯದಲ್ಲಿನ ಒಟ್ಟಾರೆ ಕೈಗಾರಿಕೆ ಮತ್ತು ಉದ್ಯೋಗಗಳ ಪ್ರಸಕ್ತ ಚಿತ್ರಣ:

ಕಳೆದ 30-40 ವರ್ಷಗಳಿಂದ ರಾಜ್ಯದಲ್ಲಿ ಹೂಡಿಕೆಯಾಗಿರುವ ಬಂಡವಾಳ, ಅದರಿಂದ ಸ್ಥಾಪನೆಯಾಗಿರುವ ಕೈಗಾರಿಕಾ ಘಟಕಗಳ ಸಂಖ್ಯೆ ಮತ್ತು ಉದ್ಯೋಗವಕಾಶಗಳ ವಿವರಗಳನ್ನು ಇಲ್ಲಿ ನೀಡಲಾಗಿದೆ. ಸಣ್ಣ ಕೈಗಾರಿಕೆಗಳ ಅಂಕಿ ಅಂಶಗಳಲ್ಲಿ ಮುಚ್ಚಿಹೋಗಿರುವ ಘಟಕಗಳ ಸಂಖ್ಯೆಯನ್ನು ಪರಿಗಣಿಸಿಲ್ಲ. ಈ ಅಂಕಿ ಅಂಶಗಳನ್ನು ಗಮನಿಸಿದಾಗ, ಇಷ್ಟು ವರ್ಷಗಳ ಕಾಲ ನಮ್ಮ ರಾಜ್ಯದಲ್ಲಿ ಕೈಗಾರಿಕೆಗಳಿಂದ ಸೃಷ್ಟಿಯಾಗಿರುವ ಉದ್ಯೋಗವಕಾಶಗಳು ಗಮನಾರ್ಹವೇನಲ್ಲ. ಆದರೆ, ಕೇವಲ ಎರಡು ಮೂರು ಸಮಾವೇಶಗಳನ್ನು ನಡೆಸಿ ಅಗಾಧ ಉದ್ಯೋಗವಕಾಶಗಳನ್ನು ಸೃಷ್ಟಿಸುತ್ತೇವೆಂದು ಘೋಷಿಸುತ್ತಾ ರಾಜ್ಯ ಸರ್ಕಾರ ಜನರ ದಿಕ್ಕು ತಪ್ಪಿಸುತ್ತಿದೆ. ಅದರ ಆಸಕ್ತಿಯೆಲ್ಲ ಭೂಗಳ್ಳರು, ಉದ್ದಿಮೆದಾರರು ಮತ್ತು ಶ್ರೀಮಂತ ವರ್ಗದ ಪರವೇ ಇದೆ.

ಪ್ರಾದೇಶಿಕ ಅಸಮತೋಲನಕ್ಕೆ ಬಿಜೆಪಿ



ಮತ್ತಷ್ಟು ಕೊಡುಗೆ:

ರಾಷ್ಟ್ರೀಯ ಬಂಡವಾಳಗಾರರು ಮತ್ತು ಪ್ರಾದೇಶಿಕ ಬಂಡವಾಳಗಾರರಿಗೆ ದಕ್ಷಿಣ ಕರ್ನಾಟಕವೇ ಬಂಡವಾಳ ಹೂಡಿಕೆಗೆ ಆಕರ್ಷಣೀಯ ಕೇಂದ್ರವಾಗಿ ಬಂದಿದೆ. ಸತತವಾಗಿ ಅಧಿಕಾರಕ್ಕೆ ಬಂದ ಸರ್ಕಾರಗಳು ಇದುವರೆಗೂ ಈ ಚಿತ್ರಣವನ್ನು ಪ್ರಾದೇಶಿಕ ಅಸಮತೋಲನ ನಿವಾರಣೆಗೆ ಕೇವಲ ಬಾಯುಪಚಾರದ ಕ್ರಮಗಳನ್ನಷ್ಟೇ ತೆಗೆದುಕೊಂಡು ಬಂದಿವೆ. ಬಿಜೆಪಿ ಸರ್ಕಾರ ತಾನು ಡಾ. ನಂಜುಂಡಪ್ಪ ವರದಿ ಅನುಷ್ಠಾನಕ್ಕೆ ಕಂಕಣಬದ್ಧವಾಗಿರುವುದಾಗಿ ಘೋಷಿಸಿ ಅನುದಾನ ಹಂಚಿಕೆ ಮಾಡಿ ಬೇಕಾದವರಿಗೆ ತಿಂದುಣಿಸಿತೇ ಹೊರತು, ಬೇರೇನೂ ಮಾಡಿಲ್ಲ. ಇದಕ್ಕೆ ಸಾಕ್ಷಿಯೆಂದರೆ ಬಿಜೆಪಿ ಸರ್ಕಾರ ಅಧಿಕಾರಕ್ಕೆ ಬಂದ ಮೇಲೆ ಹಿಂದಿನ ಸರ್ಕಾರಗಳಿಗಿಂತಲೂ ಕೈಗಾರಿಕೆಗಳಿಗಾಗಿ ಅತಿ ಕಡಿಮೆ ಭೂಮಿ ಸ್ವಾಧೀನವಾಗಿರುವುದು. ಆರಂಭದಿಂದ 2005-06ರವರೆಗೆ ಒಟ್ಟಾರೆ ಭೂಸ್ವಾಧೀನದಲ್ಲಿ ಉತ್ತರ ಕರ್ನಾಟಕದಲ್ಲಿ ಶೇ. 28 ಸ್ವಾಧೀನವಾಗಿದ್ದರೆ, ದಕ್ಷಿಣ ಕರ್ನಾಟದಲ್ಲಿ ಶೇ. 72 ಆಗಿದೆ. ಅದೇ 2006-07ರಿಂದ 2010-11ರವರೆಗೆ ಉತ್ತರ ಕರ್ನಾಟದಲ್ಲಿ ಶೇ. 9ರಷ್ಟು ಸ್ವಾಧೀನವಾಗಿದ್ದರೆ, ಶೇ. 91 ದಕ್ಷಿಣ ಕರ್ನಾಟಕದಲ್ಲಿ ಸ್ವಾಧೀನವಾಗಿದೆ. ಇದಕ್ಕೆ ಮತ್ತೊಂದು ಕಾರಣವೆಂದರೆ, ಬೆಂಗಳೂರು ಆಸುಪಾಸಿನಲ್ಲೇ ಬೇಕಾದ ಕಂಪನಿಗಳಿಗೆ ಹೆಚ್ಚೆಚ್ಚು ಭೂಮಿ ಸ್ವಾಧೀನಪಡಿಸಿಕೊಂಡು ಹಂಚಿಕೆ ಮಾಡಿಕೊಂಡಿರುವುದು ಇರಬಹುದು.

ಕೈಗಾರಿಕಾಭಿವೃದ್ಧಿಯ ಹಾದಿ:

ಕೈಗಾರಿಕೆ ಸ್ಥಾಪನೆಗಾಗಿ ಸರ್ಕಾರದಿಂದ ಹಲವು ವಿನಾಯಿತಿ, ಸಹಾಯಧನ, ತೆರಿಗೆ ವಿನಾಯಿತಿ, ಕಡಿಮೆ ದರದಲ್ಲಿ ಭೂಮಿ ಹಂಚಿಕೆ, ವಿದ್ಯುತ್, ನೀರು, ರಸ್ತೆ, ಇತ್ಯಾದಿಯಂತಹ ಮೂಲಭೂತ ಸೌಕರ್ಯಗಳನ್ನು ಸರ್ಕಾರ ಒದಗಿಸಿಕೊಡುತ್ತದೆ. ಆದರೆ ಅದಕ್ಕೆ ಪ್ರತಿಯಾದ ಲಾಭ ನಮ್ಮ ರಾಜ್ಯದ ಬಹುಪಾಲು ಜನತೆಗೆ ಉದ್ಯೋಗವಕಾಶ, ಉತ್ತಮ ಸಂಬಳ, ತೆರಿಗೆ ಸಂಗ್ರಹಣೆ ಮೂಲಕ ಬಾರದೇ ಇರುವ ವಾಸ್ತವಾಂಶ ನಮ್ಮ ಮುಂದಿದೆ.

ಕೈಗಾರಿಕಾಭಿವೃದ್ಧಿಯು ರಾಜ್ಯದ ಜನತೆಯ ಜೀವನ ಗುಣಮಟ್ಟ, ಉದ್ಯೋಗಾವಕಾಶ, ಉತ್ತಮ ಆದಾಯ ಮತ್ತು ಸಮಗ್ರ ಏಳಿಗೆಗೆ ಅತ್ಯವಶ್ಯ. ಆದರೆ ನಮ್ಮ ಸರ್ಕಾರಗಳು ಮಾಡ ಹೊರಟಿರುವ ಕೈಗಾರಿಕಾಭಿವೃದ್ಧಿಯ ಪಥ ಮಾತ್ರ ಜನವಿರೋಧಿಯಿಂದ ಕೂಡಿದ್ದು ಕೈಗಾರಿಕಾಭಿವೃದ್ಧಿಯ ಹೆಸರಿನಲ್ಲಿ ರಾಜ್ಯದ ಸಂಪನ್ಮೂಲಗಳನ್ನು ಕೊಳ್ಳೆ ಹೊಡೆಯುವವರಿಗೆ ಹಾದಿಯಾಗಿದೆ. ಕೈಗಾರಿಕಾಭಿವೃದ್ಧಿ ಮತ್ತು ಜನತೆಯ ಅಭಿವೃದ್ಧಿ ಎರಡನ್ನೂ ಜನ ಚಳುವಳಿಯ ಶಕ್ತಿಯಿಂದ ಮಾತ್ರವಷ್ಟೇ ಸರಿ ದಿಕ್ಕಿನಲ್ಲಿ ಕೊಂಡೊಯ್ಯಬಹುದಾಗಿದೆ.

ವಿವಿಧ ಕೈಗಾರಿಕೆಗಳು	ಕೈಗಾರಿಕಾ ಘಟಕಗಳ ಸಂಖ್ಯೆ	ಬಂಡವಾಳ ಹೂಡಿಕೆ	ಇದುವರೆಗಿನ ಉದ್ಯೋಗವಕಾಶಗಳು
1. ದೊಡ್ಡ ಮತ್ತು ಅತಿ ದೊಡ್ಡ ಕೈಗಾರಿಕೆಗಳು	618	84,900.71 ಕೋ.	2,96,249
2. ಸಣ್ಣ ಕೈಗಾರಿಕೆಗಳು	4,13,354	12,39,873 ಲಕ್ಷ	23,95,451

ಆಧಾರ: ಕೈಗಾರಿಕೆ ಮತ್ತು ವಾಣಿಜ್ಯ ಇಲಾಖೆ

ಬಿಜೆಪಿ ಸರ್ಕಾರ ಭರವಸೆ ನೀಡುತ್ತಿರುವ ಕೈಗಾರಿಕೆ ಮತ್ತು ಉದ್ಯೋಗವಕಾಶಗಳ ಅಂಕಿ ಅಂಶ:

ವಿವಿಧ ಜಿಮ್/ಸಮಾವೇಶಗಳಲ್ಲಿ ಅನುಮೋದನೆಗೊಂಡು ಭರವಸೆ ನೀಡಿದ್ದ ಯೋಜನೆಗಳ ವಿವರ

ವಿವಿಧ ಸಮಾವೇಶಗಳು	ಉದ್ದೇಶಿತ ಕೈಗಾರಿಕಾ ಘಟಕಗಳ ಸಂಖ್ಯೆ	ಬಂಡವಾಳ ಹೂಡಿಕೆ	ಉದ್ಯೋಗ ಅವಕಾಶಗಳು
2010 ಜಿಮ್	389	3,92,000 ಕೋಟಿ	7,10,000
2011 ಅಗ್ರಿಬಿಸಿನೆಸ್ ಜಿಮ್	42	1,10,000 ಕೋಟಿ	85000
2012 ಜಿಮ್	730	7,06,000 ಕೋಟಿ	16,00,000

2012 ಜಿಮ್‌ಮೂಲಭೂತ ಸೌಕರ್ಯ ಯೋಜನೆಗಳಿಗೆ ಒಪ್ಪಂದ1,68,000 ಕೋಟಿ

ಕವನ

ಬರಗಾಲ [illegible]

[illegible]
[illegible]
[illegible]
[illegible]
ನಮ್ಮ ಪಾಲಿನ ಅನ್ನ ಕಿಡು ತಿನ್ನುವ
[illegible]
ಮುಷ್ಟಿದರೆ ಮಣ್ಣಾಗುತಿರುವವು.
ಬರಗಾಲದ ದಿಕ್ಕಿಲ್ಲ ರೈತ, ಕೂಲಿಗಳು



[illegible]
[illegible]
[illegible]
[illegible]
ಬರಗಾಲದ ಹಸಿದ ಕೂಲಿಗಳು ನಾವು

[illegible]
[illegible]
[illegible]
ಬೀದಿಗೆ ಬಂದು, [illegible]
[illegible]ಗಳಂತೆ ರೈತ, ಕೂಲಿಗಳು.

- ಜೆ.ವಿ.ಹಿರೇಮಠ
ಹಾವೇರಿ

(ಕಳೆದ ವರ್ಷದ ಬರದ ಬೇಗೆ ಇನ್ನೂ ತೀರಿಲ್ಲ. ಮಳೆಗಾಲ ಬಂದರೂ ರಾಜ್ಯದ ಬಹಳಷ್ಟು ಕಡೆ ಮಳೆ ಇಲ್ಲ. ಆಳುವ ಜನಕ್ಕೆ ಕುರ್ಚಿ ಕಾದಾಟ ಬಿಟ್ಟು ಬೇರ‍್ಯಾವುದರ ಕಡೆಗೂ ಲಕ್ಷ್ಯವಿಲ್ಲ. ಅಧಿಕೃತ ವಿರೋಧ ಪಕ್ಷಗಳು ಏನು ಮಾಡುತ್ತಿದ್ದಾವೋ ಗೊತ್ತಿಲ್ಲ. ಇಂಥ ಹೊತ್ತಲ್ಲಿ ನೊಂದವರ ಎದೆಯಾಳದ ಕಿಚ್ಚು ಬರೆದು ಕವನವಾಗಿ 'ಒಡೆದರೆ' ಅದು ಹೇಗಿರುತ್ತದೆ. ಓದಿ, ಒಂದು ಹೃದಯ ಸ್ಪರ್ಶಿ ಕವನ.)

ದುಡಿಯುವ ಜನರ ಸಂಕಟಗಳ ಕುರಿತು 'ಕ್ಯಾರೆ' ಎನ್ನದ ಯುಪಿಎ ಸರ್ಕಾರದ ವಿರುದ್ಧ ಸಮರ ಮುಂದುವರಿಸಿ

ಸಿಐಟಿಯು ಜನರಲ್ ಕೌನ್ಸಿಲ್ ಕರೆ

ಕೆ. ಮಹಾಂತೇಶ

ಸಿಐಟಿಯುವಿನ ಅಖಿಲ ಭಾರತ ಜನರಲ್ ಕೌನ್ಸಿಲ್‌ನ ಮಹತ್ವದ ನಾಲ್ಕು ದಿನಗಳ ಸಭೆಯು ಜೂನ್‌2 ರಿಂದ 5, 2012ರವರೆಗೆ ತಮಿಳುನಾಡಿನ ಕೊಯಮತ್ತೂರಿನಲ್ಲಿ ಯಶಸ್ವಿಯಾಗಿ ನಡೆಯಿತು. 425 ಜನರಲ್ ಕೌನ್ಸಿಲ್ ಸದಸ್ಯರಲ್ಲಿ ಸು. 300 ಕ್ಕಿಂತ ಹೆಚ್ಚಿನ ಸದಸ್ಯರು ಹಾಗೂ ಬಿಇಎಫ್‌ಐ, ಬಿಎಸ್‌ಎನ್‌ಎಲ್‌ಇಯು, ಅಖಿಲ ಭಾರತ ರಾಜ್ಯ ಸರ್ಕಾರಿ ನೌಕರರ ಒಕ್ಕೂಟ, ಎಫ್‌ಎಂಆರ್‌ಎಐ, ರೇಲ್ವೆ, ರಕ್ಷಣೆ, ಕೇಂದ್ರ ಸರ್ಕಾರಿ ನೌಕರರ, ಕಲ್ಲಿದ್ದಲು, ಸಾರಿಗೆ, ವಿವಿಧ ಕೇಂದ್ರೋದ್ಯಮಗಳ ನೌಕರರ ಸಂಘಗಳ ಆಹ್ವಾನಿತ ನಾಯಕರುಗಳು ಈ ಸಭೆಗೆ ಆಗಮಿಸಿದ್ದರು.

ಹೆಸರಾಂತ ಕೈಗಾರಿಕಾ ನಗರ, ದಕ್ಷಿಣ ಭಾರತದ 'ಮ್ಯಾಚೆಂಸ್ಟರ್' ಖ್ಯಾತಿಯ ಹಾಗೂ ಸ್ವಾತಂತ್ರ್ಯ ಪೂರ್ವಕಾಲದಿಂದಲೂ ಕಾರ್ಮಿಕ ಹಾಗೂ ಎಡಚಳುವಳಿಯ ಕೇಂದ್ರವಾದ ಕೊಯಮತ್ತೂರಿನಲ್ಲಿ ನಡೆದ ಎರಡನೇ ಜನರಲ್ ಕೌನ್ಸಿಲ್ ಸಭೆ ಇದಾಗಿತ್ತು. ಹಿಂದೆ 1970 ರಲ್ಲಿ ಸಿಐಟಿಯು ಸ್ಥಾಪನೆಯಾದ ನಂತರದ ಮೊದಲ ಜನರಲ್ ಕೌನ್ಸಿಲ್ ಸಭೆ ಇಲ್ಲಿ ಸಂಘಟಿಸಲಾಗಿತ್ತು.

ದೇಶಕಂಡ ಅದ್ವಿತೀಯ ಕಾರ್ಮಿಕ ನಾಯಕ ಹಾಗೂ ದುಡಿಯುವ ವರ್ಗದ ನೇತಾರರಾಗಿದ್ದ ಕಾಮ್ರೇಡ್ ಪಿ. ರಾಮಮೂರ್ತಿ ಹಾಗೂ ಈಗಲೂ ತಮಿಳುನಾಡು ಮಾತ್ರವಲ್ಲ ದೇಶದ ಕಮ್ಯೂನಿಸ್ಟ್ ಚಳುವಳಿಯ ಹಿರಿಯ ಚೇತನವಾಗಿರುವ ಕಾಮ್ರೇಡ್ ಉಮಾನಾಥ್ ಮತ್ತಿತರೆ ಸಂಗಾತಿಗಳ ನೇತೃತ್ವದಲ್ಲಿ ಇಲ್ಲಿನ ಕಾರ್ಮಿಕ ವರ್ಗ ನಡೆಸಿದ ಸಮರಧೀರ ಚಳವಳಿಯ ಇತಿಹಾಸ ಈಗಲೂ ಇಲ್ಲಿ ಹಸಿ ಹಸಿರು. ಮಾತ್ರವಲ್ಲ ಅದೇ ಹೋರಾಟದ ಪರಂಪರೆಯನ್ನು ಕೊಯಮತ್ತೂರಿನ ದುಡಿಯುವ ವರ್ಗ ಜತನದಿಂದ ಕಾಪಾಡಿಕೊಂಡು ಬಂದಿದೆ. ಅದಕ್ಕೆ ಸಾಕ್ಷಿಯೆಂಬಂತೆ ಇಲ್ಲಿನ ಲೋಕಸಭಾ ಸದಸ್ಯರನ್ನಾಗಿ ಸಿಪಿಐ(ಎಂ) ಪಕ್ಷದ ಕಾಮ್ರೇಡ್ ನಟರಾಜನ್ ಅವರನ್ನು ಆಯ್ಕೆಮಾಡುವ ಮೂಲಕ ಪಾರ್ಲಿಮೆಂಟಿನ ಒಳಗೂ ದುಡಿಯುವ ವರ್ಗದ ಧ್ವನಿ ಮೊಳಗುವಂತೆ ಮಾಡಿದೆ.

ಇಂತಹ ಚಳುವಳಿಯ ಕೇಂದ್ರದಲ್ಲಿ ಜೂನ್ 2 ರ ಬೆಳಗ್ಗೆ ಧ್ವಜಾರೋಹಣದ ಮೂಲಕ ಸಿಐಟಿಯು ಅಖಿಲ ಭಾರತ ಅಧ್ಯಕ್ಷರಾದ ಕಾಮ್ರೇಡ್ ಎ.ಕೆ. ಪದ್ಮನಾಭನ್ ಅವರು ನಾಲ್ಕು ದಿನಗಳ ಜನರಲ್ ಕೌನ್ಸಿಲ್ ಸಭೆಗೆ ಚಾಲನೆ ನೀಡಿದರು.

ಅಂತರ ರಾಷ್ಟ್ರೀಯ ಪರಿಸ್ಥಿತಿ: ಕಾರ್ಮಿಕ ಚಳುವಳಿಯ ಮುನ್ನಡೆ

ನಂತರ ತಮ್ಮ ಅಧ್ಯಕ್ಷೀಯ ಭಾಷಣದಲ್ಲಿ 2008 ರಿಂದ ಅಮೇರಿಕಾದಿಂದ ಆರಂಭಗೊಂಡ ಆರ್ಥಿಕ ಬಿಕ್ಕಟ್ಟಿನ ಪರಿಣಾಮ ಅದರ ಪರಿಣಾಮವಾಗಿ ಜಗತ್ತಿನಾದ್ಯಂತ ವಿಶೇಷವಾಗಿ ಯೂರೋಪ್ ಹಲವು ದೇಶಗಳಲ್ಲಿ ವೇತನ ಮತ್ತು ಕಲ್ಯಾಣ ಕಾರ್ಯಕ್ರಮಗಳ ಕಡಿತದ ವಿರುದ್ಧ ಬೆಳೆದು ಬಂದ ಭಾರಿ ಆಂದೋಲನಗಳು ಹಾಗೂ ಅಲ್ಲಿನ ರಾಜಕೀಯ ಸ್ಥಿತ್ಯಂತರಗಳು ಹಾಗೂ ಅವುಗಳ ಇತಿಮಿತಿಗಳು, ನ್ಯೂಯಾರ್ಕ್‌ನಲ್ಲಿ ಆರಂಭಗೊಂಡ ಆಕ್ಯೂಪೈ ವಾಲ್ ಸ್ಟ್ರೀಟ್ ಚಳುವಳಿ, ಲ್ಯಾಟೀನ್ ಅಮೇರಿಕಾ ದೇಶಗಳಲ್ಲಿ ಎಡ ಹಾಗೂ ಪ್ರಗತಿಪರ ಸರ್ಕಾರಗಳು ಹಾಗೂ ಅಲ್ಲಿ ವೆನಿಜುವೆಲಾ ಹಾಗೂ ಕ್ಯೂಬಾವನ್ನು ಕೇಂದ್ರವಾಗಿಟ್ಟುಕೊಂಡು ಸಾಮ್ರಾಜ್ಯಶಾಹಿ ಅಮೇರಿಕಾ ನಡೆಸುತ್ತಿರುವ ಪಿತೂರಿಗಳು ಹಾಗೂ ಅರಬ್ ದೇಶಗಳಲ್ಲಿ ಸರ್ವಾಧಿಕಾರಿ ಆಡಳಿತಗಳ ವಿರುದ್ಧ ಅಲ್ಲಿನ ಜನರು ನಡೆಸಿದ ಹೋರಾಟಗಳು ಅಲ್ಲೆಲ್ಲಾ ಕಾರ್ಮಿಕ ಸಂಘಟನೆಗಳ ಮಧ್ಯಪ್ರವೇಶ ಹೀಗೆ ಹಲವು ವಿಷಯಗಳನ್ನು ಪ್ರಸ್ತಾಪಿಸುತ್ತಾ ಭಾರತದ ಕಾರ್ಮಿಕರು ನಡೆಸಿದ ಇತ್ತೀಚಿನ ಐಕ್ಯ ಚಳುವಳಿ ಹಾಗೂ ಅದನ್ನು ಮುಂದುವರೆಸಬೇಕಾದ ಅನಿವಾರ್ಯತೆ ಕುರಿತು ಅವರು ಮಾತನಾಡಿದರು.

ಜನರು ಎಷ್ಟು ಬೇಡ ಬೇಡವೆಂದರೂ ಆಳುವ ಜನರಿಗೆ ಜಾಗತೀಕರಣ, ಉದಾರೀಕರಣ ನೀತಿಗಳೇ ಅಪ್ಯಾಯಮಾನ. ಕಾರ್ಮಿಕ ವರ್ಗದ– ದುಡಿಯುವ ಜನರ ಬೇಕು ಬೇಡಗಳನ್ನು ಕಾಲ ಕಸದಂತೆ ಕಾಣುತ್ತಿರುವ ಕೇಂದ್ರ ಸರ್ಕಾರಕ್ಕೆ ಶ್ರೀಮಂತರು, ಬಂಡವಾಳಗಾರರೆಂದರೆ ಏನೋ ವ್ಯಾಮೋಹ. ಈ ಸರ್ಕಾರದ ವಿರುದ್ಧ ಸಾರಿರುವ ಸಮರ ಇಲ್ಲಿಗೆ ನಿಲ್ಲುವಂತಿಲ್ಲ....

ಬೆಲೆ ಏರಿಕೆಯ ಬಿಸಿ

ನಂತರ ಪ್ರಧಾನ ಕಾರ್ಯದರ್ಶಿ ಕಾಮ್ರೇಡ್ ತಪನ್‌ಸೇನ್ ಯುಪಿಎ ಸರ್ಕಾರದ ಬೆಲೆ ಏರಿಕೆ ನೀತಿಗಳು ಅದರಿಂದ ದುಡಿಯುವ ವರ್ಗ ಅನುಭವಿಸುತ್ತಿರುವ ಸಂಕಷ್ಟಗಳು, ಜನಪರ ಚಳುವಳಿಗಳನ್ನು ನಿರ್ಲಕ್ಷಿಸುತ್ತಿರುವ ಸರ್ಕಾರದ ಧೋರಣೆಗಳು, ಕಾರ್ಮಿಕ ಆಂದೋಲನದಲ್ಲಿ ಮೂಡಿಬಂದಿರುವ ಐಕ್ಯತೆ ಮತ್ತು ಅದನ್ನು ತೀವ್ರಗೊಳಿಸಬೇಕಿರುವ ಅನಿವಾ ರ್ಯತೆ ಅದರಲ್ಲಿ ಸಿಐಟಿಯು ಪಾತ್ರ. ಅದಕ್ಕಾಗಿ ದೇಶದಲ್ಲಿ ಮತ್ತಷ್ಟು



ವರ್ಗ ಚಳುವಳಿ ಯನ್ನು ಬಲಪಡಿಸಲು ವಹಿಸಬೇಕಿರುವ ಅಗತ್ಯ ಸಂಘಟನಾ ಕ್ರಮಗಳು, ಮುಂದಿನ ಕಾರ್ಯಕ್ರಮಗಳ ಕುರಿತು ಅವರು ಚರ್ಚೆ ನಡೆಸಿ ತೀರ್ಮಾನ ಕೈಗೊಳ್ಳಲು ಸಭೆ ಮುಂದೆ ವರದಿ ಮಂಡಿಸಿದರು.

ಪ್ರಧಾನ ಕಾರ್ಯದರ್ಶಿಗಳು ಮಂಡಿಸಿದ ವರದಿಯ ಮೇಲೆ 9 ಜನ ಮಹಿಳಾ ಸಂಗಾತಿಗಳು ಸೇರಿದಂತೆ ಒಟ್ಟು 58 ಸಂಗಾತಿಗಳು ಸುಮಾರು 10 ಗಂಟೆಗಳ ಕಾಲ ಚರ್ಚಿಸಿದರು. ಜೂನ್ 5 ಸಂಜೆ ಬೃಹತ್ ಬಹಿರಂಗ ಸಭೆಯೊಂದಿಗೆ ನಾಲ್ಕು ದಿನಗಳ ಜನರಲ್ ಕೌನ್ಸಿಲ್ ಮುಕ್ತಾಯಗೊಂಡಿತು.

ಮತ್ತೊಂದು ಮಹಾಕಾರ್ಯಾ ಚರಣೆಗೆ ಕರೆ

ಮನಮೋಹನ್ ಸಿಂಗ್ ಹಾಗೂ ಸೋನಿಯಾಗಾಂಧಿ ನೇತೃತ್ವದ ಯುಪಿಎ ಸರ್ಕಾರದ ನಾಲ್ಕು ವರ್ಷಗಳ ಆಡಳಿತವು ದುಡಿಯುವರ್ಗಕ್ಕೆ ಸಂಕಷ್ಟಗಳ ಸರಮಾಲೆಯನ್ನೇ ತಂದೊಡ್ಡಿದ್ದರೆ ಮಿಲಿಯಾಧಿಪತಿಗಳ ಪಾಲಿಗೆ ದಿನನಿತ್ಯ ಮೃಷ್ಟಾನ್ನ ನೀಡುತ್ತಿದೆ. ಮಾತ್ರವಲ್ಲ, ದೇಶಿ–ವಿದೇಶಿ ಲೂಟಿಕೋರರನ್ನು ರತ್ನಗಂಬಳಿ ಹಾಕಿ ಸ್ವಾಗತಿಸಿ ಅವರಿಗೆ ದೇಶದಲ್ಲಿ ನೀರು–ಭೂಮಿ ಸೇರಿದಂತೆ ನೈಸರ್ಗಿಕ ಸಂಪತ್ತನ್ನು ಧಾರೆ ಎರೆದು ಅವರಿಂದ ಶಹಭ್ಬಾಶ್ ಗಿರಿ ಪಡೆಯುತ್ತಿದೆ. ಉದಾರಿಕರಣ– ಜಾಗತೀಕರಣ ನೀತಿಗಳ ಭಾಗವಾಗಿ ಜನರ ಹಿತಾಸಕ್ತಿಗಳನ್ನು ಕಡೆಗಣಿಸಿ ಅಧಿಕಾರ ನಡೆಸುತ್ತಿರುವ ಯುಪಿಎ ಸರ್ಕಾರದ ಈ ಜನ ವಿರೋಧಿ ಹಾಗೂ ಕಾರ್ಮಿಕ ವಿರೋಧಿ ನೀತಿಗಳ ವಿರುದ್ಧ ಮುಂಬರುವ ದಿನಗಳಲ್ಲಿ ದೇಶದ ಶ್ರಮಿಕ ವರ್ಗ ಮತ್ತೊಂದು ಸಮರಧೀರ ಐಕ್ಯ ಚಳುವಳಿಗೆ ಸಿಐಟಿಯು ಅಖಿಲ ಭಾರತ ಜನರಲ್ ಕೌನ್ಸಿಲ್ ಕರೆ ನೀಡಿದೆ.

ಕೇಂದ್ರ ಕಾರ್ಮಿಕ ಸಂಘಗಳೊಂದಿಗೆ ಸಮಾಲೋಚಿಸಿ ಮತ್ತೊಂದು ಸಮರಧೀರ ಚಳುವಳಿಗೆ ಮುನ್ನುಗ್ಗುವ ಮುನ್ನ ಸಿಐಟಿಯುವಿನ ಎಲ್ಲಾ ಘಟಕಗಳು ಕಾರ್ಮಿಕ ವರ್ಗ ಎದುರಿಸುತ್ತಿರುವ ವಿವಿಧ ಜ್ವಲಂತ ಸಮಸ್ಯೆಗಳ ಪರಿಹಾರಕ್ಕಾಗಿ ಜುಲೈ 2 ರಿಂದ 8 ವರೆಗೆ ದೇಶವ್ಯಾಪಿ ಪ್ರಚಾರಾಂದೋಲನ ನಡೆಸಲು ಜನರಲ್-ಕೌನ್ಸಿಲ್ ನಿರ್ಧರಿಸಿದೆ.

ಫೆಬ್ರವರಿ 28, 2012 ರಂದು ಕಾರ್ಮಿಕ ಸಂಘಗಳು ನಡೆಸಿದ ದೇಶವ್ಯಾಪಿ ಸಾರ್ವತ್ರಿಕ ಮುಷ್ಕರದಲ್ಲಿ ಸುಮಾರು 10 ಕೋಟಿಕ್ಕಿಂತ ಹೆಚ್ಚಿನ ಕಾರ್ಮಿಕರು ಭಾಗವಹಿಸಿದ್ದರು. ಆ ಹೋರಾಟದಲ್ಲಿ ದೇಶದ ಜನರು ಎದುರಿಸು ತ್ತಿರುವ ಜ್ವಲಂತ ಸಮಸ್ಯೆಗಳನ್ನು ಸರ್ಕಾರದ ಗಮನಕ್ಕೆ ತರಲಾಗಿತ್ತು. ಮಾತ್ರವಲ್ಲ ಕಳೆದ ಮೂರು ವರ್ಷಗಳಿಂದಲೂ ಈ ದಿಸೆಯಲ್ಲಿ ಹಲವು ಹೋರಾಟಗಳನ್ನು ಕಾರ್ಮಿಕ ಸಂಘಗಳು ನಡೆಸುತ್ತಿದ್ದರೂ ಕೇಂದ್ರ ಸರ್ಕಾರ ಯಾವುದೇ ಗಮನ ಹರಿಸಿಲ್ಲ. ಆದರೆ ಸರ್ಕಾರದ ಈ ಜನವಿರೋಧಿ ಅದರಲ್ಲೂ ಬೆಲೆಏರಿಕೆ ನೀತಿಗಳಿಂದ ಜನರು ತೀವ್ರವಾಗಿ ಬೇಸತ್ತಿದ್ದಾರೆ. ವಿವಿಧ ರೀತಿಗಳಲ್ಲಿ ತಮ್ಮ ಆಕ್ರೋಶ ವ್ಯಕ್ತಪಡಿಸುತ್ತಿದ್ದಾರೆ. ಈ ಹಿನ್ನಲೆಯಲ್ಲಿ ಕೇಂದ್ರ ಕಾರ್ಮಿಕ ಸಂಘಗಳೊಂದಿಗೆ ಸೇರಿ ಒಂದು ದಿನಕ್ಕಿಂತಲೂ ಹೆಚ್ಚಿನ ದೇಶವ್ಯಾಪಿ ಆಂದೋಲನಕ್ಕೆ ದೇಶದ ದುಡಿಯುವ ವರ್ಗವನ್ನು ಅಣಿನೆರೆಸಲು ಜನರಲ್ ಕೌನ್ಸಿಲ್ ನಿರ್ಧರಿಸಿದೆ.

ಅಂಗನವಾಡಿ , ಬಿಸಿಯೂಟ, ಆಶಾ ...ಮುಂತಾದ ಅಸಂಘಟಿತ ಮಹಿಳೆಯರ ಹೋರಾಟ

ಸರ್ಕಾರದ ಗೌರವಧನದ ಹೆಸರಲ್ಲಿ ದೇಶದಲ್ಲಿ ಲಕ್ಷಾಂತರ ಜನರು ದುಡಿಯುತ್ತಿದ್ದಾರೆ. ಅಂಗನವಾಡಿ, ಬಿಸಿಯೂಟ, ಆಶಾ, ಮತ್ತಿತರೆ ಹೆಸರಿನಲ್ಲಿ ವಿಶೇಷವಾಗಿ ಮಹಿಳೆಯರನ್ನು ದುಡಿಸಿಕೊಳ್ಳುತ್ತಿರುವ ಕೇಂದ್ರ ಹಾಗೂ ರಾಜ್ಯ ಸರ್ಕಾರಗಳು ಆ ನೌಕರರಿಗೆ ಕನಿಷ್ಟ ಸೌಲಭ್ಯಗಳನ್ನು ನೀಡದೆ ಶೋಷಣೆ ಮಾಡುತ್ತಿವೆ. ಈ ತಾರತಮ್ಯ ಧೋರಣೆ ವಿರುದ್ಧ ಆ ಕಾರ್ಮಿಕರು ಬೀದಿಗಿಳಿಯುತ್ತಿದ್ದಾರೆ. ಆದಾಗ್ಯೂ ಖಾತ್ರಿಯಾದ ವೇತನ, ಸಾಮಾಜಿಕ ಸುರಕ್ಷೆ ಎಂಬುದು ಅವರಿಗೆ ಮರಿಚೀಕೆಯಾಗಿದೆ. ಈ ವಿಭಾಗದ ನೌಕರರ ವಿವಿಧ ಬೇಡಿಕೆಗಳಿಗಾಗಿ

ಪುಟ 15 ಕ್ಕೆ

ಜನಶಕ್ತಿ
ಕನ್ನಡ ವಾರಪತ್ರಿಕೆ

ಇಲ್ಲದ ಬರ ಪರಿಹಾರವೂ–ಜಾರಿಯಾಗದ ಉದ್ಯೋಗ ಖಾತ್ರಿಯೂ ರಾಜ್ಯ ಬಿಜೆಪಿ ಸರ್ಕಾರದ 'ವಿಷನ್–2020'ಯೂ



ಆರ್.ರಾಮಕೃಷ್ಣ


"ಮುಂದಿನ ಅವಧಿಗೂ ನಾವೇ ಅಧಿಕಾರಕ್ಕೆ ಬರ್ತೀವಿ. ಹಿಂದಿನ ಸರ್ಕಾರಗಳು ಮಾಡದ ಕೆಲಸವನ್ನು ನಾಲ್ಕು ವರ್ಷಗಳಲ್ಲಿ ಬಿಜೆಪಿ ಸರ್ಕಾರ ಮಾಡಿ ತೋರಿಸಿದೆ. ಯಡಿಯೂರಪ್ಪ ಮತ್ತು ಸದಾನಂದ ಗೌಡರ ಸರ್ಕಾರದಲ್ಲಿ ಅಭಿವೃದ್ಧಿ ವಿಷಯದಲ್ಲಿ ಸರ್ಕಾರ ದಾಖಲೆ ಮಾಡಿದೆ" ಅಂತ ಬಿಜೆಪಿ ಪಕ್ಷದ ಅಧ್ಯಕ್ಷರಾದ ಸನ್ಮಾನ್ಯ ಕೆ.ಎಸ್. ಈಶ್ವರಪ್ಪನವರು ರಾಜ್ಯದ ಪತ್ರಿಕೆಯೊಂದಕ್ಕೆ ನೀಡಿದ ಸಂದರ್ಶನದಲ್ಲಿ ಘೋಷಿಸಿದ್ದಾರೆ. ಇದೊಂದು ವಿಶೇಷ ಸುದ್ದಿ. ರಾಜ್ಯದ ಘನ ಬಿಜೆಪಿ ಸರ್ಕಾರ ನಾಲ್ಕು ವರ್ಷಗಳಲ್ಲಿ ಮಾಡಿರುವ ಮಹಾ ಸಾಧನೆಗಳ ಪಟ್ಟಿಯನ್ನು ಕೊಡಿ ಎಂದು ರಾಜ್ಯದ ಲೋಕಾಯುಕ್ತ ಕಚೇರಿಯಲ್ಲಿ ಕೇಳಿದರೆ ದೊಡ್ಡ ಪಟ್ಟಿಯೇ ಸಿಕ್ಕೀತು. ಅದನ್ನು ಬಿಟ್ರೂ ಸರ್ಕಾರದ್ದು ಬೇಕಾದಷ್ಟು ಸಾಧನೆ ಇದೆ. ಸುಮ್ಮನೇ ಉದಾಹರಣೆಗೆ ಇರಲಿ ಅಂತ ಇಲ್ಲಿ ಕೆಲವೊಂದು ಮಾಹಿತಿ ಇದೆ ಓದಿ.

ಉದ್ಯೋಗ ಖಾತ್ರಿ ಯೋಜನೆಗೆಂದು ಕೇಂದ್ರ ಸರ್ಕಾರದಿಂದ ಕೊಡಲಾಗಿರುವ ಹಣದಲ್ಲಿ 400 ಕೋಟಿ ರೂಪಾಯಿಗಳನ್ನು ರಾಜ್ಯ ಸರ್ಕಾರ ಬಳಸಿಕೊಳ್ಳದೇ ಹಾಗೇ ಭದ್ರವಾಗಿ ಉಳಿಸಿ ಇಟ್ಟಿದೆಯಂತೆ. ಬಿಜೆಪಿ ಸರ್ಕಾರದ ಈ ನೀತಿಯ ಫಲವಾಗಿ ಜನಕ್ಕೆ ಮತ್ತು ರಾಜ್ಯಕ್ಕೆ ಯಾವ ಯಾವ ರೀತಿಯಲ್ಲಿ ಪ್ರಯೋಜನವಾಗಿದೆ ಅಂತ ನೋಡಿ.

ಮೇ 22, 2012 ರಂದು ಹಂಪಿ ಎಕ್ಸ್‌ಪ್ರೆಸ್ ರೈಲು ಪೆನುಕೊಂಡ ಎಂಬಲ್ಲಿ ಅಪಘಾತಕ್ಕೆ ಗುರಿಯಾಗಿ 25 ಜನ ಸತ್ತು, 45 ಕ್ಕೂ ಹೆಚ್ಚು ಮಂದಿಗೆ ಗಾಯಗೊಂಡ ದುರಂತ ನಮಗೆ ಗೊತ್ತೇ ಇದೆ. ಈ ಅಪಘಾತದಲ್ಲಿ ತೊಂದರೆಗೊಳಗಾದವರು ಬಹುತೇಕ ಕೊಪ್ಪಳ ಮತ್ತು ಬಳ್ಳಾರಿ ಜಿಲ್ಲೆಗಳಿಗೆ ಸೇರಿದವರು. ಗ್ರಾಮೀಣ ಬಡವರು. ಬಳ್ಳಾರಿ ಜಿಲ್ಲೆಯ ಸಿರುಗುಪ್ಪ ತಾಲ್ಲೂಕಿನ ಕೆಂಚನಗುಡ್ಡ ತಾಂಡಾದ ಒಂದೇ ಕುಟುಂಬದ ನಾಲ್ಕು ಜನ ತಮಿಳು ನಾಡಿಗೆ ಕಬ್ಬು ಕಟಾವು ಮಾಡುವ ಕೂಲಿ ಕೆಲಸಕ್ಕೆ ಹೊರಟಿದ್ದವರು. ಅದೇ ರೀತಿ ಬೆಂಗಳೂರಿಗೆ ಕಟ್ಟಡ ಕಾರ್ಮಿಕರಾಗಿ ದುಡಿಯಲು ಬರುತ್ತಿದ್ದ ಸಂಡೂರು ತಾಲ್ಲೂಕಿನ ನಿಡಗುರ್ತಿ ಗ್ರಾಮದ ತಾಯಿ ಮಗ ಪ್ರಾಣ ಕಳೆದುಕೊಂಡಿದ್ದಾರೆ.

ಇಲ್ಲಿ ಗಮನಿಸಬೇಕಾದ ವಿಷಯ ಎಂದರೆ ಬರಗಾಲದ ಭೀಕರ ಪರಿಸ್ಥಿತಿಯಲ್ಲಿ ಅವರು ಬದುಕುವ ಬೇರೆ ದಾರಿ ಕಾಣದೇ ದೂರದ ಊರಿಗೆ ಗುಳೆ ಹೊರಟಿದ್ದರು.

ಅವರ ಊರುಗಳಲ್ಲಿ ಬರ ಪರಿಹಾರ ಕ್ರಮವೂ ಇರಲಿಲ್ಲ. ಉದ್ಯೋಗ ಖಾತ್ರಿ ಯೋಜನೆಯ ಜಾರಿಯೂ ಇರಲಿಲ್ಲ. ಸೂಕ್ತ ಬರ ಪರಿಹಾರ ನಿಧಿಯನ್ನು ಕೊಡಲಿಲ್ಲ ಎಂದು ಕೇಂದ್ರ ಸರ್ಕಾರವನ್ನು ದೂರಿಕೊಂಡು ರಾಜ್ಯ ಸರ್ಕಾರ ಕೂತಿದೆ. ಬರ ಪರಿಹಾರವನ್ನು ಕೋರಿ ಸಕಾಲದಲ್ಲಿ ರಾಜ್ಯ ಸರ್ಕಾರ ಕೇಂದ್ರಕ್ಕೆ ವರದಿ ನೀಡಿ ಮನವಿ ಮಾಡಲಿಲ್ಲ. ಬರ ಅಧ್ಯಯನಕ್ಕೆಂದು ಕೇಂದ್ರ ತಂಡ ಬಂದು ಹೋದರೂ ಹೆಚ್ಚಿನ ಪರಿಹಾರವೇನು ಬಿಡುಗಡೆಯಾಗಲಿಲ್ಲ. ಇದಕ್ಕೆ ಕೇಂದ್ರ ಸರ್ಕಾರ ಹುಡುಕಿಕೊಂಡಿರುವ ಕಾರಣ ಏನು ಗೊತ್ತೆ ? ಗ್ರಾಮೀಣ ಉದ್ಯೋಗ ಖಾತ್ರಿ ಯೋಜನೆಗೆಂದು ಬಿಡುಗಡೆಯಾಗಿರುವ 400 ಕೋಟಿ ರೂಪಾಯಿಗಳನ್ನು ಖರ್ಚೇ ಮಾಡದ ಮೇಲೆ ಬರ ಪರಿಹಾರ ನೀಡಬೇಕಾದ ಅಗತ್ಯವಾದರೂ ಏನಿದೆ ಅಂತ ಅದರ ವಾದ. ಕಳ್ಳ ಕಳ್ಳರು ಸಂತೆಗೆ ಹೋದಂತೆ, ಚೆನ್ನಾಗಿದೆಯಲ್ಲವೇ ವಾದ.



ರಾಜ್ಯ ಸರ್ಕಾರ ಬರ ಪರಿಹಾರ ಕಾಮಗಾರಿಯನ್ನಾಗಲೀ ಅಥವಾ ಉದ್ಯೋಗ ಖಾತ್ರಿಯನ್ನಾಗಲಿ ಯಾಕೆ ಜಾರಿ ಮಾಡುತ್ತಿಲ್ಲ ಎಂಬ ಬಗ್ಗೆ ಪ್ರಶ್ನೆಗೆ ಪ್ರಾಂತ ರೈತ ಸಂಘದ ಮುಖಂಡರಾದ ಯು. ಬಸವರಾಜು ಅವರು ನೀಡಿದ ಕಾರಣ ಹೀಗಿದೆ. ಸರ್ಕಾರ ರಾಜ್ಯದ ಭರ್ಜರಿ 'ಅಭಿವೃದ್ಧಿ'ಯ ಸಲುವಾಗಿ 'ವಿಷನ್ 2020' ಎಂಬ ಕಣ್ಣೋಟ ದಾಖಲೆಯನ್ನು ಅಂಗೀಕರಿಸಿದೆ. ಅದರಲ್ಲಿ ಘೋಷಿತವಾದ ನೀತಿ ಹೀಗಿದೆ. ರಾಜ್ಯದಲ್ಲಿ ಕೃಷಿಯನ್ನು ಅವಲಂಬಿಸಿರುವ ಜನರ ಪ್ರಮಾಣವನ್ನು ಶೇ. 61 ಇದ್ದು ಅದನ್ನು ಶೇ. 32 ಕ್ಕೆ ಇಳಿಸುವ ಗುರಿಯನ್ನು ಸರ್ಕಾರ ಹೊಂದಿದೆ. ಹಳ್ಳಿಗಳಿಂದ ಜನ ಹೀಗೆ ಗುಳೆ ಎದ್ದು ಹೋದರೆ ಮಾತ್ರ ತಾನೆ ಸರ್ಕಾರ ತನ್ನ ಗುರಿ ಸಾಧಿಸಲು ಸಾಧ್ಯ? 'ವಿಶ್ವ ಬಂಡವಾಳಿಗ' ರಿಗೆ ರೈತರ ಜಮೀನನ್ನು ಅಡೆ ತಡೆ ಇಲ್ಲದೇ ಅಳೆದು ಅಳೆದು ಕೊಡಲು ಸಾಧ್ಯ ?? ಮುಂದಿನ ತೀಮಾನ ನಿಮಗೆ ಬಿಟ್ಟಿದ್ದು.

★

ಬಿಬಿಎಂಪಿ ಸಾಧನೆಯ 'ಶಿಖರ'

ಬಿಜೆಪಿ ನೇತೃತ್ವದ ಬೃಹತ್ ಬೆಂಗಳೂರು ಮಹಾನಗರ ಪಾಲಿಕೆ–ಬಿಬಿಎಂಪಿಗೆ ನೂತನ 'ಮೇಯ'ರ್ ಬಂದಿದ್ದಾರೆ.

ಅದು ಈಗಾಗಲೇ ಹಳೆ ಸುದ್ದಿ. ಈ ಸಂಬಂಧ ಹೊಸ ಸುದ್ದಿ ಎಂದರೆ ಈ ಮೇಯರಿಗೆ ದಯಾನಂದ ಎಂಬ ವಿಶೇಷ ಕರ್ತವ್ಯಾಧಿಕಾರಿ ನೇಮಕವಾಗಿದ್ದಾರೆ. ಅದರಲ್ಲಿ ಏನು ವಿಶೇಷ ಅಂತೀರಾ ? ವಿಶೇಷ ಇದೆ.

ಈ ದಯಾನಂದ ಕಂದಾಯ ಇಲಾಖೆಯಲ್ಲಿ ಅಧಿಕಾರಿಯಾಗಿದ್ದರು. ಕಂಪ್ಯೂಟರ್ ಖರೀದಿ ಹಗರಣದಲ್ಲಿ ಅವರೊಬ್ಬ ಆರೋಪಿ. ಕಿಂಚಿತ್ತು ಕಾಮಗಾರಿಯನ್ನೇ ನಡೆಸದೇ ಬೇಕು ಬೇಕಾದ ಹಾಗೆ ನೂರಾರು ಕೋಟಿ ರೂಪಾಯಿಗಳ 'ಬಿಲ್' ಎತ್ತುವ ಪವಾಡ ಸದೃಶ್ಯ ಪ್ರಕರಣ ಮತ್ತು ಅಂತಹ ಹಲವು ಹಗರಣಗಳಿಂದಲೇ 'ಪ್ರಖ್ಯಾತಿ' ಹೊಂದಿರುವ ಬಿಬಿಎಂಪಿಗೆ ಇಂತಹವರಲ್ಲದೇ ಇನ್ಯಾರು ತಾನು ಬೇಕು. ಈಗ ಬಿಬಿಎಂಪಿ ಬೆಂಗಳೂರಿನ ಅಭಿವೃದ್ಧಿಗಾಗಿ 'ಹುಡ್ಕೋ' ಸಂಸ್ಥೆಗೆ ಬೆಂಗಳೂರಿನ ಮಹಾತ್ಮಗಾಂಧಿ ರಸ್ತೆಯ 24 ಅಂತಸ್ತಿನ 'ಯುಟಿಲಿಟಿ' ಕಟ್ಟಡವನ್ನೇ ಅಡಮಾನ ಇಟ್ಟು 1,000 ಕೋಟಿ ಸಾಲ ಎತ್ತಲು ಹೊರಟಿದೆ. ಬಹುಶ: ಈಗಲೂ ಯುಟಿಲಿಟಿ ಕಟ್ಟಡ ಬೆಂಗಳೂರಿನ ಅತಿ ಎತ್ತರದ ಕಟ್ಟಡ. ಇಂತಹ 'ಶಿಖರ' ವನ್ನೇ ಟಡ ಇಡುವುದು ಬಿಬಿಎಂಪಿಯ 'ಶಿಖರ ಸಾಧನೆ'.

★

ಜೈಲಾದರೇನು, ಗಣಿಯ ಕುಣಿಯಾದರೇನು ? ಕಾನೂನು ಉಲ್ಲಂಘನೆಯೇ ಸೈ

ಜೂನ್ 2, 2012 ರಂದು ಪರಪ್ಪನ ಅಗ್ರಹಾರಕ್ಕೆ ಭೇಟಿ ನೀಡಿದ ಬಿಜೆಪಿ ಸಚಿವ ಜಾರಕಿಹೊಳಿ, ನೆಲಮಂಗಲ ಶಾಸಕ, ಎಂ.ವಿ. ನಾಗರಾಜ್ ಜೈಲಿನ ನಿಯಮಗಳನ್ನು ಉಲ್ಲಂಘಿಸಿ ತಮ್ಮ ಸಹೋದ್ಯೋಗಿ ಮಿತ್ರ ವೈ. ಸಂಪಂಗಿಯವರನ್ನು ಭೇಟಿ ಮಾಡಿ ತಮ್ಮ ಮೊಬೈಲು ಬಳಸಿ ಕೆ.ಎಸ್. ಈಶ್ವರಪ್ಪ, ಸದಾನಂದ ಗೌಡರ ಜೊತೆ ಮೊಬೈಲು ಮಾತುಕತೆ ನಡೆಸಿದ್ದಾರೆ. ಕಾನೂನು ಪ್ರಕಾರ ಜೈಲಿನ ಆವರಣದೊಳಗೆ ಮೊಬೈಲು ಬಳಸುವಂತಿಲ್ಲ. ಸಚಿವರೇ ಅದನ್ನು ಉಲ್ಲಂಘಿಸುತ್ತಿದ್ದಾರೆ ಎನ್ನುವುದು ಏನು ವಿಶೆಷ ಅಲ್ಲ. ಯಾಕೆಂದರೆ ಬಿಜೆಪಿ ಸರ್ಕಾರದ ಸಚಿವರು ಕಾನೂನು ಪಾಲಿಸಿದರಷ್ಟೆ ವಿಶೇಷ.

★

300 ಕೋಟಿ ಅಂದಾಜು ಮುರಿದು ಹಾಕಿದ ಬಿಜೆಪಿ ಶಾಸಕರು ಗೋರಿ ಗುಡ್ಡೆ ಹಾಕಿರುವ ಸಂಪತ್ತು ರಾಶಿ

ರಾಜ್ಯ ಬಿಜೆಪಿ ಸರ್ಕಾರದ ಸಾಧನೆ ಹಾಗೂ ಸಚಿವರು, ಶಾಸಕರ ಸಾಧನೆ ಕುರಿತು ಎಷ್ಟು ಹೇಳಿದರೂ ಸಾಲದು. ಮತ್ತೆ ಸುಮ್ಮನೆ ಉದಾಹರಣೆಗೆಂದು ಈ ಕೆಲವು ಮಾಹಿತಿ ನೋಡಿ.

ಎಂ. ಶ್ರೀನಿವಾಸ್, ವೆಂಕಟೇಶ್ ಬಾಬು ಎಂಬುವವರು ಅಪ್ಪ ಮತ್ತು ಮಗ. ಇಬ್ಬರೂ ಬಿಜೆಪಿ ಪಕ್ಷದ ಜನ ಪ್ರತಿನಿಧಿಗಳೇ. ಅಪ್ಪ ರಾಜರಾಜೇಶ್ವರಿ ನಗರ ಕ್ಷೇತ್ರದ ಶಾಸಕರು. ಮಗ ಬಿಬಿಎಂಪಿ ಸದಸ್ಯರು. ಇಬ್ಬರೂ ಸೇರಿ ಮಾಡಿರುವ 'ಅಭಿವೃದ್ಧಿ'ಯ ಪರಿ ನೋಡಿ. ಇವರ ಆಸ್ತಿ, ಹಣಕಾಸು ವಿವರ ಕೇಳಿ ನಿಮ್ಮ ತಲೆ ಗಿರ್ ಅಂದೀತು ಜೋಪಾನ.

ಒಟ್ಟು 11 ಕಡೆಗಳಲ್ಲಿ ಏಕ ಕಾಲಕ್ಕೆ ನಡೆದ ದಾಳಿಗಳಲ್ಲಿ ಪತ್ತೆಯಾಗಿರುವ ಸಂಪತ್ತು ಇದು. 66 ಎಕರೆ ಆಸ್ತಿ ಪತ್ರಗಳು, 2.7 ಕೆ.ಜಿ. ಚಿನ್ನ, 10 ಕೆ.ಜಿ. ಬೆಳ್ಳಿ, 1 ಕ್ಯಾರಟ್ ವಜ್ರ, 37 ಗ್ರಾಂ ದುಬಾರಿ ಹರಳುಗಳು, 54 ಲಕ್ಷರೂ ನಗದು, 6 ಕೈಗಾರಿಕಾ ಶೆಡ್‌ಗಳ ದಾಖಲೆ, ನೂರಾರು ನಿವೇಶನಗಳ ಕಾಗದ ಪತ್ರಗಳು, ಹತ್ತಾರು ವಾಹನಗಳು, ಅಪಾರ್ಟ್‌ಮೆಂಟ್ಸ್‌ಗಳ, ಶಾಲೆಗಳ ದಾಖಲೆ ಪತ್ರಗಳು ...., ಶ್ರೀನಿವಾಸ್ ಅವರ ಕುಟುಂಬ ಸು.300 ಕೋಟಿ ಅಕ್ರಮ ಆಸ್ತಿ ಹೊಂದಿದೆ ಎಂದು ಲೋಕಾಯುಕ್ತಕ್ಕೆ ದೂರು ನೀಡಿದ್ದ ವ್ಯಕ್ತಿಯೇ ಬಯಲದ ಆಸ್ತಿ–ಪಾಸ್ತಿ ವಿವರ ನೋಡಿ ದಂಗಾಗಿದ್ದಾರೆ. ಇದಲ್ಲದೇ ಕಾರ್ ಶೆಡ್‌ನಲ್ಲಿ ಇಡಲಾಗಿದ್ದ ಆಸ್ತಿ ದಾಖಲೆಗಳನ್ನೊಳಗೊಂಡ ದೊಡ್ಡ ಚೀಲವೊಂದು ಸಿಕ್ಕಿದ್ದು ಅದರಲ್ಲಿ ಇನ್ನು ಏನೇನೆಲ್ಲಾ ಆಸ್ತಿ ಇದೆಯೋ ತಿಳಿದು ಬರಬೇಕಿದೆ. ಅದೇ ರೀತಿ ದಾಳಿಯ ಭಯದಿಂದ ಇತ್ತೀಚೆಗೆ ದಾಖಲೆಗಳನ್ನು ಸಾಗಿಸಿ ಇಡಲಾಗಿದ್ದ ಮತ್ತೊಂದು ಮನೆಗೆ ಬೀಗ ಮುದ್ರೆ ಹಾಕಲಾಗಿದ್ದು ಅದರಲ್ಲಿನ ಆಸ್ತಿ ಪಾಸ್ತಿ ಮಾಹಿತಿ ಇನ್ನು ಮೇಲೆ ತಿಳಿದು ಬರಬೇಕಿದೆ.

ಇಷ್ಟೆಲ್ಲಾ ಆಸ್ತಿ ಪಾಸ್ತಿ ಹೊಂದಿರುವ ಶ್ರೀನಿವಾಸ ಕುಟುಂಬದ ಸುಪುತ್ರ ತನ್ನ ಆಸ್ತಿ 1.5 ಕೋಟಿ ಮಾತ್ರ ಎಂದು ಘೋಷಿಸಿಕೊಂಡ ದಾಖಲೆ ಪತ್ರವೂ ಇದೇ ಸಂದರ್ಭದಲ್ಲಿ ದೊರೆತಿದ್ದು ಸ್ವಾರಸ್ಯಕರವಾಗಿದೆ.

ನೇರ ಹೊರ

ಮಮತಾ ದೀದಿಯ ಅಧಿಕಾರದ ಅಟ್ಟಹಾಸ

ಮುರುಘೇಶ.ವೀ.ಕೆ

ಪಶ್ಚಿಮ ಬಂಗಾಳವ ಕೆಂಪು ಕೋಟೆಯ ಅಧಿಕಾರವನ್ನು ವಶಪಡಿಸಿಕೊಂಡ ಅನ್ನುವ ದುರಹಂಕಾರದಿಂದ ಆಡಳಿತ ನಡೆಸುತ್ತಿರುವ ಮಮತಾ ಬ್ಯಾನರ್ಜಿ ಸರ್ಕಾರದ ದರ್ಬಾರ್ ನಿಂದಾಗಿ ಜನರು ತಾವು ನೀಡಿದ ತೀರ್ಪು ಒಬ್ಬ ದುರಹಂಕಾರಿಗಾ ಎಂದು ವ್ಯಥೆ ಪಡುವಂತಾಗಿದೆ. ಇಂದು ಅಲ್ಲಿ ಜನರು ಅನುಭವಿಸುತ್ತಿರುವ ಕಷ್ಟಗಳು ಯಾರಿಗೆ ಹೇಳಬೇಕು ? ನಿರಂತರವಾಗಿ ಪ್ರಜಾಪ್ರಭುತ್ವದ ಕಗ್ಗೊಲೆ ಮಾಡಿ ಸರ್ವಾಧಿಕಾರಿ ಆಡಳಿತಕ್ಕೆ ತಳಪಾಯ ಹಾಕಲಾಗುತ್ತಿದೆ. ಸರ್ಕಾರ ವಿಪರೀತ ತನ್ನ ಅಟ್ಟಹಾಸವನ್ನು ಪ್ರದರ್ಶಿಸುತ್ತಿದೆ.

ಆಡಳಿತಕ್ಕೆ ಒಂದು ವರ್ಷವಾಯಿತೆನ್ನುವ ಸಂಭ್ರಮದ ಆಚರಣೆ ಸಂದರ್ಭದಲ್ಲಿ ದೂರದರ್ಶನ ಚಾನಲೊಂದು ಏರ್ಪಡಿಸಿದ ವಿದ್ಯಾರ್ಥಿಗ ಳೊಂದಿಗಿನ ನೇರ ಸಂವಾದ ಕಾರ್ಯಕ್ರಮಕ್ಕೆ ಆಗಮಿಸಿದ ಮುಖ್ಯಮಂತ್ರಿ ಮಮತಾ ಬ್ಯಾನರ್ಜಿ ವಿದ್ಯಾರ್ಥಿಗಳೊಂದಿಗೆ ತಮ್ಮ ಆಡಳಿತದ ರೀತಿ ಮತ್ತು ಸರ್ಕಾರ ಕೈಗೊಂಡ ಜನಪರ ಕಾರ್ಯಗಳ ಬಗ್ಗೆ ವಿದ್ಯಾರ್ಥಿ, ಯುವಜನರ, ಮತ್ತು ರೈತರಿಗಾಗಿ ರೂಪಿಸಿದ ಯೋಜನೆಗಳ ವಿವರ ನೀಡಿದರು.

ವಿದ್ಯಾರ್ಥಿಯೊಬ್ಬರು ಇಂದು ರಾಜ್ಯದಲ್ಲಿ ಮಹಿಳೆಯರ ಮೇಲೆ ದೌರ್ಜನ್ಯಗಳು ಹೆಚ್ಚಾಗಿವೆ, ಮಹಿಳೆಯರ ಹಕ್ಕುಗಳಿಗೆ ಚ್ಯುತಿ ಬರುವ ಕಾರ್ಯ ನಡೆಯುತ್ತಿದೆ ಎಂದು ಇತ್ತೀಚೆಗೆ ನಡೆದ ಮಹಿಳೆಯರ ಮೇಲಿನ ದೌರ್ಜನ್ಯವನ್ನು ಸರಕಾರ ಮುಚ್ಚಿ ಹಾಕಿದ್ದರ ಕುರಿತು ಮತ್ತು ರೈತ ವಿರೋಧಿ ಯೋಜನೆಗಳನ್ನು ರೂಪಿಸುತ್ತಿರುವ ಕುರಿತು ಪ್ರಶ್ನೆ ಕೇಳಿದ್ದಕ್ಕೆ ಕೆಂಡಾ ಮಂಡಲವಾದ ಮುಖ್ಯಮಂತ್ರಿಗಳು ಆ ದೂರದರ್ಶನದ ಸಿಬ್ಬಂದಿಯೊಂದಿಗೆ ವಿಚಿತ್ರವಾಗಿ ನಡೆದುಕೊಂಡು ವಿದ್ಯಾರ್ಥಿಗಳಿಗೆ ಉತ್ತರಿಸದೆ ಮಧ್ಯದಲ್ಲಿಯೇ ಎದ್ದು ಹೊರ ನಡೆದರು.

ನೀವು ಸಿಪಿಎಂನವರು, ಮಾವೋವಾದಿಗಳು ಎಂದು ವಿದ್ಯಾರ್ಥಿಗಳನ್ನು ದೂಷಿಸಿದ ಮಮತ ಸಿಪಿಎಂ ಮತ್ತು ಮಾವೋವಾದಿಗಳ ಪ್ರಶ್ನೆಗಳಿಗೆ ನಾನು ಉತ್ತರಿಸಬೇಕಿಲ್ಲ ಎಂದು ಘೋಷಿಸಿದರು. ಆದರೆ ಇಂದು ಮಕ್ಕಳು ಕೇಳುವ ಸಹಜವಾದ ಮತ್ತು ಪ್ರಜಾಸತಾತ್ಮಕವಾದ ಪ್ರಶ್ನೆಗಳಿಗೆ ಉತ್ತರಿಸದೆ ಮತ್ತು ಆ ಕೃತ್ಯ ಎಸಗಿದ ವ್ಯಕ್ತಿಗೆ ಕಾನೂನು ವಿಧಿಸಿದ ಶಿಕ್ಷೆ ಬಗ್ಗೆ ಹೇಳದೆ ಅಸಹನೆ



ಕ್ರೋಧದಿಂದ ಬಂದದ್ದು ಪ್ರಜಾಪ್ರಭುತ್ವಕ್ಕೆ ಮಾಡಿದ ಅಪಮಾನವಾಗಿದೆ.

ಇದು ಇಲ್ಲಿಗೆ ಮುಗಿಯದೇ ಮುಂದುವರೆದು ನಾವೇನೂ ಕಮ್ಮಿ ಎನ್ನುವಂತೆ ಅವರ ಸರ್ಕಾರದ ಉನ್ನತ ಶಿಕ್ಷಣ ಸಚಿವರು ಮತ್ತೊಂದು ಟಿವಿ ಸಂದರ್ಶನದಲ್ಲಿ ಇಬ್ಬರು ಪ್ರಾಧ್ಯಾಪಕರು ಸರಕಾರಿ ಕಾಲೇಜು ಮತ್ತು ಖಾಸಗಿ ಕಾಲೇಜುಗಳಿಗೆ ಸರಕಾರ ಮತ್ತು ವಿಶ್ವವಿದ್ಯಾನಿಲಯ ರೂಪಿಸಿರುವ ಕಾನೂನಿನ ತಾರತಮ್ಯದ ಬಗ್ಗೆ ಮಾತನಾಡಿದ್ದಾರೆಂದು ಅವರ ಮೇಲೆ ಕೇಸ್ ದಾಖಲಿಸಿ ನೋಟಿಸ್ ನೀಡಲಾಗಿದೆ.

ಜರಗ್ರಾಮ್ ಕಾಲೇಜಿನ ಅರ್ಥಶಾಸ್ತ್ರ ಪ್ರಾಧ್ಯಾಪಕರಾದ ದೇಬಸಿಸ್, ಸರ್ಕಾರ್ ಮತ್ತು ಬಂಗಾಳಿ ಹೂಗ್ಲಿ ಮಹಾಸಿಂಗ್ ಕಾಲೇಜಿನ ಶಾಪ್, ಶೇನ್ ಪ್ರಾಧ್ಯಾಪಕರ ಮೇಲೆ ಕೇಸ್ ದಾಖಲಾಗಿದೆ. ಪ್ರಜಾಪ್ರಭುತ್ವ ವ್ಯವಸ್ಥೆಯಲ್ಲಿ ಎಲ್ಲರಿಗೂ ಸಮಾನ ಹಕ್ಕುಗಳಿವೆ ಮತ್ತು ಅವರದ್ದೆ ಆದ ಸ್ವಾತಂತ್ರ್ಯವಿದೆ ಎನ್ನುವುದನ್ನು ಮರೆತು ಸರ್ವಾಧಿಕಾರಿ ಆಡಳಿತ ವ್ಯವಸ್ಥೆಯನ್ನು ಜಾರಿಮಾಡಲು ನಿರಂತರವಾಗಿ ಯತ್ನಿಸುತ್ತಿದೆ ಪಶ್ಚಿಮ ಬಂಗಾಳದ ಮಮತಾ ದಿದಿಯ ಸರಕಾರ.


ಪ್ರಾಧ್ಯಾಪಕರು ಹೇಳಿದ್ದಾದರು ಏನೂ ಸರಕಾರಿ ಕಾಲೇಜು, ಖಾಸಗಿ, ಮತ್ತು ಅನುದಾನಿತ ಕಾಲೇಜುಗಳಿಗೆ ಸರಕಾರ ಮತ್ತು ವಿಶ್ವವಿದ್ಯಾನಿಲಯ ರೂಪಿಸಿರುವ ಕಾನೂನಿ ನಲ್ಲಿರುವ ಲೋಪ ದೋಷಗಳ ಬಗ್ಗೆ ಸಂದರ್ಶಕರು ಕೇಳಿದ ಪ್ರಶ್ನೆಗೆ ಉತ್ತರಿಸಿದ್ದಾರೆ. ಸರ್ಕಾರಿ ನೌಕರರಾದ ನೀವು ಸರ್ಕಾರದ ಏಜೆಂಟರಂತೆ ಕೆಲಸ ಮಾಡಬೇಕು. ಸರ್ಕಾರದ ವಿರುದ್ಧವಲ್ಲ. ನಿಮಗೆ ಈ ರೀತಿಯಾಗಿ ಸಂದರ್ಶನದಲ್ಲಿ ಮಾತನಾಡಲು ಅನುಮತಿ ಕೊಟ್ಟವರಾರು, ನೀವೇನೂ ರಾಜಕಾರಣಿಗಳೇ, ವಿರೋಧ ಪಕ್ಷದವರೇ ? ಯಾರು ನಿಮಗೆ ಈ ರೀತಿ ಹೇಳಿಕೆ ನೀಡಲು ಹೇಳಿದ್ದು ? ಎಂದು ವಿಶ್ವವಿದ್ಯಾಲಯ ಅವರ ಮೇಲೆ ಕ್ರಮ ಕೈಗೊಳ್ಳಲು ಸಚಿವರು ಆದೇಶಿಸಿ 15 ದಿನಗಳ ಒಳಗೆ ಉತ್ತರಿಸಲು ನೋಟಿಸ್ ನೀಡಿದ್ದಾರೆ.

ಪ್ರಜಾಪ್ರಭುತ್ವ ವ್ಯವಸ್ಥೆಯಲ್ಲಿ ಎಲ್ಲರಿಗೂ ವಾಕ್ ಮತ್ತು ಅಭಿವ್ಯಕ್ತಿ ಸ್ವಾತಂತ್ರ್ಯವಿದೆ. ಆದರೆ ಈ ಸರ್ಕಾರಕ್ಕೆ ಇದ್ಯಾವುದರ ಕಾಳಜಿಯೂ ಇಲ್ಲದ ಕಾರಣ ಇಲ್ಲಿ ಯಾರಿಗೂ ರಕ್ಷಣೆ ಇಲ್ಲ. ಇತ್ತೀಚೆಗೆ ಮತ್ತೊಂದು ಪ್ರಕರಣ ಮಾಧ್ಯಮದಲ್ಲಿ ವರದಿಯಾಗಿದೆ. ಸೈನಿಕ ದಳದ ಮುಖ್ಯಸ್ಥನ ಮಡದಿಯ ಮೇಲೆ ಹಾಡು ಹಗಲೇ ನಾಲ್ಕು ಜನ ಅತ್ಯಾಚಾರ ಮಾಡಿದ್ದಾರೆ. ಸೈನಿಕ ದಳದ ಮುಖ್ಯಸ್ಥನ ಕುಟುಂಬಕ್ಕೆ ರಕ್ಷಣೆಯಿಲ್ಲ. ಇನ್ನು ಜನಸಾಮಾನ್ಯರ ಗತಿ ಏನು ?

ಒಂದು ಸುಶಿಕ್ಷಿತ ರಾಜ್ಯದಲ್ಲಿ ವೈಜ್ಞಾನಿಕ ಆಲೋಚನೆ ಮಾಡುವ ಜನ ಇರುವ ಸಂದರ್ಭದಲ್ಲಿ ಸದ್ಯದ ಪರಿಸ್ಥಿತಿ ಕಣ್ಣಿದ್ದು ಕುರುಡರಾಗಿ ತಮ್ಮ ಆಡಳಿತವನ್ನು ಒಪ್ಪಿಕೊಳ್ಳಿ ಎಂದು ಮತ್ತು ಸರಕಾರಿ ನೌಕರರೆಲ್ಲ ಸರ್ಕಾರದ ಎಜೆಂಟರಾಗಿ ಕಾರ್ಯನಿರ್ವಹಿಸುವಂತೆ ಒತ್ತಡ ಹೇರುತ್ತಿದೆ. ಒಬ್ಬ ಶಿಕ್ಷಕ ಸಮಾಜವನ್ನು ಸುಧಾರಿಸಲೂಬಹುದು, ಹಾಳು ಮಾಡಲೂ ಬಹುದು ಅವನಿಂದ ಅದು ಸಾಧ್ಯ. ಆದರೆ ಒಬ್ಬ ದುಷ್ಟ ರಾಜಕಾರಣಿಗೆ ಅಧಿಕಾರ ಸಿಕ್ಕರೆ ಅದು ಕಾಗೆಯ ಕೈಯಲ್ಲಿ ಅಧಿಕಾರ ಕೊಟ್ಟರೆ ಕಚೇರಿ ತುಂಬಾ .... ಮಾಡಿದಂತೆ ಎನ್ನುವ ಗಾದೆಯಂತಿದೆ ಮಮತಾ ಬ್ಯಾನರ್ಜಿಯ ಆಡಳಿತ ವೈಖರಿ.

ಪಂಜಾಬ್ ಸಾರಿಗೆ ಸಂಸ್ಥೆಯ ಗುತ್ತಿಗೆ ನೌಕರರ ಯಶಸ್ವಿ ಮುಷ್ಕರ

ರಾಜ್ಯದ 18 ಸಾರಿಗೆ ಘಟಕಗಳ 4,000 ಗುತ್ತಿಗೆ ಚಾಲಕರು, ನಿರ್ವಾಹಕರು, ವರ್ಕ್ ಶಾಪ್ ನೌಕರರ 2 ದಿನಗಳ ಮುಷ್ಕರ ಅಭೂತಪೂರ್ವ ಯಶಸ್ವಿಯಾಗಿ ನೆರವೇರಿತ್ತು. ಮುಷ್ಕರ ಸಮಯದಲ್ಲಿ ರಾಜ್ಯಾದ್ಯಂತ ಯಾವುದೇ ಸರಕಾರಿ ಬಸ್ಸುಗಳು ಸಂಚರಿಸದೆ ಮುಷ್ಕರಕ್ಕೆ ಬೆಂಬಲ ನೀಡಿದವು. ಆದರೆ ಸಾರಿಗೆ ಸಂಸ್ಥೆಯ ಆಡಳಿತ ಮಂಡಳಿಗೆ ಈ ಮುಷ್ಕರದಿಂದಾಗಿ ಮುಖಭಂಗವಾಗಿ ನೌಕರರ ಮೇಲೆ ತುಂಬಾ ಆಕ್ರೋಶಗೊಂಡಿತು.



ಶಾಶ್ವತ ಸ್ವರೂಪ ಮತ್ತು ದೀರ್ಘಾವಧಿ ಕೆಲಸಗಳಿಗೆ ಗುತ್ತಿಗೆ ಆಧಾರದ ನೌಕರರನ್ನು ನೇಮಿಸಬಾರದು ಎಂಬ ನ್ಯಾಯಾಲಯದ ಆದೇಶವೇ ಇದೆ. ನಿರಂತರವಾಗಿ ಸಾರ್ವಜನಿಕರೊಂದಿಗೆ ತುಂಬಾ ಜವಾಬ್ದಾರಿಯಿಂದ ಒತ್ತಡದಲ್ಲಿ ಕಾರ್ಯನಿರ್ವಹಿಸುವ ಚಾಲಕ, ನಿರ್ವಾಹಕ ಮತ್ತು ತಾಂತ್ರಿಕ ಸಿಬ್ಬಂದಿಗಳನ್ನು ಗುತ್ತಿಗೆ ಆಧಾರದ ಮೇಲೆ ನೇಮಕ ಮಾಡಿ ಅವರಿಂದ ಸೇವೆ ಪಡೆಯುತ್ತಿರುವುದು ಎಲ್ಲಾ ರಾಜ್ಯಗಳಲ್ಲಿ ಜಾಗತೀಕರಣ ಮತ್ತು ಖಾಸಗೀಕರಣದಿಂದಾಗಿ ದಿನೇ ದಿನೇ ಹೆಚ್ಚಾಗುತ್ತಿರುವುದು ತುಂಬಾ ಕಳವಳಕಾರಿ ವಿಷಯ.

ಸಾರಿಗೆ ಸಂಸ್ಥೆ ಈ ರೀತಿಯಾಗಿ ದುಡಿಸಿಕೊಳ್ಳಲು ಇದು ಸೀಮಿತಾವಧಿಯ ಯೋಜನೆಯಲ್ಲ ನಿರಂತರವಾಗಿ ಈ ಸೇವೆಯನ್ನು ಸಾರ್ವಜನಿಕರಿಗೆ ನೀಡಬೇಕು. ನೌಕರರ ಸೇವೆಯಿಂದ ಸಂಸ್ಥೆಗೆ ಸಾಕಷ್ಟು ಲಾಭ ಬಂದರೂ ಕೆಲ ಅಧಿಕಾರಿಗಳ ಬ್ರಂಹಾಂಡ ಭ್ರಷ್ಟಾಚಾರದಿಂದ ಲಾಭ ಕಂಡುಬರುತ್ತಿಲ್ಲ, ಆದರೆ ಸರ್ಕಾರ ಇಂತಹ ಅಧಿಕಾರಿಗಳ ಮೇಲೆ ಕ್ರಮಕೈಗೊಳ್ಳದೆ ಇರುವುದು ಸಂಶಯಾಸ್ಪದವಾಗಿದೆ.

ಇಂದು ಗುತ್ತಿಗೆ ನೌಕರರಿಗೆ ಕಾನೂನಿನ ಪ್ರಕಾರ ಅವರಿಗೆ ಕೆಲಸಕ್ಕೆ ಸಮನಾದ ಸಂಬಳ ಕೊಡಬೇಕು, ಅವರನ್ನು ಪೂರ್ಣಾವಧಿ ನೌಕರರೆಂದು ಪರಿಗಣಿಸಬೇಕು ಮತ್ತು ಭ್ರಷ್ಟಾಚಾರದಲ್ಲಿ ತೊಡಗಿರುವ ಅಧಿಕಾರಿಗಳ ಮೇಲೆ ಕ್ರಮ ಕೈಗೊಳಬೇಕು ಎಂದು ರಾಜ್ಯದ ರೂಪರ್, ಭಗತ್‌ಸಿಂಗ್ ನಗರ, ಜಲಾಂದರ್, ಅಮೃತಸರ, ಮಾಘಿ, ಲೂಧಿಯಾನ, ಮತ್ತು ಮುಕ್ತಸರ್ ಮುಂತಾದ ಪ್ರದೇಶದಲ್ಲಿ ಸಿಐಟಿಯು ರಾಜ್ಯ ಕಾರ್ಯದರ್ಶಿ ಕಾಂ, ರಘುನಾಥಸಿಂಗ್, ಅಧ್ಯಕ್ಷರಾದ ಕಾಂ, ವಿಜಯ ಮಿಶ್ರಾ, ಉಪಾಧ್ಯಕ್ಷರಾದ ಕಾಂ, ಚಂದ್ರಶೇಖರ್. ಇವರ ನೇತೃತ್ವದಲ್ಲಿ ಮುಷ್ಕರ ಯಶಸ್ವಿಯಾಗಿ ಜರುಗಿತು ಈ ಯಶಸ್ವಿ ಮುಷ್ಕರದಲ್ಲಿ ಭಾಗವಹಿಸಿದ ಎಲ್ಲಾ ನೌಕರಿಗೂ ಪಂಜಾಬ್ ಸಿಐಟಿಯು ರಾಜ್ಯ ಸಮಿತಿ ಶುಭಾಶಯ ಕೋರಿದೆ.

ಭಾರತ ಅಮೆರಿಕನ್ ಮಿಲಿಟರಿ ತಂತ್ರದ ಚಕ್ರದ ಕೀಲು?

ಅಮೆರಿಕಾದ ಮಿಲಿಟರಿ ವ್ಯವಸ್ಥೆ 'ಪೆಂಟಗಾನ್' ನ ಮುಖ್ಯಸ್ಥ ಹಾಗೂ ಅಲ್ಲಿಯ ರಕ್ಷಣಾ ಸಚಿವ ಲಿಯೊನ್ ಪೆನೆಟ್ಟಾ ಪ್ರಕಾರ ಏಶ್ಯಾದ ಮೇಲೆ ಗಮನ ಕೇಂದ್ರೀಕರಿಸಿದ ಹೊಸ ಅಮೆರಿಕನ್ ಮಿಲಿಟರಿ ಕಾರ್ಯವ್ಯೂಹದ ಚಕ್ರದಲ್ಲಿ ಭಾರತ ಒಂದು ಕೀಲು. ಇದು ಅಮೆರಿಕನ್ ಆಳರಸರ ಆಶಯವೋ, ಅಥವ ಭಾರತದ ಆಳರಸರು ಈಗಾಗಲೇ ಅದನ್ನು ಆ ಮಟ್ಟಕ್ಕೆ ಇಳಿಸಿದ್ದಾರೆ ಎಂಬ ಸರ್ಟಿಫಿಕೆಟೋ ಗೊತ್ತಾಗಿಲ್ಲ. ಆದರೆ ಯುಪಿಎ-2 ಸರಕಾರದ ವಕ್ತಾರರಿಗೆ ಈ ರೀತಿಯ ಸಾರ್ವಜನಿಕ ಹೇಳಿಕೆ ಮುಜುಗರವನ್ನೂ ತಂದಿದೆಯಂತೆ. ಪೆನೆಟ್ಟಾ ತಾನು ಭಾರತಕ್ಕೆ ಭೇಟಿ ಕೊಟ್ಟಿರುವದೇ 'ಕಳೆದ ಒಂದು ದಶಕದಲ್ಲಿ ನಾಟಕೀಯವಾಗಿ ಉತ್ತಮಗೊಂಡ ಮಿಲಿಟರಿ ಸಂಬಂಧಗಳನ್ನು, ಭದ್ರತಾ ಸಹಕಾರವನ್ನು ಆಳಗೊಳಿಸಿ ಮತ್ತು ನಿಜವಾಗಿಯೂ ಈ ಪ್ರದೇಶಕ್ಕೆ ಮತ್ತು ವಿಶ್ವಕ್ಕೆ ಭದ್ರತೆ ಒದಗಸಲು' ಎಂದು ಮುಲಾಜಿಲ್ಲದೆ ಹೇಳಿದ್ದಾರೆ.


ಅಮೆರಿಕನ್ ಯಜಮಾನಿಕೆಯ ಭಾಷೆಯಲ್ಲಿ ಇದರ ನಿಜವಾದ ಅರ್ಥ ಎಲ್ಲ ರಂಗಗಳಲ್ಲೂ ಅಮೆರಿಕಾದ ಪ್ರಾಬಲ್ಯಕ್ಕೆ ಸವಾಲಾಗುತ್ತಿರುವ ಚೀನಾದ ವಿರುದ್ಧ ಅಮೆರಿಕಾಕ್ಕೆ 'ಭದ್ರತೆ'ಯ ಕಾರ್ಯವ್ಯೂಹ ಎಂದು.

ಆತ ಭಾರತದ ರಕ್ಷಣಾ ಮಂತ್ರಿಯೊಡನೆ ಅಮೆರಿಕಾದ ಸಮಸ್ತ ನಾವಿಕ ಪಡೆಯನ್ನು ಏಶ್ಯ-ಶಾಂತಸಾಗರ ಪ್ರದೇಶಕ್ಕೆ ವರ್ಗಾಯಿಸುವ ಬಗ್ಗೆ ಚರ್ಚಿಸಿದರು. ಇದು ಕೂಡ ಯುಪಿಎ-2 ಸರಕಾರಕ್ಕೆ ಪೇಚು ತಂದಿದೆ ಎಂದು ಹೇಳಲಾಗುತ್ತಿದೆ. ಭಾರತ ಈ ಪ್ರದೇಶದಲ್ಲಿ ಒಂದು ಬಹುದೇಶೀಯ ಭದ್ರತಾ ವ್ಯವಸ್ಥೆಯನ್ನು ಬಯಸುತ್ತದೆ ಎಂದು ಅಮೆರಿಕನ್ ಸಚಿವರಿಗೆ ಸೂಚಿಸಲಾಗಿದೆಯಂತೆ. ಆದರೆ ಯುಪಿಎ ಸರಕಾರ ಅಮೆರಿಕಾದೊಂದಿಗೆ ಬೆಳೆಸಿಕೊಂಡ ಸಾಮರಿಕ ಮೈತ್ರಿಯ ಫಲವಾಗಿ ಭಾರತದಂತಹ ದೊಡ್ಡ ದೇಶ ಅಮೆರಿಕಾದ ಮಿಲಿಟರಿ ವ್ಯೂಹದ ಚಕ್ರ ಕೀಲು ಎಂಬ ಸೊಕ್ಕಿನ ಮಾತನ್ನು ಖಂಡಿಸುವ ಧೈರ್ಯ ಮಾತ್ರ ತೋರಲಿಲ್ಲ. ಭಾರತ ತನ್ನ ರಾಷ್ಟ್ರೀಯ ಹಿತಾಸಕ್ತಿಗಳ ಮೇಲೆ ಗಮನ ಕೇಂದ್ರೀಕರಿಸುವ ವಿದೇಶಾಂಗ ನೀತಿಯನ್ನು ಅನುಸರಿಸಿದರೆ, ಅದನ್ನು ಈ ರೀತಿ ಚೀನಾದ ವಿರುದ್ಧ ಒಂದು ಕೂಟದ ಭಾಗವಾಗಿಸುವ ಅಮೆರಿಕನ್ ಪ್ರಯತ್ನಗಳು ಯಶಸ್ವಿಯಾಗಲಾರವು ಎಂದು ವಿಶ್ಲೇಷಕರು ಅಭಿಪ್ರಾಯ ಪಡುತ್ತಿದ್ದಾರೆ.

ಆದರೆ ಸದ್ಯ ಯುಪಿಎ-2 ಸರಕಾರ ಪೇಚಿನ ಮೇಲೆ ಪೇಚನ್ನು ಅನುಭವಿಸುತ್ತಿದೆ.

ಈ ಭೇಟಿಯ ಮತ್ತು ಅಮೆರಿಕಾದಲ್ಲಿ 'ಭಾರತ-ಅಮೆರಿಕಾ ಸಂವಾದ'ದ ಸಂದರ್ಭಕ್ಕೆಂದೇ ಅಮೆರಿಕಾ ಇರಾನಿನೊಂದಿಗೆ ತೈಲ ವ್ಯಾಪಾರದ ಮೇಲೆ ಹೊಸ ಕಠಿಣ ನಿರ್ಬಂಧ ಗಳಿಂದ ಭಾರತಕ್ಕೆ ವಿನಾಯ್ತಿ ಕೊಡಲು, ಆದರೆ ಚೀನಾಕ್ಕೆ ಕೊಡದಿರಲು ನಿರ್ಧರಿಸಿರುವುದಾಗಿ ಪ್ರಕಟಿಸಿದೆ. ಇದು ಕೂಡ ಭಾರತ ಸರಕಾರಕ್ಕೆ ಮುಜುಗರ ಉಂಟು ಮಾಡಿದೆಯಂತೆ. ಏಕೆಂದರೆ ಅಮೆರಿಕಾ ಈಗ ಭಾರತ ಸೇರಿದಂತೆ ಏಳು ದೇಶಗಳಿಗೆ ಈ ವಿನಾಯ್ತಿ ನೀಡಿರುವುದು ಅವು ತನ್ನ ಬೆದರಿಕೆಯಿಂದಾಗಿ ಇರಾನಿನಿಂದ ತೈಲ ಆಮದನ್ನು ಗಣನೀಯವಾಗಿ ಇಳಿಸಿವೆ ಎಂಬ ಕಾರಣಕ್ಕಾಗಿಯೇ ಎಂದು ಸ್ಪಷ್ಟವಾಗಿ ಹೇಳಿದೆ. ಅಂದರೆ ಇರಾನಿನಿಂದ ತೈಲ ಆಮದಿನ ಪ್ರಶ್ನೆಯನ್ನು ನಮ್ಮ ದೇಶದ ಹಿತದೃಷ್ಟಿಯಿಂದ ನೋಡಲಾಗುತ್ತಿದೆ ಎಂದು ಹೇಳುತ್ತಿದ್ದ ಯುಪಿಎ-2 ಸರಕಾರ ವಾಸ್ತವವಾಗಿ ಅಮೆರಿಕಾದ ಒತ್ತಡಗಳಿಗೆ ಕೊನೆಗೂ ಶರಣಾಗಿದೆ ಎಂದು ಬಯಲಾದಂತಾಯಿತು. ಅತ್ತ ಇರಾನಿನ ಕಚ್ಚಾತೈಲದ ಐದನೇ ಒಂದು ಭಾಗದಷ್ಟು ಆಮದು ಮಾಡಿಕೊಳ್ಳುವ ಚೀನಾ ಈ ಒತ್ತಡಗಳಿಗೆ ಜಗ್ಗಿಲ್ಲವಾದ್ದರಿಂದಲೇ ಈ ವಿನಾಯ್ತಿಯನ್ನು ಅದಕ್ಕೆ ಕೊಡಲಾಗಿಲ್ಲ. ಜೂನ್ 28ರ ಗಡುವನ್ನು ಅಮೆರಿಕಾ ಇದಕ್ಕೆ ಹಾಕಿದೆ.

ನಾವೇನೂ ಈ ವಿನಾಯ್ತಿ ಕೇಳಿರಲಿಲ್ಲ, ಅಮೆರಿಕಾವೇ ತನ್ನ ಆಂತರಿಕ ಕಾನೂನಿನ ಪ್ರಕಾರ ಇದನ್ನು ಕೊಟ್ಟಿದೆ ಎಂದು ಯುಪಿಎ-2 ಸರಕಾರ ಈ ಮುಜುಗರದಿಂದ ಪಾರಾಗಲು ಯತ್ನಿಸಿದೆ.



ವೇದರಾಜ ಎಸ್.ಕೆ.

ಅಲ್ಪಸಂಖ್ಯಾತರಿಗೆ ಮೀಸಲಾತಿ ಉಪಕೋಟಾ: ಯುಪಿಎ-2 ಸರಕಾರಕ್ಕೆ ನ್ಯಾಯಾಲಯದಲ್ಲಿ ತರಾಟೆ

ನ್ಯಾಯಮೂರ್ತಿ ರಂಗನಾಥ್ ಮಿಶ್ರಾ ನೇತೃತ್ವದ ಧಾರ್ಮಿಕ ಮತ್ತು ಭಾಷಾ ಅಲ್ಪ ಸಂಖ್ಯಾತರ ರಾಷ್ಟ್ರೀಯ ಸಮಿತಿ ಸಾಮಾಜಿಕ ವಾಗಿ ಮತ್ತು ಶೈಕ್ಷಣಿಕವಾಗಿ ಹಿಂದುಳಿದಿರುವ ಆಧಾರದಲ್ಲಿ ಕೇಂದ್ರ ಮತ್ತು ರಾಜ್ಯ ಸರ್ಕಾರದ ಉದ್ಯೋಗಗಳಲ್ಲಿ ಮುಸ್ಲಿಂ ಅಲ್ಪ ಸಂಖ್ಯಾತರಿಗೆ ಶೇ.10 ಮೀಸಲಾತಿ ನೀಡಬೇಕೆಂದು ಶಿಫಾರಸು ಮಾಡಿತ್ತು. ಯುಪಿಎ-2 ಸರಕಾರ ಈ ವರದಿಯನ್ನು ಸಂಸತ್ತಿನಲ್ಲಿ ಮಂಡಿಸಲು ವಿಳಂಬ ಮಾಡಿತಷ್ಟೇ ಅಲ್ಲ, ಈ ಶಿಫಾರಸನ್ನೂ ತಿರಸ್ಕರಿಸಿತು. ಬದಲಿಗೆ, ಮುಸ್ಲಿಂ ಮತದಾರರು ಗಣನೀಯ ಸಂಖ್ಯೆಯಲ್ಲಿರುವ ಉತ್ತರ ಪ್ರದೇಶ ಸೇರಿದಂತೆ ಐದು ರಾಜ್ಯಗಳ ವಿಧಾನ ಸಭಾ ಚುನಾವಣೆಗಳ ಹಿನ್ನೆಲೆಯಲ್ಲಿ, ಉಳಿದ ಹಿಂದುಳಿದ ವರ್ಗಗಳಿಗೆ ಲಭ್ಯವಿರುವ ಶೇ. 27ರ ಮೀಸಲಾತಿಯಲ್ಲಿ ಶೇ. 4.5ರಷ್ಟು ಮೀಸಲಾತಿಯನ್ನು ಎಲ್ಲ ಅಲ್ಪ ಸಂಖ್ಯಾತರಿಗೆ ನೀಡಲಾಗುವುದೆಂದು ಅಧಿಸೂಚನೆ ಹೊರಡಿಸಿತು.

ಇದನ್ನು ಆಂಧ್ರಪ್ರದೇಶದ ಹೈಕೋರ್ಟ್ ರದ್ದು ಮಾಡಿತು. ಇದನ್ನು ಪ್ರಶ್ನಿಸಿ ಯುಪಿಎ-2 ಸರಕಾರ ಸುಪ್ರಿಂಕೋರ್ಟಿಗೆ ಹೋಯಿತು. ಸುಪ್ರಿಂ ಕೋರ್ಟ್ ಐಐಟಿ ಮುಂತಾದ ಕೇಂದ್ರೀಯ ಶಿಕ್ಷಣ ಸಂಸ್ಥೆಗಳಲ್ಲಿ ಅಲ್ಪಸಂಖ್ಯಾತರಿಗೆ ಒಬಿಸಿ ಕೋಟಾದೊಳಗೆ ಉಪಕೋಟಾದಂತಹ ಕ್ಲಿಷ್ಟ ಮತ್ತು ಸೂಕ್ಷ್ಮ ವಿಷಯವನ್ನು ಈ ರೀತಿ ಬೇಕಾ ಬಿಟ್ಟಿಯಾಗಿ ನಿರ್ವಹಿಸಬಾರದಿತ್ತು ಎಂದು ಯುಪಿಎ-2 ಸರಕಾರವನ್ನು ತರಾಟೆಗೆ ತೆಗೆದುಕೊಂಡು ಸರಕಾರದ ಈ ನಿರ್ಧಾರಕ್ಕೆ ಆಧಾರವಾದಂತಹ ದಸ್ತಾವೇಜುಗಳನ್ನು ಸಲ್ಲಿಸುವಂತೆ ಹೇಳಿತು. ಸರಕಾರ ಕೆಲವು ದಸ್ತಾವೇಜುಗಳನ್ನು ಸಲ್ಲಿಸಿತು. ಅವುಗಳ ಆಧಾರದ ಮೇಲೆ ಹೈಕೊರ್ಟಿನ ತೀರ್ಪಿಗೆ ತಡೆಯಾಜ್ಞೆ ನೀಡಲು ಸಾಧ್ಯವಿಲ್ಲ ಎಂದ ಸುಪ್ರಿಂ ಕೋರ್ಟ್, ಈ 4.5ಶೇ. ಲೆಕ್ಕಾಚಾರ ಹೇಗೆ ಬಂತು, ಇದಕ್ಕೆ ಮತ್ತು ಈ ಕುರಿತ ಅಧಿಕೃತ ಮೆಮೊಗೆ ಶಾಸನಾತ್ಮಕ ಅಥವ ಸಂವಿಧಾನಾತ್ಮಕ ಬೆಂಬಲವಿದೆಯೇ, ಈ ವಿಷಯದಲ್ಲಿ ರಾಷ್ಟ್ರೀಯ ಅಲ್ಪಸಂಖ್ಯಾತರ ಆಯೋಗ ಮತ್ತು ರಾಷ್ಟ್ರೀಯ ಹಿಂದುಳಿದ ವರ್ಗಗಳ ಆಯೋಗದೊಡನೆ ಸಮಾಲೋಚನೆ ಮಾಡಿಲ್ಲವೇಕೆ ಎಂದು ಪ್ರಶ್ನಿಸಿತು. ಇವೆರಡು ಪ್ರಮುಖ ಶಾಸನಾತ್ಮಕ ಸಂಸ್ಥೆಗಳನ್ನು ಉಪೇಕ್ಷಿಸಿದ್ದೇಕೆ ಎಂದು ನ್ಯಾಯಾಲಯ ಯುಪಿಎ-2 ಸರಕಾರವನ್ನು ಪ್ರಶ್ನಿಸಿದೆ.

ಯುಪಿಎ-2 ಸರಕಾರದ ಉಪಕೋಟಾದ ಈ ಅಧಿಸೂಚನೆ ಹಿಂದುಳಿದ ವರ್ಗಗಳಲ್ಲಿನ ಮುಸ್ಲಿಮರಿಗೂ ವಿರುದ್ಧವಾಗಿದೆ. ಇಂತಹ ಒಂದು ಅತ್ಯಲ್ಪ ಪ್ರಮಾಣದ ಭಾಗ ನೀಡುವಿಕೆಯು ದೊಡ್ಡ ಜನ ಸಂಖ್ಯೆಯ ಮುಸ್ಲೀಮರಿಗೆ ಅನ್ಯಾಯಮಾಡುವ ಅಪಹಾಸ್ಯವಾಗಿದೆ ಎಂದು ಟೀಕಿಸಿದ್ದ ಸಿಪಿಐ(ಎಂ) ತನ್ನ 20ನೇ ಮಹಾಧಿವೇಶನದ ರಾಜಕೀಯ ನಿರ್ಣಯದಲ್ಲಿಯೂ ಅದನ್ನು ಪ್ರಸ್ತಾಪಿಸಿದೆ ಎಂಬುದನ್ನು ಇಲ್ಲಿ ನೆನಪಿಸಿಕೊಳ್ಳಬಹುದು. ರಂಗನಾಥ್ ಮಿಶ್ರಾ ಆಯೋಗ ಶಿಫಾರಸ್ಸು ಮಾಡಿರುವಂತೆ, "ಕೆನೆ ಪದರ" ವನ್ನು ಹೊರತು ಪಡಿಸಿ, ಮುಸ್ಲೀಮರಿಗೆ ಶೇ. 10ರ ಮೀಸಲಾತಿ ನೀಡಬೇಕು, ಈ ಹೆಚ್ಚುವರಿ ಹಂಚಿಕೆಯನ್ನು 'ಓಪನ್ ಕೋಟಾ' ದಿಂದ ಮಾಡಬೇಕು, ಶೇ. 50ರ ಮೀಸಲಾತಿಯ ಮಿತಿಯನ್ನು ಸುಪ್ರೀಂ ಕೋರ್ಟ್ ಹೇಳಿರುವುದರಿಂದ ಇದಕ್ಕೆ ಸೂಕ್ತವಾದ ಸಂವಿಧಾನ ತಿದ್ದುಪಡಿ ಮಾಡಬೇಕು ಎಂದು ಕೂಡ ಸಿಪಿಐ(ಎಂ) ಹೇಳಿತ್ತು.

ಆದರೆ, ಅಲ್ಪಸಂಖ್ಯಾತರ ಸಮಸ್ಯೆಗಳ ಆಳಕ್ಕೆ ಹೋಗುವ ರಾಜಕೀಯ ಇಚ್ಛೆಯೇ ಇಲ್ಲದ ಯುಪಿಎ-2 ಸರಕಾರ ಸಾಚಾರ್ ಮತ್ತು

ಪುಟ 14ಕ್ಕೆ

ಆಹಾರ ಧಾನ್ಯಗಳ ದಾಸ್ತಾನು 7.11 ಕೋಟಿ ಟನ್ ಬಡವರಿಗೆ ಹಂಚಬಾರದೇಕೆ?

ಮೇ 2012ರಲ್ಲಿ ಕೇಂದ್ರ ಸರಕಾರದ ಗೋದಾಮುಗಳಲ್ಲಿ ಆಹಾರಧಾನಗಳು ಒಟ್ಟು ದಾಸ್ತಾನು 7.11 ಕೋಟಿ ಟನ್‌ಗಳನ್ನು ತಲುಪಿದೆ. ಇದು ಕೇಂದ್ರ ದಾಸ್ತಾನಿನಲ್ಲಿರಬೇಕಾದ ಸಂಗ್ರಹಕ್ಕಿಂತ 5ಕೋಟಿ ಟನ್‌ಗಳಿಗೂ ಹೆಚ್ಚು. ಇವುಗಳಲ್ಲಿ ಬಹುಪಾಲು ಸಾಕಷ್ಟು ಸಂಗ್ರಹ ವ್ಯವಸ್ಥೆಯಿಲ್ಲದೆ ಕೊಳೆಯುತ್ತಿವೆಯಂತೆ. ಆದರೂ ಸರಕಾರ ಈ ಹೆಚ್ಚುವರಿ ಗೋದಿ ಮತ್ತು ಅಕ್ಕಿ ದಾಸ್ತಾನುಗಳನ್ನು ಅಗ್ಗ ದರಗಳಲ್ಲಿ ಬಡವರಿಗೆ ಮತ್ತು ಅಪೌಷ್ಟಿಕತೆಯಿಂದ ನರಳುತ್ತಿರುವವರಿಗೆ ಅಗ್ಗ ದರಗಳಲ್ಲಿ ಹಂಚಿ ಎಂಬ ಬೇಡಿಕೆಯನ್ನು ಒಪ್ಪಿಕೊಳ್ಳಲು ಈಗಲೂ ಸಿದ್ಧವಿಲ್ಲ. ಈ ಸಬ್ಸಿಡಿ ಸಾಧ್ಯವಿಲ್ಲ ಎನ್ನುವ ಅದು, ಬದಲಿಗೆ ಖಾಸಗಿಯವರಿಗೆ 'ಉತ್ತೇಜಕ'ಗಳನ್ನು ನೀಡಿ ಅವನ್ನು ರಫ್ತು ಮಾಡುವ ಬಗ್ಗೆ ಯೋಚಿಸುತ್ತಿದೆಯಂತೆ.


ಈ ಹೆಚ್ಚುವರಿ ದಾಸ್ತಾನನ್ನು ಕೊಳೆಯಲು ಬಿಡುವ ಬದಲು, ಅಥವ ಖಾಸಗಿಯವರಿಗೆ ಸಬ್ಸಿಡಿ ಕೊಟ್ಟು ರಫ್ತು ಮಾಡುವ ಬದಲು ಸಾರ್ವಜನಿಕ ವಿತರಣಾ ವ್ಯವಸ್ಥೆಯಲ್ಲಿ ವಿವಿಧ ವಿಶೇಷ ಸ್ಕೀಮುಗಳ ಅಡಿಯಲ್ಲಿ ಬರಪೀಡಿತ ಪ್ರದೇಶಗಳಿಗೆ ಮತ್ತು ದಟ್ಟ ದರಿದ್ರ ಜನಸಮೂಹಗಳಿಗೆ ಬಿಪಿಎಲ್ ದರಗಳಲ್ಲಿ ಹಂಚಬೇಕು ಎಂದು ಸಿಪಿಐ(ಎಂ) ಕೇಂದ್ರ ಸಮಿತಿ ಮತ್ತೊಮ್ಮೆ ಯುಪಿಎ-2 ಸರಕಾರವನ್ನು ಆಗ್ರಹಿಸಿದೆ.

ಭಾರತದಲ್ಲಿ ವಿದೇಶ – ಖಾಸಗಿ ವಿವಿ......

ಪುಟ 2 ರಿಂದ

ಉಪಕುಲಪತಿ, ಇವರ ನೇಮಕ ಸರ್ಕಾರದ ಶಿಫಾರಸ್ಸಿನ ಮೇಲೆ, ಅಧಿಕಾರ ರಾಜ್ಯಪಾಲರದೇ.

ಕರ್ನಾಟಕದಲ್ಲಿ ಮತ್ತೊಂದು ಖಾಸಗಿ ವಿ.ವಿ.ಯುಸಸ ಫೌಂಡೇಷನ್ ಫಾರ್ ಎಜುಕೇಷನ್ ಫಾರ್ ಆಲ್ ಎಂಬ ಹೆಸರಿನ ಸಂಸ್ಥೆಯ ಅಧ್ಯಕ್ಷ ಡಾ. ಮಹಲಿಂಗ ಸ್ವಾಮಿ ಸಾರ್ವಜನಿಕ-ಖಾಸಗಿ ಸಹಭಾಗಿತ್ವದಲ್ಲಿ "ನೆಲಮಂಗಲದ ಬಳಿ" ರಾಷ್ಟ್ರೀಯ ವಿಜ್ಞಾನ ವಿಶ್ವವಿದ್ಯಾಲಯ ಸ್ಥಾಪಿಸಲು ಸರ್ಕಾರದ ಜೊತೆ ಒಪ್ಪಂದ ಮಾಡಿಕೊಂಡಿದ್ದು, ಜೂನ್ 7–8 ರಂದು ನಡೆಯುವ ಜಾಗತಿಕ ಹೂಡಿಕೆದಾರರ ಸಮಾವೇಶದಲ್ಲಿ ಮುಂದಿನ ಪ್ರಕ್ರಿಯೆಗಳನ್ನು ಪೂರ್ಣಗೊಳಿಸಲಿದ್ದಾರೆ ಎಂದು ವರದಿಯಾಗಿತ್ತು.



ಖಾಸಗಿ ವಿ.ವಿ. ಮುಖ್ಯಾಂಶಗಳು

1. 100 ಕೋಟಿ ರೂಪಾಯಿ ವೆಚ್ಚದಲ್ಲಿ ವಿ.ವಿ.ಅಸ್ಥಿತ್ವಕ್ಕೆ.
2. 50 ಎಕರೆ ವಿಸ್ತಿರ್ಣದಲ್ಲಿ ವಿವಿ ಕ್ಯಾಂಪಸ್ ನಿರ್ಮಾಣ.
3. 2013 ರಲ್ಲಿ ವಿಶ್ವವಿದ್ಯಾಲಯಕ್ಕೆ ಅಧಿಕೃತ ಚಾಲನೆ ಗುರಿ.
4. 10 ವರ್ಷಗಳಲ್ಲಿ 500 ಕೋಟಿ ವೆಚ್ಚ ಯೋಜನೆ.
5. ಸರ್ಕಾರ ಭೂಮಿ ನೀಡುವ ಭರವಸೆಯನ್ನು ಈಗಾಗಲೇ ನೀಡಿದೆ.

Foreign education Institution (Reglation of Entry and Operetion) Bill-2010 ಅನುಮೋದನೆ

ಭಾರತದಲ್ಲಿ ಶೈಕ್ಷಣಿಕ ಕ್ಷೇತ್ರ ವಿದೇಶಿಯವರಿಗೆ ಪ್ರವೇಶ ನೀಡುವ ಮಸೂದೆಯನ್ನು ಕೇಂದ್ರ ಸರ್ಕಾರ ಸಚಿವ ಸಂಪುಟದಲ್ಲಿ ಅನು ಮೋದನೆ ನೀಡಿದೆ. ಇದು ಬಹುರಾಷ್ಟ್ರೀಯ ಕಂಪನಿ, ವಿದೇಶಿ ನೇರ ಹೂಡಿಕೆದಾರರಿಗೆ ಅದರಲ್ಲೂ USA, ಐರೋಪ್ಯ ರಾಷ್ಟ್ರಗಳಿಗೆ ಮುಕ್ತಗೊಳಿಸಲು ಮುಂದಾಗಿದೆ. ವಿದೇಶದಲ್ಲೂ ಸಹ ಉನ್ನತ ಶಿಕ್ಷಣಡ ವಿಜ್ಞಾನ, ತಂತ್ರಜ್ಞಾನ ಮತ್ತು ಸಂಶೋಧನೆಗೆ ಅಲ್ಲಿನ ಸರ್ಕಾರಗಳೇ ಹಣ ಹೂಡುತ್ತವೆಯೇ ಹೊರತು ಖಾಸಗಿಯವರಲ್ಲ. ಅಣುವಿಜ್ಞಾನ, ಬಾಹ್ಯಾಕಾಶ, ಔಷಧಿ, ರಕ್ಷಣಾ ತಂತ್ರಜ್ಞಾನ, ಈ ಸಂಶೋಧನೆಯಲ್ಲಿ ಪೇಟೆಂಟ್ ಮಾಡಿ ಕೊಂಡು ಬೌದ್ಧಿಕ ಮತ್ತು ಆರ್ಥಿಕ ವಸಹತು ಗಳನ್ನಾಗಿ ಭಾರತದಂತಹ ರಾಷ್ಟ್ರಗಳನ್ನು ಬಲಿಕೊಡುತ್ತವೆ.

ಅಮೇರಿಕಾದ ಹೆಸರಾಂತ MIT, ಹಾರ್ವರ್ಡ್, ಯೇಲ್, ಸ್ಯಾನ್‌ಫ್ಲೋರ್ಡ್, ಕೆಲ್ಲೋಗ್, ಹಾಪ್‌ಕಿನ್ಸ್ ಮೆಡಿಕಲ್ ಇನ್‌ಸ್ಟಿಟ್ಯೂಟ್‌ನಂಥ ವಿ.ವಿ. ಗಳು ಭಾರತದಲ್ಲಿ ತಮ್ಮ ಶಾಖೆ (ಕ್ಯಾಂಪಸ್) ಪ್ರಾರಂಭಿಸುವುದಿಲ್ಲ. ಬದಲಿಗೆ ಭಾರತಕ್ಕೆ ಬರಲು ತುದಿಗಾಲಲ್ಲಿ ನಿಂತಿರುವುದು ಕಳಪೇ ಗುಣಮಟ್ಟದ ಕಾರಣಕ್ಕಾಗಿ ಆ ದೇಶಗಳಿಂದಲೇ ತಿರಸ್ಕರಿಸಲ್ಪಟ್ಟ ವಿ.ವಿ.ಗಳಾದ ಮತ್ತು ಮೂರನೇ ದರ್ಜೆ ವಿ.ವಿ.ಗಳಾದ – ರಾಜಕಾರಣಿ ಗಳಿಗೆ ಡಾಕ್ಟರೇಟ್ ಕೊಟ್ಟ ಅಡ್ರೆಸ್‌ಗಳಿಲ್ಲದ ವಿ.ವಿ.ಗಳಾದ "ಫೀನಿಕ್ಸ್ ಆನ್ ಲೈನ್, ಸುಲ್ಲಿವನ್, ಗಾಥರ್ ಕಾಲೇಜ್, ಸೋಜರ್ನರ್ ಕಾಲೇಜ್" ಮುಂತಾದವು.



ವಿದೇಶಿಯ ವಿ.ವಿ.ಯಾದ ಅಮೇರಿಕಾದ 'ಡ್ಯೂಕ್' ವಿ.ವಿ. ಭಾರತದಲ್ಲಿ ಎಂ.ಬಿ.ಎ. ಪರವಾನಿಗೆ ಕೇಳುತ್ತಿದೆ. ಶ್ಯೂಲಜ್ ಸ್ಕೂಲ್ ಆಫ್ ಬಿಸಿನೆಸ್, ನ್ಯೂಕ್ಯಾಸಲ್ ಬಿಸಿನೆಸ್, ಮೆರಿಟ್‌ಸ್ವಿಸ್ ಏಶಿಯನ್ ಸ್ಕೂಲ್ ಆಫ್ ಹೋಟೇಲ್ ಮ್ಯಾನೇಜ್‌ಮೆಂಟ್ ಇತ್ಯಾದಿಗಳು ವಿದೇಶಿ ವಿ.ವಿ.ಗಳು ಆಸಕ್ತಿ ಹೊಂದಿರುವ ವಲಯ ಹೋಟೆಲ್ ಮ್ಯಾನೆಜ್ ಮೆಂಟ್ ಮತ್ತು ಬಿಸಿನೆಸ್ ಅಡ್‌ಮಿನಿಸ್ಟ್ರೇಷನ್ ವಲಯಗಳೇ ಹೊರತು ಭಾರತೀಯ ಸಮಾಜ, ಭಾಷೆ, ವಿಜ್ಞಾನ, ಬುಡಕಟ್ಟು, ಸಂಸ್ಕೃತಿ, ಮೂಲಭೂತ ಸೌಲಭ್ಯ, ರೈತ, ಅರೋಗ್ಯ ಅಧ್ಯಯನಗಳಲ್ಲ.

ಸರ್ಕಾರದ ಎಲ್ಲಾ ಯೋಜನೆ ಅದರಲ್ಲೊ, ಶಿಕ್ಷಣ ಉದ್ಯೋಗ, ಆರೋಗ್ಯ ಕ್ಷೇತ್ರಕ್ಕೇ ಖಾಸಗಿ ಸಹಯೋಗ `Public Privte Partner Ship(PPP)ಕ್ಕೆ ಮುಂದಾಗಿವೆ. ಕನಿಷ್ಠ 50 ಕೋಟಿ ರೂ ಬಂಡವಾಳ ಹೂಡಿಕೆ ಮಾಡಿದಲ್ಲಿ ಅವರಿಗೆ, ಕಟ್ಟಡ, ಭೂಮಿ, ನೀರು, ವರಮಾನ, ತೆರಿಗೆ ವಿದ್ಯುತ್, ವಿದ್ಯುತ್ ಹೀಗೆ ಎಲ್ಲಾ ಹಂತದಲ್ಲೂ ತೆರಿಗೆ ರಿಯಾಯಿತಿ ಸಬ್ಸೀಡಿ ಪಡೆಯುತ್ತಿವೆ. ಇದು ಕೇವಲ ಶಿಕ್ಷಣ ಕ್ಷೇತ್ರದ ದುರಂತ ಮಾತ್ರವಲ್ಲ ವಿದ್ಯುತ್ ಕ್ಷೇತ್ರದಲ್ಲಿ ಕೊಜೆಂಟ್ರಿಕ್ಸ್, ಎನ್ರಾನ್‌ಗಳು, ಹಣಕಾಸು ಕ್ಷೇತ್ರದಲ್ಲಿ ಜೆ.ಪಿ.ಮೋರ್ಗಾನ್, ಗೋಲ್ಡ್‌ಮಾನ್‌ನ್ಯಾಶ್‌ಗಳು, ಉತ್ಪಾದನಾ ಕ್ಷೇತ್ರದ ಯೂನಿಯನ್ ಕಾರ್ಬೈಡ್ ಸಹ ಭಾರತದಲ್ಲಿ ವಿದೇಶಿ ಮತ್ತು ಖಾಸಗೀ ಕರಣದ ಭಾಗವಾಗಿ ಭಾರತದಲ್ಲಿ ಹಣಕಾಸು ಹೂಡಿಕೆ ಮಾಡಿವೆ. ಇದೀಗ ಸರ್ಕಾರಿ ಶಾಲೆಗಳು ಮುಚ್ಚುತ್ತಿರುವಂತೆ ಸರ್ಕಾರಿ ವಿ.ವಿ.ಗಳು ಮುಚ್ಚಿ, ಖಾಸಗಿ ಮತ್ತು ವಿದೇಶಿ ವಿ.ವಿ. ಗಳು ಪ್ರವರ್ಧಮಾನಕ್ಕೆ ಬಂದಲ್ಲಿ ಏನೂ ಆಶ್ಚರ್ಯವಿಲ್ಲ. ●

ಯುಪಿಎ ದರ್ಬಾರ್

ರಂಗನಾಥ-ಮಿಶ್ರಾ ಆಯೋಗಗಳ ವರದಿಗಳನ್ನು ಮತ್ತು ಈ ಬಗ್ಗೆ ಸಿಪಿಐ(ಎಂ)ನಂತಹ ಪಕ್ಷಗಳ ಅಭಿಪ್ರಾಯಗಳನ್ನು ಉಪೇಕ್ಷಿಸಿದ ಫಲವಾಗಿ ಈಗ ನ್ಯಾಯಾಲಯದಲ್ಲಿ ಇಂತಹ ಪ್ರಶ್ನೆಗಳನ್ನು ಎದುರಿಸಬೇಕಾಗಿ ಬಂದಿದೆ.

ರೈಲ್ವೆ ಪಾರ್ಸೆಲ್ ದರಗಳಲ್ಲಿ 25ಶೇ. ಏರಿಕೆ

ಪ್ರಯಾಣ ದರಗಳನ್ನು ಏರಿಸಿ, ಆ ಬಗ್ಗೆ ಯುಪಿಎ ಅಂಗಪಕ್ಷದೊಳಗೇ ಕಿತ್ತಾಟ ನಡೆದು, ರೈಲ್ವೆ ಮಂತ್ರಿಗಳೇ ಬದಲಾವಣೆಗೊಂಡು ಬಹಳ ತಿಂಗಳೇನೂ ಆಗಿಲ್ಲ. ಈ ನಡುವೆ ಮೂರು ಅಪಘಾತಗಳು 30 ಜನರನ್ನು ಬಲಿ ತೆಗೆದುಕೊಂಡು ರೈಲ್ವೇ ಇಲಾಖೆ ಸುದ್ದಿಯಲ್ಲಿತ್ತು. ಈಗ ಸದ್ದಿಲ್ಲದೆ ಪಾರ್ಸೆಲ್ ದರಗಳನ್ನು 25 ಶೇ.ದಷ್ಟು ಏರಿಸಲಾಗಿದೆ. ಇದು ಔಷಧಿಗಳು, ಮೀನು, ಟೈರುಗಳು, ಸುದ್ದಿಪತ್ರಿಕೆಗಳು ಇತ್ಯಾದಿಗಳ ಬೆಲೆಗಳ ಮೇಲೆ ಪ್ರಭಾವ ಬೀರಲಿದೆ ಎಂದು ಹೇಳಲಾಗಿದೆ.

ರೈಲ್ವೇ ಇಲಾಖೆ ಇದೇ ಮಾರ್ಚ್ ತಿಂಗಳಲ್ಲಿ ಸಾಗಾಣಿಕೆ ದರಗಳಲ್ಲಿ 30ಶೇ. ಹೆಚ್ಚಳ ಮಾಡಿತ್ತು, ಆಗಲೂ ಸದ್ದಿಲ್ಲದೆ, ಪ್ರಯಾಣ ದರಗಳ ಏರಿಕೆಯ ಬಗ್ಗೆ ರಾಜಕೀಯ ಸದ್ದು ಮಾಡುವ ಸ್ವಲ್ಪ ಮೊದಲು. ಈಗ ಈ ಏರಿಕೆ ಸಾಗಾಣಿಕೆ ದರಗಳು ಮತು ಪಾರ್ಸೆಲ್ ದರಗಳಲ್ಲಿನ ವ್ಯತ್ಯಾಸದ ಪ್ರಯೋಜನ ಪಡೆಯಲು ಧಾನ್ಯ ಮುಂತಾದವು ಗಳನ್ನೂ ಪಾರ್ಸೆಲ್‌ಗಳಾಗಿ ಕಳಿಸುತ್ತಿದ್ದುರಿಂದ ಇವುಗಳಲ್ಲಿ 'ಸಾಮ್ಯತೆ'ಯನ್ನು ತರಲು ಈ ದರ ಏರಿಕೆ ಮಾಡಲಾಗಿದೆ ಎಂದು ಯುಪಿಎ ಸರಕಾರದ ರೈಲ್ವೆ ಇಲಾಖೆ ಸಮರ್ಥಿಸಿಕೊಂಡಿದೆ. ಈ ಏರಿಕೆಯಿಂದ ರೈಲ್ವೆ ಇಲಾಖೆ ಔಷಧಿ ಮುಂತಾದವುಗಳ ಬೆಲೆಗಳ ಏರಿಕೆಯ ಮೂಲಕ ಜನಸಾಮಾನ್ಯರಿಂದ 370 ಕೋಟಿ ರೂ. ಹೆಚ್ಚುವರಿ ಆದಾಯ ಪಡೆಯಲಿದೆ.

ಭೂಸುಧಾರಣಾ ಮಂಡಳಿ:

4 ವರ್ಷಗಳಲ್ಲಿ ಒಂದೂ ಸಭೆಯಿಲ್ಲ

2007ರಲ್ಲಿ ಪ್ರಧಾನ ಮಂತ್ರಿಗಳು ತನ್ನದೇ ಅಧ್ಯಕ್ಷತೆಯಲ್ಲಿ ರಾಷ್ಟ್ರೀಯ ಭೂಸುಧಾರಣಾ ಮಂಡಳಿಯನ್ನು ರಚಿಸಿದರು. ಅದೇ ರೀತಿ ಗ್ರಾಮೀಣಾಭಿವೃದ್ಧಿ ಇಲಾಖೆಯ ಅಡಿಯಲ್ಲಿ ಇನ್ನೊಂದು ಸಮಿತಿಯನ್ನು ರಚಿಸಲಾಗಿತ್ತು. ಆದರೆ ನಾಲ್ಕು ವರ್ಷಗಳೇ ಕಳೆದು ಹೋದರೂ ಈ ನಿಟ್ಟಿನಲ್ಲಿ ಏನೂ ನಡೆದಿಲ್ಲ ಎಂದು ಸೋನಿಯಾ ಗಾಂಧಿ ಅಧ್ಯಕ್ಷತೆಯ ರಾಷ್ಟ್ರೀಯ ಸಲಹಾ ಮಂಡಳಿಯ ಸದಸ್ಯೆ ಅರುಣಾ ರಾಯ್ ಬೇಸರ ವ್ಯಕ್ತಪಡಿಸಿದ್ದಾರೆ. ಸರಕಾರ ತನ್ನದೇ ಭರವಸೆಗಳನ್ನು ಈಡೇರಿಸಲು ಏನೂ ಮಾಡದಿದ್ದರೆ ಅತ್ಯಂತ ಉನ್ನತ ಮಟ್ಟದೇ ಅದರ ವಿಶ್ವಾಸಾರ್ಹತೆ ಬುಡಮೇಲಾಗುತ್ತದೆ ಎಂದು ಅವರು ಹೇಳಿದ್ದಾರೆ.

"ಈ ಸರಕಾರಕ್ಕೆ ಪರಮಾಣು ವ್ಯವಹಾರ ನಡೆಸಲಿಕ್ಕೆ, ಭೂಕಬಳಿಕೆಯ ಲಾಬ್ಬಿಗಳ ಮಾತು ಕೇಳಲು ಸಮಯವಿದೆ, ಆದರೆ ತಮ್ಮ ಭೂಹಕ್ಕು ಗಳಿಂದ ವಂಚಿತರಾದ ಬುಡಕಟ್ಟು ಜನಗಳ ನಿಜವಾದ ದೂರುಗಳನ್ನು ಕೇಳಲು ಮಾತ್ರ ಸಮಯವಿಲ್ಲ" ಎಂದು ರಾಷ್ಟ್ರೀಯ ಭೂ ಸುಧಾರಣಾ ಮಂಡಳಿಯ ಒಬ್ಬ ಸದಸ್ಯರಾದ ಪಿ.ವಿ.ರಾಜಗೋಪಾಲ್ ಹೇಳಿದ್ದಾರೆ. ಯುಪಿಎ ಸರಕಾರ ಮತ್ತು ವಿವಿಧ ರಾಜ್ಯ ಸರಕಾರಗಳು ಭೂಸುಧಾರಣಾ ಧೋರಣೆಗಳನ್ನು ಹಿಂದಕ್ಕೊಯ್ಯುವ ಧೋರಣೆಗಳನ್ನು ಕೈಗೊಳ್ಳುತ್ತಿದ್ದಾರೆ. ರೈತರನ್ನು ಅವರ ಭೂಮಿಯಿಂದ ಹೊರಹಾಕಿ ಕಾರ್ಪೊರೇಟ್ ಅವನ್ನೆಲ್ಲ ವಹಿಸಿಕೊಳ್ಳುವಂತೆ ಸೌಲಭ್ಯ ಕಲ್ಪಿಸಿಕೊಡಲಾಗುತ್ತಿದೆ ಎಂದು ಅಖಿಲ ಭಾರತ ಕಿಸಾನ್ ಸಭಾ ಹೇಳಿದೆ.

ಬೆಂಗಳೂರು ಪದವೀಧರ ಕ್ಷೇತ್ರದ ಫಲಿತಾಂಶ:

ಬಿ.ಜೆ.ಪಿ–8468
ಜೆ.ಡಿ.(ಎಸ್)–8224
ಕಾಂಗ್ರೆಸ್–5541
ಲೋಕಸತ್ತಾ–4349
ಸಿ.ಪಿ.ಐ.(ಎಂ)–536

ತಪ್ಪು– ವಿಷಾದ

ಸಂಪುಟ–6, ಸಂಚಿಕೆ–25 ರಲ್ಲಿ ಹಿರಿಯ ಕಮ್ಯುನಿಷ್ಟ್ ನಾಯಕರೂ, ಸ್ವಾತಂತ್ರ್ಯ ಹೋರಾಟಗಾರರೂ ಆಗಿದ್ದ ಕಾಮ್ರೇಡ್. ಬಿ.ವಿ.ಕಕ್ಕಿಲ್ಲಾಯರವರ ಶ್ರದ್ಧಾಂಜಲಿ ಸಲ್ಲಿಕೆಯ ಸುದ್ದಿಯಲ್ಲಿ ನಾಲ್ಕನೆಯ ಪ್ಯಾರದ ಮೊದಲ ಸಾಲನ್ನು "ಅವರೊಬ್ಬ ಚಿಂತಕ. ಹೋರಾಟಗಾರ. ಭಾಷಾವಾರು ಪ್ರಾಂತ್ಯಗಳ ರಚನೆಗಾಗಿ ನಡೆದ ಚಳುವಳಿಯಲ್ಲಿ ಅವರ ಕ್ರಿಯಾಶೀಲತೆ ಸ್ಮರಣೀಯ" ಎಂದು ಓದಬೇಕಾಗಿ ವಿನಂತಿ. ಭಾಷಾವಾರು ಬದಲಿಗೆ ಭ್ರಷ್ಟಾಚಾರ ಎಂದು ಕಣ್ತಪ್ಪಿನಿಂದ ಮುದ್ರಣವಾಗಿದೆ. ತಪ್ಪಿಗೆ ವಿಷಾಧಿಸುತ್ತೇವೆ.

–ಸಂ

ಜನಶಕ್ತಿ
ಕನ್ನಡ ವಾರಪತ್ರಿಕೆ

ಚಳ್ಳಕೆರೆ : ನಿವೇಶನಕ್ಕಾಗಿ ಹೋರಾಟ

ವರದಿ : ಟಿ. ತಿಪ್ಪೇಸ್ವಾಮಿ

ಮೇ 16 ರಂದು ಚಿತ್ರದುರ್ಗ ಜಿಲ್ಲೆಯ ...ಪಿಐ(ಎಂ) ಕಾರ್ಯಕರ್ತರು ನಿವೇಶನ ಸೌಲಭ್ಯ ಕಲ್ಪಿಸಿ ಕೊಡಬೇಕೆಂದು ಆಗ್ರಹಿಸಿ ತಾಲ್ಲೂಕಿನ ಕಾರ್ಮಿಕರು, ಕೃಷಿ ಕೂಲಿಕಾರರು, ರೈತರು ಮತ್ತು ಬಡವರು ಸೇರಿ ತಹಶೀಲ್ದಾರ್ ಅವರಿಗೆ ಮನವಿ ನೀಡಿ 1,348 ನಿವೇಶನಕ್ಕಾಗಿ ಅರ್ಜಿ ಸಲ್ಲಿಸಿದರು.

ಪಟ್ಟಣದ ಶ್ರಮಿಕರ ಭವನದಿಂದ ಹೊರಟ ಪ್ರತಿಭಟನಾಕಾರರು ತಹಶೀಲ್ದಾರ ಕಚೇರಿ ಬಳಿ ಧರಣಿನಡೆಸಿದರು. ಈ ಸಂದರ್ಭದಲ್ಲಿ ಪ್ರತಿಭಟನಾಕಾರರನ್ನುದ್ದೇಶಿಸಿ ಮಾತನಾಡಿದ ಸಿಪಿಐ(ಎಂ) ನ ತಾಲ್ಲೂಕ ಸಮಿತಿ ಕಾರ್ಯದರ್ಶಿ ಟಿ. ತಿಪ್ಪೇಸ್ವಾಮಿಯವರು ಕೇಂದ್ರ ಸರ್ಕಾರ ರಾಜ್ಯ ಸರ್ಕಾರಗಳ ದುರಾಡಳಿತದಿಂದ ಅಕ್ಕಿ, ರಾಗಿ, ಗೋದಿ, ಬೇಳೆ, ಎಣ್ಣೆ, ಸರಕಾರಿ ತಿನ್ನುವ ಅಗತ್ಯ ವಸ್ತುಗಳ ಬೆಲೆಗಳ ಏರಿಕೆಯಿಂದ ಬಡವರು, ಕಾರ್ಮಿಕರು, ಕೃಷಿ ಕೂಲಿ ಕಾರ್ಮಿಕರುರು ಜೀವನ ತುಂಬಾ ಕಷ್ಟವಾಗಿರುವುದರಿಂದ ಇಂತಹ ಸಂದರ್ಭದಲ್ಲಿ ಬಡವರು ಬಾಡಿಗೆ ಮನಿಗಳಿಗೆ ಬಾಡಿಗೆ ಕಟ್ಟಲಾಗದೇ ಬೀದಿ ಬದಿಯಲ್ಲಿ, ಚರಂಡಿಗಳ ಬದಿಯಲ್ಲಿ, ಕೊಳಗೇರಿಯಲ್ಲಿ ಅತ್ಯಂತ ಅಮಾನವೀಯ ಜೀವನ ನಡೆಸಬೇಕಾಗಿದೆ. ಭೂದರೋಡೆ ಕೋರರ ಕೈವಾಡದಿಂದ ರಾಜ್ಯದಲ್ಲಿ



ನಿವೇಶನಗಳನ್ನು ನೀಡಬೇಕೆಂದು ಚಳ್ಳಕೆರೆಯಲ್ಲಿ ಸಿ.ಪಿ.ಐ.(ಎಂ) ಪ್ರತಿಭಟನೆ

ಎಲ್ಲ ನಗರ ಪಟ್ಟಣಗಳಲ್ಲಿ ನಿವೇಶನಗಳ ಬೆಲೆ ಗಗನಕ್ಕೇರಿದೆ ಎಂದು ಹೇಳಿದರು.

ಸುಮಾರು 30 ರಿಂದ 40 ವರ್ಷಗಳಿಂದ ಪುರಸಭೆಯ ಜಾಗದಲ್ಲಿ ಅಂದರೆ ಇಂದಿರಾನಗರ, ಜನತಾಕಾಲೋನಿ, ಚಿತ್ರಯ್ಯನಹಟ್ಟಿ, ಸೋಮೇಶ್ವರನಗರ, ಕಾಟಪ್ಪನಹಟ್ಟಿಯಲ್ಲಿ ಮನೆಗಳನ್ನು ಕಟ್ಟಿಕೊಂಡು ವಾಸಮಾಡುತ್ತಿರುವ ಜನರಿಗೆ ಇಲ್ಲಿಯವರೆಗೂ ಖಾತೆ, ಕಂದಾಯ ಮಾಡಿಕೊಟ್ಟಿಲ್ಲ. ಚುನಾವಣೆಯಲ್ಲಿ ಓಟುಗಳಿಗೆ ಮಾತ್ರ ಜನರ ಬಳಿ ರಾಜಕಾಣಿಗಳು ಬರುತ್ತಾರೆ ವಿನಃ ಈ ಜನರಿಗೆ ಸೌಲಭ್ಯವನ್ನು ಕೊಡಿಸುವುದರಲ್ಲಿ ಮುಂದಾಗುವದಿಲ್ಲ, ಕೆಲವು ವಾರ್ಡ್‌ಗಳಲ್ಲಿ ಕುಡಿಯುವ ಶುದ್ಧ ನೀರು ಇಲ್ಲದೇ ಸಾರ್ವಜನಿಕರು ಹಲವಾರು ಮಾರಣಾಂತಿಕ ಖಾಯಿಲೆಗಳಿಂದ ನರಳುತ್ತಿದ್ದಾರೆ. ಇದರ ಬಗ್ಗೆ ಯಾವ ಪುರಸಭೆಯ ಸದಸ್ಯರು, ಆರೋಗ್ಯ ಇಲಾಖೆಯವರು ಗಮನ ಹರಿಸಿಲ್ಲ ಕೇವಲ ಪುರಸಭೆಯ ಸದಸ್ಯರು ಗುತ್ತಿಗೆ ಕೆಲಸ ಮತ್ತು ಕಳಪೆ ಕಾಮಗಾರಿಗಳಲ್ಲಿ ತಲ್ಲೀನರಾಗಿರುವುದು ಜನರ ಆಕ್ರೋಶಕ್ಕೆ ಕಾರಣವಾಗಿದೆ.

ಹಮಾಲಿ ಕಾಮಿಕರಿಗೆ ರಾಜೀವಗಾಂಧಿ ವಸತಿ ಯೋಜನೆಯಡಿಯಲ್ಲಿ ನಿವೇಶನಗಳು ಮಂಜೂರಾಗಿದ್ದರೂ ಅಧಿಕಾರಿಗಳು ಗಮನ ಹರಿಸದೇ ಇರುವುದು ವಿಷಾದನೀಯವಾಗಿದೆ. 15 ವರ್ಷಗಳ ನಿರಂತರ ಹೋರಾಟಕ್ಕೆ ಈಗ ಮಂಜೂರಾ ಗಿರುವ ಸೌಲಭ್ಯಗಳನ್ನು ಅಧಿಕಾರಿಗಳು ನೀಡದಿರುವ ಕಾರಣ ಮುಂದಿನ ದಿನಗಳಲ್ಲಿ ಉಗ್ರ ಹೋರಾಟ ಮಾಡಬೇಕಾಗುತ್ತದೆ.

ಸುಮಾರು ವರ್ಷಗಳಿಂದ ರೈತರು ಸಾಗುವಳಿ ಮಾಡುತ್ತಿರುವ ಭೂಮಿಯನ್ನು ಅವರಿಗೆ ನೀಡಿ ಬಗರ್ ಹುಕುಂ ಸಾಗುವಳಿ ಚೀಟಿ ನೀಡದೆ ರೈತರಿಂದ ಭೂಮಿಯನ್ನು ಕಿತ್ತುಕೊಳ್ಳಲಾಗುತ್ತಿದೆ.

ಹಗಲಿರುಳು ಕಷ್ಟ ಪಟ್ಟು ದುಡಿಯುತ್ತಿರುವ ಕಾರ್ಮಿಕರಿಗೆ ಸರ್ಕಾರದಿಂದ ಪಿಂಚಣಿ, ಪಿ.ಎಫ್, ಇಎಸ್‌ಐ ಸೌಲಭ್ಯಗಳಿಲ್ಲ ಎಂದು ಆಕ್ರೋಶ ವ್ಯಕ್ತಪಡಿಸಿದರು.

ಕಾರ್ಯಕ್ರಮದಲ್ಲಿ ಬಿ. ನಾಗರಾಜ, ಟಿ.ನಿಂಗಣ್ಣ, ಈ. ನಾಗರಾಜ, ಶಿವಮ್ಮ, ಹೆಚ್.ಓ.ನಾಗರಾಜ, ದುರ್ಗಾವರ ಬೋರಯ್ಯ, ಕೆ.ಬಿ.ಜಯಣ್ಣ, ಎಂ.ನಾಗರಾಜ, ಎಸ್.ರಾಜಣ್ಣ, ಹೆಚ್.ಟಿ.ರಾಜು, ಬಸವಾಜ್ ಮುಂತಾದವರು ಭಾಗವಹಿಸಿದ್ದರು.

ಯುಪಿಎ ಸರ್ಕಾರದ ವಿರುದ್ಧ.......

ಪುಟ 10 ರಿಂದ

ದೇಶವ್ಯಾಪಿ ಚಳುವಳಿ ಹಾಗೂ ವ್ಯಾಪಕ ಪ್ರಚಾರ ನಡೆಸಲು ಹಾಗೂ ಮುಂಬರುವ ಚಳಿಗಾಲದ ಸಂಸತ್ ಅಧಿವೇಶನ ಸಂದರ್ಭದಲ್ಲಿ 'ಗೌರವಧನ' ದ ಆಧಾರದಲ್ಲಿ ಕೆಲಸ ಮಾಡುತ್ತಿರುವ ಎಲ್ಲಾ ವಿಭಾಗದ ನೌಕರರ ಐಕ್ಯ 'ಮಹಾಧರಣಿ' ಯನ್ನು ನವದೆಹಲಿಯಲ್ಲಿ ನಡೆಸಲು ಜನರಲ್ ಕೌನ್ಸಿಲ್ ನಿರ್ಧರಿಸಿದೆ. ಅಲ್ಲದೆ ಎಲ್ಲಾ ಅಸಂಘಟಿತ ಕಾರ್ಮಿಕರ ಕನಿಷ್ಠವೇತನ 10,000 ಕ್ಕಾಗಿ ಹಾಗೂ ಸಾಮಾಜಿಕ ಸುರಕ್ಷಾ ಕಾನೂನಿಗಳಾಗಿ ಆಗ್ರಹಿಸಿ ಮುಂಬರುವ ದಿನಗಳಲ್ಲಿ ಆ ವಿಭಾಗದ ಕಾರ್ಮಿಕರನ್ನು ಚಳುವಳಿಗಿಳಿಸಲು ಜನರಲ್ ಕೌನ್ಸಿಲ್ ತೀರ್ಮಾನಿಸಿದೆ. ನವೆಂಬರ್ 6 ರಂದು ಕಟ್ಟಡ ನಿರ್ಮಾಣ ಕಾರ್ಮಿಕರು ನಡೆಸಲು ನಿರ್ಧರಿಸಿರುವ ದೇಶವ್ಯಾಪಿ ಹೋರಾಟಕ್ಕೆ ಸಭೆ ಬೆಂಬಲ ವ್ಯಕ್ತಪಡಿಸಿತು.

ಆಂಧ್ರಪ್ರದೇಶದ ವಿಶಾಖಪಟ್ಟಣಂ ಸ್ಟೀಲ್ ಪ್ಲಾಂಟ್ ಕಾರ್ಮಿಕರು ನಡೆಸುತ್ತಿರುವ ಐಕ್ಯ ಚಳುವಳಿಗೆ ಹಾಗೂ ತಮಿಳುನಾಡಿನ ವಿವಿಧ ವಿಭಾಗದ ಕಾರ್ಮಿಕರು ನಡೆಸುತ್ತಿರುವ ಹೋರಾಟಗಳಿಗೆ ಜನರಲ್ ಕೌನ್ಸಿಲ್ ತನ್ನ ಬೆಂಬಲ ವ್ಯಕ್ತಪಡಿಸಿದೆ.

ದೇಶದ ವಿವಿದೆಡೆಗಳಲ್ಲಿ ನಡೆಯುತ್ತಿರುವ ಜಾತಿ ತಾರತಮ್ಯ, ದಲಿತರು ಮತ್ತು ಮಹಿಳೆಯರ ಮೇಲಿನ ದಬ್ಬಾಳಿಕೆಗಳ ವಿರುದ್ಧ ಕಾರ್ಮಿಕ ಸಂಘಗಳು ಕಾರ್ಮಿಕರ ನಡುವೆ ಪ್ರಚಾರ ಹಾಗೂ ಹೋರಾಟಗಳನ್ನು ನಡೆಸಬೇಕೆಂದು ಸಭೆಗೆ ವಿಶೇಷವಾಗಿ ಕರೆನೀಡಿದೆ.

2013 ಮಾರ್ಚ್ ಕೊನೆವಾರದಲ್ಲಿ ಸಿಐಟಿಯು 14 ನೇ ಅಖಿಲ ಭಾರತ ಸಮ್ಮೇಳವನ್ನು ನಡೆಸಲು ಈ ಸಭೆ ನಿರ್ಧರಿಸಿದೆ. ಅದಕ್ಕಿಂತ ಪೂರ್ವದಲ್ಲಿ ಎಲ್ಲಾ ರಾಜ್ಯಗಳಲ್ಲಿ ರಾಜ್ಯ ಸಮ್ಮೇಳನಗಳನ್ನು ನಡೆಸಲು ತೀರ್ಮಾನಿಸಿದೆ. ಅಲ್ಲದೆ ಮಾರ್ಚ್ ಒಳಗಾಗಿ ದುಡಿಯುವ ಮಹಿಳೆಯರ ಅಖಿಲ ಭಾರತ ಹಾಗೂ ರಾಜ್ಯ ಸಮಾವೇಶಗಳನ್ನು ನಡೆಸಲು ನಿರ್ಧರಿಸಿದೆ..

ಪ.ಬಂಗಾಳ: ಸರ್ಕಾರಿ ಪ್ರಾಯೋಜಿತ ಹಿಂಸೆ...

ಕಳೆದ 34 ವರ್ಷಗಳಿಂದ ಪ.ಬಂಗಾಳದಲ್ಲಿ ಎಡರಂಗ ಸರ್ಕಾರ ದುಡಿಯುವ ಜನರ ಪರವಾದ ಆಡಳಿತ ನೀಡಿತ್ತು. ಎಡರಂಗ ಸರ್ಕಾರದ ನಂತರ ಈಗ ಆಳುತ್ತಿರುವ ತೃಣಮೂಲ ಕಾಂಗ್ರೆಸ್ ಸರ್ಕಾರ ಕಾರ್ಮಿಕ ಚಳುವಳಿಯನ್ನು ಮುರಿಯುತ್ತೇನೆ ಎನ್ನುವ – ಐತಿಹಾಸಿಕ ಹೋರಾಟಗಳ ಮೂಲಕ ಕಾರ್ಮಿಕ ವರ್ಗ ಗಳಿಸಿಕೊಂಡಿರುವ ಮುಷ್ಕರದ ಹಕ್ಕನ್ನು ಮಾನ್ಯ ಮಾಡುವುದಿಲ್ಲ, ಕಾರ್ಮಿಕರಿಗೆ ಹೋರಾಟ ಮಾಡಲು ಬಿಡುವುದಿಲ್ಲ ಎಂದು ಬಹಿರಂಗ ವಾಗಿಯೇ ಸಾರುವ ತೃಣಮೂಲ ಕಾಂಗ್ರೆಸ್ ಪಕ್ಷದ ಆಡಳಿತ ಬಂದಿದೆ. ಸಿಐಟಿಯುವಿನ ಜನರಲ್ ಕೌನ್ಸಿಲ್ ಸದಸ್ಯರೂ ಸೇರಿದಂತೆ 60 ಕ್ಕಿಂತ ಹೆಚ್ಚಿನ ಮುಖಂಡರೂ ಹಾಗೂ ಕಾರ್ಯಕರ್ತರನ್ನು ಕೊಲೆ ಮಾಡುವ ಮೂಲಕ 70 ದಶಕದಲ್ಲಿ ಹರಿಯಬಿಡಲಾದಂತೆ ಈಗ ಸರ್ಕಾರಿ ಪ್ರಾಯೋಜಿತ ಹಿಂಸೆಯನ್ನು ನಡೆಸಲಾಗುತ್ತಿದೆ. ಸು. 600 ಕ್ಕಿಂತ ಅಧಿಕ ಕಾರ್ಮಿಕ ಸಂಘಗಳ ಕಚೇರಿಗಳನ್ನು ತೃಣಮೂಲ ಕಾಂಗ್ರೆಸ್‌ನ ಗೂಂಡಾಗಳು ವಶಪಡಿಸಿಕೊಂಡಿದ್ದಾರೆ. ಸು. 20 ಸಾವಿರ ಜನರನ್ನು ನಿರಾಶ್ರಿತರ ಶಿಬಿರದಲ್ಲಿ ಭಯ ಭೀತರಾಗಿ ಬದುಕು ಸಾಗಿಸುವ ಸ್ಥಿತಿಗೆ ದೂಡಲಾಗಿದೆ. ಇಂತಹ ಸವಾಲಿನ ಹಾಗೂ ಗಂಭೀರ ಸನ್ನಿವೇಶದಲ್ಲಿ ನಡೆದ ಸಿಐಟಿಯುವಿನ ಜನರಲ್ ಕೌನ್ಸಿಲ್ ಹೋರಾಟ ನಿರತ ಬಂಗಾಳದ ಜನರಿಗೆ ತನ್ನ ಸೌಹಾರ್ದತೆಯನ್ನು ವ್ಯಕ್ತಪಡಿಸಿತು.

2013 ಮಾರ್ಚ್ ಕೊನೆವಾರದಲ್ಲಿ ಸಿಐಟಿಯು 14 ನೇ ಅಖಿಲ ಭಾರತ ಸಮ್ಮೇಳ ವನ್ನು ನಡೆಸಲು ಈ ಸಭೆ ನಿರ್ಧರಿಸಿದೆ. ಅದಕ್ಕಿಂತ ಪೂರ್ವದಲ್ಲಿ ಎಲ್ಲಾ ರಾಜ್ಯಗಳಲ್ಲಿ ರಾಜ್ಯ ಸಮ್ಮೇಳನಗಳನ್ನು ನಡೆಸಲು ತೀರ್ಮಾನಿಸಿದೆ. ಅಲ್ಲದೆ ಮಾರ್ಚ್ ಒಳಗಾಗಿ ದುಡಿಯುವ ಮಹಿಳೆಯರ ಅಖಿಲ ಭಾರತ ಹಾಗೂ ರಾಜ್ಯ ಸಮಾವೇಶಗಳನ್ನು ನಡೆಸಲು ನಿರ್ಧರಿಸಿದೆ.

ಆರೆಸ್ಸೆಸ್/ಬಿಜೆಪಿ......

ಪುಟ 7 ರಿಂದ

1984ರಲ್ಲಿ ಸಿಖ್–ವಿರೋಧಿ ದಂಗೆಗಳು ಇತ್ಯಾದಿ ಇತ್ಯಾದಿ ನೆನಪಿಗೆ ಬರುತ್ತವೆ. ಇಂತಹ ಒಂದು ನಿಲುವು ಕೋಮುವಾದಿ ಶಕ್ತಿಗಳು ಬಯಸುವ ಅಜೆಂಡಾಕ್ಕೆ, ಧ್ರುವೀಕರಣಕ್ಕೆ ಬಲ ತುಂಬುತ್ತದೆಯಷ್ಟೇ.

ಆದರೆ, ಪ್ರಧಾನ ಮಂತ್ರಿಯ ಪೀಠಕ್ಕೆ ಬಿಜೆಪಿ ಮುಖಂಡರ ನಡುವಿನ ಪ್ರಸಕ್ತ ಸ್ಪರ್ಧೆಯಲ್ಲಿ ಕುತೂಹಲಕಾರಿ ಸಂಯೋಜನೆಗಳು ಮೂಡಿ ಬರುತ್ತಿವೆ. ಹಳೆಯ ಪ್ರತಿಸ್ಪರ್ಧಿಗಳು, ಅಂದರೆ ಅಡ್ವಾಣಿ ಮತ್ತು ಮುರಳಿ ಮನೋಹರ ಜೋಷಿ, ಗಡ್ಕರಿ–ಮೋದಿ–ಜೈಟ್ಲಿ ಕೂಟವನ್ನು ಎದುರಿಸಲು ತಮ್ಮ ನಡುವಿನ ಕಿತ್ತಾಟಗಳನ್ನು ಬದಿಗೊತ್ತಿದ್ದಾರಂತೆ. ಅಂತಿಮವಾಗಿ ಏನೇ ನಡೆಯಲಿ, ಇವೆಲ್ಲ ಒಂದು ತೆಲುಗು ಗಾದೆಯನ್ನು ನೆನಪಿಗೆ ತರುತ್ತಿವೆ: ಅಲು ಲೇದು, ಚುಲು ಲೇದು, ಕೊಡುಕು ಪೇರು ಸೋಮಲಿಂಗಂ(ನನಗೆ ಮನೆಯೂ ಇಲ್ಲ, ಹೆಂಡತಿಯೂ ಇಲ್ಲ, ಆದರೆ ಮಗನ ಹೆಸರು ಮಾತ್ರ, ಸೋಮಲಿಂಗಂ).

ಸಾರ್ವತ್ರಿಕ ಚುನಾವಣೆಗಳಿಗೆ ಇನ್ನೂ ಎರಡು ವರ್ಷಗಳಿವೆ. ಬಿಜೆಪಿ ಚುನಾವಣೆಯನ್ನು ಗೆದ್ದೂ ಇಲ್ಲ, ಲೋಕಸಭೆಯಲ್ಲಿ ಒಂದು ಬಹುಮತವನ್ನು ಗಳಿಸುವ ಸಾಧ್ಯತೆಯೂ ಇಲ್ಲ; ಆದರೂ ಪ್ರಧಾನ ಮಂತ್ರಿಯಾಗುವ ಕನಸುಗಳ ಸಂಖ್ಯೆ ಮಾತ್ರ ಏರುತ್ತಲೇ ಇರುವಂತೆ ಕಾಣುತ್ತಿದೆ.

ಶತಮಾನದ ಕೊನೆಯ ಶುಕ್ರ ಸಂಕ್ರಮ

20-21ನೇ ಶತಮಾನ ಬಹುಶಃ ಭೂಮಿ ಮೇಲಿನ ಜೀವಿಗಳಷ್ಟು ಪುಣ್ಯವಂತರು ಬೇರಾವ ಶತಮಾನದಲ್ಲೂ ಇದ್ದಂತೆ ಕಾಣಲಾರರು ಏಕಂದ್ರ ?

ಒಂದನೆಯದಾಗಿ ಊಳಿಗಮಾನ್ಯ ಪದ್ಧತಿ, ವಸಾಹತುಶಾಹಿತ್ವ ಬಿಡಿಸಿಕೊಂಡು ಮಾನವೀಯ ಸಿದ್ಧಾಂತದ ವ್ಯವಸ್ಥೆಯೊಳಗೆ ಬದುಕುತ್ತಿರುವವರು ನಾವು ಮಾತ್ರ. ಭಾರತದ ಜನವಂತೂ ರಾಜ ಪ್ರತ್ಯಕ್ಷ ದೇವತಾ ಎನ್ನುವ ವೈದಿಕ ಸಿದ್ಧಾಂತವನ್ನು ಕಿತ್ತೆಸೆದು ಮಣ್ಣಿನ ಮಕ್ಕಳು, ದಲಿತರ ಮಕ್ಕಳು, ಶೂದ್ರರ ಮಕ್ಕಳು, ಹಿಂದುಳಿದವರು, ಅನಕ್ಷರಸ್ಥರು ಎಲ್ಲರೂ ದೇಶ ಆಳಬಹುದು ಕೇವಲ ಕ್ಷತ್ರಿಯರಲ್ಲ ಎಂದು ರಾಜವಂಶವನ್ನೇ ನಿರ್ವಂಶ ಮಾಡಿ ಆಳತ್ತಿರೋದು ಎಂದಾದರೂ ಇತಿಹಾಸದಲ್ಲಿ ಕೇಳಿದ್ದಿರಾ ? ಆ ಆಳರಸರನ್ನ ಜೈಲಿಗೆ ಕಳಿಸಲೂ ಸಾಮಾನ್ಯ ಜನರಿಗೆ ಶಕ್ತಿ ಬಂದಿರುವುದು ಈ ಶತಮಾನದಲ್ಲೇ. ತಲೆ ಎತ್ತಿ ಗೌರವದಿಂದ ಬದುಕಲು ಅವಕಾಶ ಸಿಕ್ಕಿರುವದೂ ಈ ಶತಮಾನದಲ್ಲೇ.


ಎರಡನೆಯದಾಗಿ ಸರ್ವರಿಗೂ ಸಮಬಾಳು, ಸರ್ವರಿಗೂ ಸಮಪಾಲು ಬೇಕೆಂದು ಸ್ವಾತಂತ್ರ್ಯದ ಹೋರಾಟ, ಸಮಾಜವಾದಕ್ಕಾಗಿ ಕ್ರಾಂತಿಕಾರಿ ಹೋರಾಟವನ್ನು ನಮ್ಮ ಒಂದೇ ಒಂದು ಹಿಂದಿನ ತಲೆಮಾರು ನಡೆಸಿ ಕಷ್ಟ-ನಷ್ಟ ಅನುಭವಿಸಿ, ಸಾವು-ನೋವು ನುಂಗಿ, ಆಳರಸರ ತುಪಾಕಿಗಳಿಗೆ ಎದೆಯೊಡ್ಡಿ, ಜಿಲೆಟಿನ್ ಯಂತ್ರಕ್ಕೆ ಕೊರಳೊಡ್ಡಿ ತ್ಯಾಗ-ಬಲಿದಾನದ ಮೂಲಕ ಸಮಾಜ ಕಟ್ಟಿಯಾಗಿದೆ ಆ ಕಷ್ಟಗಳು ನಮಗಿಲ್ಲ ಎಂತಹ ಅದೃಷ್ಟವಂತರಲ್ಲವೆ? ಇತಿಹಾಸದಲ್ಲಿ ಯಾರದ್ದಾದರೂ ಕಥೆ ಕೇಳಿದ್ದೀರ ?

ಮೂರನೆಯದಾಗಿ 1986 ರಲ್ಲಿ, ಹ್ಯಾಲಿ, 1998ರಲ್ಲಿ ಹಯಾಕುಟಾಕೆ, 2000ದಲ್ಲಿ ಹೇಲ್ಬಾಪ್ ಧೂಮಕೇತುಗಳು ಒಟ್ಟು 3, 1982, 1994, 2008, 2010 ರಲ್ಲಿ 4 ಸಂಪೂರ್ಣ ಸೂರ್ಯ ಗ್ರಹಣಗಳು, 2 ಶುಕ್ರ ಸಂಕ್ರಮ 1968, 1994ರಲ್ಲಿ 2 ಬಾರಿ ಅಷ್ಟಗ್ರಹ ಕೂಟ ನಮಗಲ್ಲದೇ ಬೇರಾವ ಜನಾಂಗಕ್ಕೂ ಸಿಕ್ಕಿರಲು ಸಾಧ್ಯವಿಲ್ಲ ಅದಕ್ಕೆ ನಾವು ಸುವರ್ಣ ಯುಗದಲ್ಲಿ ವಾಸಿಸುತ್ತಿದ್ದೇವೆ ಎಂದು ಹೇಳಿದ್ದು.

ಜಗತ್ತಿನಲ್ಲೆಲ್ಲಾ ಜಾಗತೀಕರಣದ ಹಾವಳಿ, ಭಾರತದ ಜನರ ಮನಸ್ಸಿನಲ್ಲಿ ಸ್ವಾರ್ಥಪರ ಚಿಂತನೆಯನ್ನು ಬಿತ್ತುತ್ತಿರುವುದು, ಜನರ ಆಸ್ತಿಯೆಲ್ಲಾ ಖಾಸಗಿ ಬಂಡವಾಳಗಾರ ಕೈಗೆ ಹೋಗುತ್ತಿರುವುದು ನೋಡಿದರೆ ಜನಸಾಮಾನ್ಯ ಬದುಕಿನ ಭವಿಷ್ಯವೇನು ? ಮುಂದಿನ ಶತಮಾನ ಜನ ಸಾಮಾನ್ಯರಿಗೆ ಈಗಿನ ಜನರಿಗಿದ್ದಷ್ಟು ಆತ್ಮ ಗೌರವ ಉಳಿಸುತ್ತದೆಯೇ ಎಂಬ ಪ್ರಶ್ನೆಗಳನ್ನು ಎಬ್ಬಿಸಿದೆ. ಅದಕ್ಕೇ ಈ ಶತಮಾನ ಪುಣ್ಯವಂತರದ್ದು ಎಂದು ಹೇಳಿದ್ದು.

ಜೂನ್ ತಿಂಗಳು ಹಲವಾರು ಸಂಕ್ರಮಗಳ ಸಂಗಮ ಮಕ್ಕಳ ರಜೆ ಮತ್ತು ಶಾಲಾರಂಭದ ಸಂಕ್ರಮ ಜೂನ್ 1, ಮಾನವನ ಉಳಿವಿಗೆ ಪರಿಸರ ಉಳಿಸಲು ತೀರ್ಮಾನ ತೆಗೆದುಕೊಳ್ಳುವ ಸಂಕ್ರಮ ಜೂನ್ 5, ಇದರ ಬಗ್ಗೆಯೇ ಗಂಭೀರ ಚರ್ಚೆ ಮಾಡಿ ಭೂಮಿ ರಕ್ಷಣೆಗೆ ತೀರ್ಮಾನ ತೆಗೆದುಕೊಳ್ಳಲು ಜಗತ್ತಿನ ಬೇರೆ ಬೇರೆ ದೇಶದ ಪರಿಸರ ವಿಜ್ಞಾನಿಗಳು ಬ್ರೆಜಿಲ್ ದೇಶದ ರಿಯೋ ನಗರದಲ್ಲಿ ಇದೇ ತಿಂಗಳ ಮೂರನೇ ವಾರದಲ್ಲಿ ಸೇರಿಕೊಳ್ಳಲಿದ್ದಾರೆ.

ಇತ್ತ ಸಿದ್ರಾಮಣ್ಣ, ಅದ್ವಾನಿ, ಯಡಿಯೂರಪ್ಪ ಇವರುಗಳ ರಾಜಕೀಯ ಸಂಕ್ರಮವೂ ಉಗ್ರ ಪರೀಕ್ಷೆಗೆ ಈ ತಿಂಗಳಲ್ಲೇ ಸಿಲುಕುತ್ತಿದೆ. ಅಷ್ಟು ಮಾತ್ರ ಅಲ್ಲ ಇಡೀ 21ನೇ ಶತಮಾನದ ಜನರಿಗೆ ಮಾತ್ರ ನೋಡಿ ಆನಂದಿಸಲಿಕ್ಕೆ ಸಾಧ್ಯ ಇರೊ ಘಟನೆಯೂ ಕೂಡ ಇದೇ ತಿಂಗಳಲ್ಲಿ ನಡೆದಿದೆ, ಜೂನ್ 6 ಶುಕ್ರ ಸಂಕ್ರಮ ಇದರ ಆಳ, ಅಗಲ, ಅಳೆಯಲಿಕ್ಕೆ ಸಾವಿರಾರು ವಿಜ್ಞಾನಿಗಳು ಜಗತ್ತಿನ ಮೂಲೆ ಮೂಲೆಗೆ ತೆರಳಿ ಆಯಕಟ್ಟಿನ ಜಾಗ



ಹಿಡ್ಕೊಂಡು, ಟೆಲೆಸ್ಕೋಪಿಗೆ ಲೆನ್ಸ್ ಸಿಕ್ಕಿಸಿಕೊಂಡು ಕಾಯ್ತಾ ಕುಳಿತುಕೊಂಡು ಕರಿ ಶುಕ್ರನ್ನ ಸೆರೆ ಹಿಡಿದು ಆನಂದಿಸಿದರು. ಇದು ಬೆಳಗಿನ 3.39ಕ್ಕೆ ಆಸ್ಟ್ರೇಲಿಯದ ಅಡಿಲೇಡಿನಲ್ಲಿ ಮೊದಲ ಸಂಕ್ರಮದ ಹಾದಿ ಹಿಡಿದ ಶುಕ್ರ ಭಾರತದಲ್ಲಿ ಸೂರ್ಯೋದಯದ ಜೊತೆಯಲ್ಲೇ ಬೆಳಗಿನ 6.12ಕ್ಕೆ ಪಾದಾರ್ಪಣೆ ಮಾಡಿತು. ದೇಶಾದ್ಯಂತ ಜನ ಈ ಶುಕ್ರನ ಶತಮಾನದ ಕೊನೆಯ ಸಂಕ್ರಮವನ್ನು ನೋಡಿ ಸಂಭ್ರಮಿಸಿದರು. ಬೆಳಗ್ಗಿನ 10.22ರ ಸುಮಾರಿಗೆ ಸೂರ್ಯನಂಗಳವನ್ನು ದಾಟಿ ಶುಕ್ರ ಮರೆಯಾಗುವುದರೊಂದಿಗೆ ಈ ಸಂಕ್ರಮಣಕ್ಕೆ ತೆರೆ ಬಿದ್ದಿತು.

ವಾಸ್ತವದಲ್ಲಿ ಸೂರ್ಯ ಗ್ರಹಣದಷ್ಟು ಮನೋರಂಜನೆ ಶುಕ್ರ ಸಂಕ್ರಮ ಜನರಿಗೆ ನೀಡುವುದಿಲ್ಲ ನಿಜ. ಆದರೆ ಕಾಲ ಮತ್ತು ಆಕಾಶದ ನಿಗೂಢ ಪ್ರಶ್ನೆಗಳಿಗೆ ಇದರಷ್ಟು ಬಲವಾದ ಸಾಕ್ಷ್ಯಗಳನ್ನು ಯಾವ ಗ್ರಹಣಗಳೂ ನೀಡಲಾರದು.

ಶುಕ್ರ ಸಂಕ್ರಮದ ಇತಿಹಾಸ

ಡಿಸೆಂಬರ್ 4, 1639ರಂದು ಸಂಭವಿಸಿದ ಶುಕ್ರ ಸಂಕ್ರಮವನ್ನು ಇಂಗ್ಲೆಂಡಿನಲ್ಲಿ ಜೆರೇಮಿಯ ಹೊರಾಕ್ಸ್ ಮತ್ತು ಅವನ ಗೆಳೆಯ ವಿಲಿಯಂ ಕ್ಯಾಬ್ಟರಿ ಬೇರೆ ಬೇರೆ ಸ್ಥಳಗಳಲ್ಲಿ ನೋಡಿ ಶುಕ್ರ ಗ್ರಹದ ದೂರ ಮತ್ತು ವ್ಯಾಸವನ್ನು ಲೆಕ್ಕಾಚಾರ ಮಾಡಿ 1ಆರ್ಕ್ಮಿನಿಟ್ ಅಂತ ಮೊದಲು ದಾಖಲಿಸಿದ್ರು. ಇವರೇ ಶುಕ್ರನ ಚಲನ ವಲನ ವೀಕ್ಷಿಸಿ ಪ್ರತಿ ಶುಕ್ರ ಸಂಕ್ರಮದ ನಂತರ 8 ವರ್ಷಗಳ ಸಡಿಲಿಕೆಯಿಂದ ಇನ್ನೊಂದು ಸಂಕ್ರಮ ನಡೆಯುತ್ತದೆ ಎಂದು ಹೇಳಿದರು.



ಎಡ್ಮಂಡ್ ಹ್ಯಾಲಿ ನ್ಯೂಟನ್ನನ ಆತ್ಮೀಯ ಗೆಳೆಯ ಧೂಮಕೇತುವಿನ ಅಂತರಂಗವನ್ನೆಲ್ಲಾ ಜಾಲಾಡಿ ಅದರ ನಿಗೂಢ ಬಿಡಿಸಿ ಭಯ ಓಡಿಸಿದಾತ ಕೋಪರ್ನಿಕಸನ ಸೂರ್ಯ ಕೇಂದ್ರ ಸಿದ್ಧಾಂತದಿಂದ ಪ್ರೇರಿತನಾಗಿ, ಕೆಪ್ಲರ್ ಮತ್ತು ಬೋಡ್ರ ಗ್ರಹಗತಿ ನಿಯಮಗಳಿಂದ ಉತ್ಸಾಹಿತನಾಗಿ 1677ರ ಬುಧ ಗ್ರಹದ ಸಂಕ್ರಮ ವೀಕ್ಷಿಸಿ, 1716ರಲ್ಲಿ ಶುಕ್ರನ ಹಾದಿಯ ವೈಯಾರವ ತಿಳಿಸುವ ಸುಂದರ ವಿಷಯ ತಿಳಿಸುತ್ತಾನೆ ಸಂಜೆ, ಬೆಳಗ್ಗೆ ಕಾಣುವ ಬಿಳಿ ಚುಕ್ಕಿ 45 ವರ್ಷಗಳ ನಂತರ ಹಾಡು ಹಗಲಲ್ಲೇ ಸೂರ್ಯನ ಮೈಮೇಲೆ ವಿಭಿನ್ನವಾಗಿ ಕಾಣಿಸಿಕೊಳ್ಳಲಿದ್ದಾನೆ. ಜಗತ್ತಿನ ಬೇರೆ ಬೇರೆ ಜಾಗಗಳಿಂದ ಇದರ ಸಂಕ್ರಮ ದಾಖಲಿಸಿದರೆ ಭೂಮಿ-ಶುಕ್ರ, ಭೂಮಿ-ಸೂರ್ಯ, ಸೂರ್ಯ-ಶುಕ್ರರ ನಡುವಿನ ದೂರ ಹಾಗೂ ಗಾತ್ರವನ್ನು ಅಳೆಯಬಹುದು ಎಂದು ಒಂದು ಲೇಖನವನ್ನು ಸಾರ್ವಜನಿಕವಾಗಿ ಬರೆದು ಪ್ರಕಟಿಸುತ್ತಾನೆ. ಈ ಲೇಖನ ಉದಯೋನ್ಮುಖ ವಿಜ್ಞಾನಿಗಳಲ್ಲಿ ಹೊಸ ಉತ್ಸಾಹ ಹುಟ್ಟಿಸುತ್ತದೆ. 1761ರ ಶುಕ್ರ ಸಂಕ್ರಮದ ದಾಖಲಾತಿಗಾಗಿ ವಿಜ್ಞಾನಿಗಳ ದಂಡು ಒಂದೆಡೆ ಸೇರಲು, ಕುಳಿತು ಚರ್ಚಿಸಲು ಅಂದಿನ ಕಾಲಘಟ್ಟದ ಜಾಗತಿಕ ರಾಜಕೀಯ ಪರಿಸ್ಥಿತಿ ಯುದ್ಧೋನ್ಮಾನವಾಗಿತ್ತು, ವಸಹಾತುಶಾಹಿತ್ವ ಯೂರೋಪಿನ ತುಂಬೆಲ್ಲಾ (ಆಗ ಇದ್ದದ್ದು ಯೂರೋಪು ಮಾತ್ರ ಮಿಕ್ಕ ದೇಶಗಳು ನಗಣ್ಯವಾಗಿತ್ತು) ರಕ್ತ ಕಾರಿಸುತ್ತಿತ್ತು. ಆದರೂ ಈ ಸಂಕ್ರಮ ಆ ದೇಶಗಳ ವಿಜ್ಞಾನಿಗಳನ್ನು ಜಗತ್ ಕಲ್ಯಾಣಕ್ಕಾಗಿ ಹೊಟ್ಟೆ ಕಿಚ್ಚು, ಕಾಂಪ್ಲಿಸಿಟಿ, ವೈಮನಸ್ಸು, ಜಗಳಗಳನ್ನೆಲ್ಲಾ ಬದಿಗಿಟ್ಟು ಒಟ್ಟಾಗಿ ಕೆಲಸ ಮಾಡಲು ಅಣಿ ನೆರೆಸಿತು. ಇದಲ್ಲವೆ ಶುಕ್ರ ಸಂಕ್ರಮದ ತಾಕತ್ತು.

ಸಾಕಷ್ಟು ಏಳು-ಬೀಳುಗಳ ನಡುವೆಯೇ ಹ್ಯಾಲಿಯ ಮಾತು ಸುಳ್ಳಾಗದಂತೆ ಸಂಕ್ರಮ 1761ರ ಜೂನ್ 6ರಂದು ಸಂಭವಿಸಿತು ಈ ಸಂಕ್ರಮ ಜಗದ ಉದ್ದಗಲಕ್ಕೂ 150ಕ್ಕೂ ಹೆಚ್ಚು ಕೇಂದ್ರಗಳಲ್ಲಿ ಮೊದಲ ಬಾರಿಗೆ ವೀಕ್ಷಿಸಿ ಅಳತೆ ಮಾಡಲಾಯಿತು. ಈ ಸಂಕ್ರಮ ಭೂಮಿ ಸೂರ್ಯನ ದೂರವನ್ನು ಸುಮಾರು 15 ಕೋಟಿ ಕಿ.ಮಿ.ಗಳು ಎಂದು ಲೆಕ್ಕ ಹಾಕಿ ತೋರಿಸಿತು. ಹಾಗೆಯೇ, ಭೂಮಿ-ಶುಕ್ರ-ಸೂರ್ಯನ ನಡುವಿನ ಅಂತರವನ್ನು 10ಕೋಟಿ ಮತ್ತು 5 ಕೋಟಿ ಕಿ.ಮಿ. ಗಳು ಎಂದು ತಿಳಿಸಿತು. ಇದ್ದಕ್ಕಿದ್ದಂತೆ 8 ವರ್ಷ ಕಳೆದು 1769 ರಲ್ಲಿ ಪುನಃ ಈ ಸಂಕ್ರಮ ಮರುಕಳಿಸಿತು. ಈ ಸಂಕ್ರಮವನ್ನು ಈ ಬಾರಿ ವಿಜ್ಞಾನಿಗಳಲ್ಲದೆ ರಾಜಕಾರಣಿಗಳೂ ಸಹ ವೀಕ್ಷಿಸಿ ಕಥೆ ಬರೆದರು.

1874 ಮತ್ತು 1882ರ ಅವಧಿಯಲ್ಲಿ ಶುಕ್ರ ಸಂಕ್ರಮ ಸಂಭವಿಸುವ ವೇಳೆಗೆ ವಿಜ್ಞಾನ ತಂತ್ರಜ್ಞಾನದ ಹಾದಿ ಹಿಡಿದಿತ್ತು, ವೈಚಾರಿಕತೆ ಯುರೋಪಿನ ನೆಲದಲ್ಲಿ ಪಸರಿಸುತ್ತಿತ್ತು, ಸ್ವಾತಂತ್ರದ ಕೂಗು ಜನಜನಿಸುತ್ತಿತ್ತು, ಪ್ರಜಾಪ್ರಭುತ್ವದ ಸುವಾಸನೆ ಯುಕ್ತ ಗಾಳಿ ಘಮ ಘಮಿಸುತ್ತಿತ್ತು. ನ್ಯೂಟನ್, ಗೆಲಿಲಿಯೋ ತೋರಿಸಿಕೊಟ್ಟ ಆಕಾಶದ ಸಲಕರಣೆಗಳನ್ನೆಲ್ಲಾ ಪ್ರಭುದ್ಧಗೊಳಿಸಿ ಶುಕ್ರ ಸಂಕ್ರಮವನ್ನು ಚಿತ್ರ ಸಮೇತ ದಾಖಲಿಸಿದರು. ಈ ಸಂಕ್ರಮ ಇಡೀ ಸೌರವ್ಯೂಹದ ರಸ್ತೆಯ ಹಾದಿಯ ಕೋನಗಳನ್ನ ಅಳೆದು ಹಾಕಿತು. 8 ವರುಷದ ಸಡಿಲಿಕೆಯ ಸಂಕ್ರಮ 121.5 ಮತ್ತು 105.5 ವರುಷಗಳ ಕರಾರುವಾಕ್ ಅಂತರಗಳಲ್ಲಿ ಶುಕ್ರ ಸಂಕ್ರಮ ಸಂಭವಿಸಿಯೇ ಸಂಭವಿಸುತ್ತದೆಂದು ಆಡುವ ಮಕ್ಕಳು ಲೆಕ್ಕ ಹಾಕಬಹುದಾದ ಕೋಷ್ಟಕ ಸಿದ್ಧಪಡಿಸುವಷ್ಟು ಮಾಹಿತಿಯನ್ನು ಕೊಟ್ಟಿತು.(ಕೆಳಗಿದೆ ನೋಡಿ)

1874ರ ಶುಕ್ರ ಸಂಕ್ರಮವನ್ನು ಮೊದಲು ದಾಖಲಿಸಿದ ಭಾರತದ ಖಗೋಳಜ್ಞ ಎಂದರೆ ಒರಿಸ್ಸಾದ ಪಥಾನಿ ಸಮಂತ ಚಂದ್ರಶೇಖರ್ ಇವರು ಸೂರ್ಯಗ್ರಹಣ ಹಾಗೂ ಶುಕ್ರಸಂಕ್ರಮವನ್ನೂ ಸಹ ಗ್ರಹಣವೆಂದೇ ಕರೆದರು. ಇವೆರೆಡರ ಬಿಂಬದ ಅನುಪಾತವನ್ನು 1/32 ಎಂದು ದಾಖಲಿಸಿ ಈ ಗ್ರಹಗಳ ಗಾತ್ರ ಹಾಗೂ ದೂರಗಳ ವ್ಯತ್ಯಾಸ ಇದೆ ಎನ್ನುವ ಸುಳಿವನ್ನು ಕೊಡುತ್ತಾರೆ.

2004 ಜೂನ್ 8ರ ಶುಕ್ರ ಸಂಕ್ರಮದ ವೇಳೆಗೆ ಜಗತ್ತೆಲ್ಲಾ ವಸಹಾತುಶಾಹಿತ್ವದಿಂದ ಬಿಡಿಸಿಕೊಂಡು 2 ಮಹಾನ್ ಯುದ್ಧ ಮಾಡಿ ಪ್ರಜಾಪ್ರಭುತ್ವದ - ಸಮಜವಾದದ ಸಮಾಜವನ್ನು ಸೃಷ್ಟಿಸಿಕೊಂಡು ಬಿಟ್ಟಿತು. ವಿಜ್ಞಾನ ದಾಪು ಹೆಜ್ಜೆ ಹಾಕಿ ವಿಶ್ವದ ಸೋಜಿಗದ ಮರ್ಮ ಬಿಡಿಸುತ್ತಾ ಸಾಗುತ್ತಿದೆ ಕಂಪ್ಯೂಟರ್, ಇಂಟರ್ನೆಟ್, ಸಿನಿಮಾ, ಟಿ.ವಿ. ಬಂದು ಮನೆ ಮನೆಯಲ್ಲೆ ಶುಕ್ರ ಸಂಕ್ರಮವನ್ನು ಹೆಂಗಸರು-ಮಕ್ಕಳಿಗೆಲ್ಲಾ ತೋರಿಸಿತು.

JANASHAKTHI KANNADA VARA PATRIKE: Printed by G.N.NAGARAJ, No.12, 18th Cross, S.R.Nagar, BANGALORE-560027
Published by: G.N.NAGARAJ, No 12, 18th Cross, S.R.Nagar, BANGALORE-560027, Karnataka on behalf of / owned by COMMUNIST PARTY OF INDIA (MARXIST) and Printed at : Kriya Prakashana, 12, 18th Cross, S.R.Nagar, BANGALORE - 560027 Karnataka (State) and Published at BANGALORE No 12, 18th Cross, S.R.Nagar, BANGALORE-560027 Editor S.Y.GURURSHANTH, No12, 18th Cross, S.R.Nagar, BANGALORE - 560027
Editor: S.Y.GURUSHANTH